


# ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 22 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 97 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4


## ಭಾರತದ ನೂತನ ರಾಷ್ಟ್ರಪತಿ
# ದ್ರೌಪದಿ ಮುರ್ಮು

- ಮುರ್ಮುಗೆ 2161 ಮತಗಳು; ಇವರ ಮತಗಳ ಮೌಲ್ಯ 5,77,777
- ಸಿನ್ಹಾ ಪಡೆದ ಮತ 1058; ಇವರ ಮತಗಳ ಮೌಲ್ಯ 2,61,062



ರಾಷ್ಟ್ರಪತಿಯಾಗಿ ಆಯ್ಕೆಯಾದ ದ್ರೌಪದಿ ಮುರ್ಮು ಅವರನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಆತ್ಮೀಯವಾಗಿ ಅಭಿನಂದಿಸಿದರು.

### ಪ್ರಾಮಾಣಿಕತೆಯ ಪ್ರತಿರೂಪ

1958ರ ಜೂನ್ 20ರಂದು ಒಡಿಸ್ಸಾದ ಮಯೂರ್ ಭಂಜ್ ಜಿಲ್ಲೆಯ ಬೈದಪೋಸಿ ಗ್ರಾಮದಲ್ಲಿ ಸಂತಲಿ ಬುಡಕಟ್ಟು ಜನಾಂಗದಲ್ಲಿ ಜನಿಸಿದ ದ್ರೌಪದಿ ಮುರ್ಮು ಅವರ ತಂದೆ ಬಿರಾಂಚಿ ನಾರಾಯಣ್ ತಡು ಮತ್ತು ತಾತಾ ಸರಪಂಚ್ ಆಗಿದ್ದು, ಗ್ರಾಮದ ಮುಖ್ಯಸ್ಥರಾಗಿದ್ದರು. ಮುರ್ಮು ಅವರು ಭುವನೇಶ್ವರದ ರಮಾದೇವಿ ಮಹಿಳಾ ಕಾಲೇಜಿನಲ್ಲಿ ಕಲಾ ವಿಭಾಗದಲ್ಲಿ ಬಿಎ ಪದವಿ ಪಡೆದ ನಂತರ ಶಾಲಾ ಶಿಕ್ಷಕಿಯಾಗಿ ನಂತರ ಒಡಿಶಾದ ರಾಯ್ ರಾಂಗ್‌ಪುರದ ವಿದ್ಯಾಸಂಸ್ಥೆಯೊಂದರ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. 1997ರಲ್ಲಿ ಬಿಜೆಪಿ ಸೇರ್ಪಡೆಯಾದ ಅವರು, ಬುಡಕಟ್ಟು ಮೋರ್ಚಾ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದ್ದರು. 1997ರಲ್ಲಿ ರಾಯ್‌ರಾಂಗ್‌ಪುರದ ಕೌನ್ಸಿಲರಾಗಿ ಸೇವೆ ಸಲ್ಲಿಸಿದ್ದ ಅವರು, 2000ರಲ್ಲಿ ಒಡಿಶಾ ವಿಧಾನಸಭೆಗೆ ಆಯ್ಕೆಯಾಗಿ ಬಿಜೆಪಿ–ಬಿಜೆಡಿ ಸಮ್ಮಿಶ್ರ ಸರ್ಕಾರದಲ್ಲಿ 2000ದಿಂದ 2002ರವರೆಗೆ ವಾಣಿಜ್ಯ ಮತ್ತು ಸಾರಿಗೆ ಸಚಿವರಾಗಿ 2002ರಿಂದ 2004 ರವರೆಗೆ ಮೀನುಗಾರಿಕೆ ಮತ್ತು ಪ್ರಾಣಿ ಸಂಪನ್ಮೂಲ ಸಚಿವರಾಗಿ ಕಾರ್ಯನಿರ್ವಹಿಸಿದ್ದು, 2007ರಲ್ಲಿ ಒಡಿಶಾ ವಿಧಾನಸಭೆಯಿಂದ ಅತ್ಯುತ್ತಮ ಶಾಸಕಿಯಾಗಿ ನೀಲಕಂಠ ಪ್ರಶಸ್ತಿಗೆ ಭಾಜನರಾದರು. 2014ರಲ್ಲಿ ರಾಯ್‌ರಾಂಗ್‌ಪುರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಬಿಜೆಡಿ ಅಭ್ಯರ್ಥಿ ಎದುರು ಸೋಲನನುಭವಿಸಿದ್ದರು. 2015ರಲ್ಲಿ ಮುರ್ಮು ಅವರನ್ನು ಜಾರ್ಖಂಡ್‌ನ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಯಿತು. 2021ರಲ್ಲಿ ರಾಜ್ಯಪಾಲರ ಅವಧಿ ಮುಗಿದ ನಂತರ ರಾಯ್‌ರಾಂಗ್‌ಪುರದಲ್ಲಿ ▶ 8ನೇ ಪುಟಕ್ಕೆ

**ಹೊಸದಿಲ್ಲಿ, ಜು.21– ದೇಶದ 15ನೇ ರಾಷ್ಟ್ರಪತಿಯಾಗಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ಭಾರೀ ಅಂತರದಿಂದ ಆಯ್ಕೆಯಾಗಿದ್ದಾರೆ. ಈ ಮೂಲಕ ರಾಷ್ಟ್ರಪತಿ ಹುದ್ದೆ ಅಲಂಕರಿಸಿದ ಪ್ರಥಮ ಆದಿವಾಸಿ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.**

ಒಟ್ಟು ಮಾನ್ಯವಾದ ಮತಗಳು 3219 ಆಗಿದ್ದು, ಇದರ ಒಟ್ಟು ಮೌಲ್ಯ 8,38,839ರಷ್ಟಿದೆ. ಈ ಪೈಕಿ ದ್ರೌಪದಿ ಮುರ್ಮು ಅವರು 5,77,777 ಮೌಲ್ಯದ 2161 ಮತಗಳನ್ನು ಪಡೆದಿದ್ದಾರೆ. ಯಶವಂತ್ ಸಿನ್ಹಾ 2,61,062 ಮೌಲ್ಯದ 1058 ಮತಗಳನ್ನು ಪಡೆದಿದ್ದಾರೆ. ರಾಷ್ಟ್ರಪತಿ ಚುನಾವಣೆ ಜು.18ರಂದು ನಡೆದಿತ್ತು. ಇಂದು ಮತ ಎಣಿಕೆ ನಡೆದು, ಫಲಿತಾಂಶ ಹೊರಬಿದ್ದಿದ್ದು, ಮುರ್ಮು ಅವರ ಆಯ್ಕೆಯನ್ನು ಇಂದು ಸಂಜೆ ರಾಜ್ಯಸಭೆ ಪ್ರಧಾನ ಕಾರ್ಯದರ್ಶಿ ಪಿ.ಸಿ.ಮೋದಿ ಅಧಿಕೃತವಾಗಿ ಪ್ರಕಟಿಸಿದರು. ಜು.24 ರಂದು ಹಾಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಅಧಿಕಾರಾವಧಿ ಮುಕ್ತಾಯವಾಗಲಿದ್ದು, ಜು.20 ರಂದು ಮುರ್ಮು ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಚಲಾವಣೆಯಾದ ಮತಗಳಲ್ಲಿ ಮುರ್ಮು ಅವರು ಶೇ.68.87ರಷ್ಟು ಮತ ಪಡೆದರೆ, ವಿಪಕ್ಷಗಳ ಅಭ್ಯರ್ಥಿ ಯಶವಂತ್ ಸಿನ್ಹಾ ಶೇ.31.1ರಷ್ಟು ಮತ ಪಡೆದರು. ಮುರ್ಮು ಅವರಿಗೆ ವಿಪಕ್ಷಗಳ ಮತಗಳು ಕೂಡ ಬಂದಿವೆ. ▶ 8ನೇ ಪುಟಕ್ಕೆ



## 'ಗಜಪಯಣ'ದೊಳಗೆ ಬೇಡಿಕೆ ಈಡೇರದಿದ್ದರೆ
# ದಸರಾ ಬಹಿಷ್ಕಾರ

ವೇತನ ಹೆಚ್ಚಳ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹ

### ಮಾವುತರು, ಕಾವಾಡಿಗಳ ಎಚ್ಚರಿಕೆ...



ಕುಶಾಲನಗರ, ಜು.21 –ವೇತನ ಹೆಚ್ಚಳವೂ ಸೇರಿದಂತೆ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿರುವ ಮಾವುತರು, ಕಾವಾಡಿಗರು ಮತ್ತು ಜಮೆದಾರರು 'ಗಜ ಪಯಣ'ಕ್ಕೂ ಮುನ್ನ ತಮ್ಮ ಬೇಡಿಕೆ ಈಡೇರಿಸದಿದ್ದರೆ ಈ ಬಾರಿಯ ದಸರಾ ಮಹೋತ್ಸವವನ್ನು ಬಹಿಷ್ಕರಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಕರ್ನಾಟಕ ಮಾವುತರು ಮತ್ತು ಕಾವಾಡಿಗರ ಸಂಘದ ರಾಜ್ಯಾಧ್ಯಕ್ಷ ಗೌಸ್‌ಖಾನ್, ಕಾರ್ಯದರ್ಶಿ ಪರ್ವಿನ್ ಖಾನ್ ಅವರ ಸಮ್ಮುಖ ದುಬಾರೆ ಆನೆ ಮಾವುತರು ಮತ್ತು ಕಾವಾಡಿಗರ ಸಂಘದ ಅಧ್ಯಕ್ಷ ಜೆ.ಕೆ.ಡೋಬಿ, ಮತ್ತಿಗೋಡು ಸಾಕಾನೆ ಶಿಬಿರದ ಜೆ.ಕೆ.ವಸಂತ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಗಜಪಯಣ ಆ.7ರಂದು ಆರಂಭವಾಗಲಿದ್ದು, ಆ.5ರೊಳಗೆ ನಮ್ಮ ಬೇಡಿಕೆ ಈಡೇರದಿದ್ದರೆ, ಈ ಬಾರಿಯ ದಸರಾ ಮಹೋತ್ಸವಕ್ಕೆ ಆನೆಗಳನ್ನು ಕರೆತರುವ ಕಾರ್ಯದಿಂದ ದೂರ ಉಳಿಯುವ ಮೂಲಕ ದಸರಾ ಮಹೋತ್ಸವವನ್ನು ಬಹಿಷ್ಕರಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. 1976ರಲ್ಲಿ ಆನೆಗಳ ಮಾವುತರು ಮತ್ತು ಕಾವಾಡಿಗಳ ಸಂಬಳ ಗಾರ್ಡುಗಳು ಮತ್ತು ವಾಚರ್‌ಗಳಿಗಿಂತ ಜಾಸ್ತಿ ಇತ್ತು. ಕಾಲ ಕ್ರಮೇಣ ಗಾರ್ಡುಗಳು ಮತ್ತು ವಾಚರ್‌ಗಳ ಸಂಬಳ ಹೆಚ್ಚಾಗುತ್ತಾ ಹೋಯಿತು. 2000 ಇಸವಿಯಿಂದ ಇಲ್ಲಿಯವರೆಗೂ ತಮ್ಮ ಸಂಬಳ ಹೆಚ್ಚಳ ಸೇರಿದಂತೆ ಇನ್ನಿತರ ಬೇಡಿಕೆ ಈಡೇರಿಸುವಂತೆ ಸಂಬಂಧಪಟ್ಟ ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಮತ್ತು ಅರಣ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿಯೂ ಏನೂ ಪ್ರಯೋಜನವಾಗಿಲ್ಲ ಎಂದು ದೂರಿದ್ದಾರೆ. ಈ ಬಾರಿ ದಸರಾ ಮಹೋತ್ಸವಕ್ಕೆ ದುಬಾರೆ ಸಾಕಾನೆ ಶಿಬಿರದಿಂದ 9 ಆನೆಗಳು ಮತ್ತು ಮತ್ತಿಗೋಡು ಸಾಕಾನೆ ಶಿಬಿರದಿಂದ 4 ಆನೆಗಳು ಆಯ್ಕೆಯಾಗಿದ್ದು, ಅದರಲ್ಲಿ ಅಂತಿಮವಾಗಿ 6–7 ಆನೆಗಳು ದಸರಾ ಮಹೋತ್ಸವಕ್ಕೆ ಆಯ್ಕೆಯಾಗಲಿದೆ. ನಮ್ಮ ಬೇಡಿಕೆ ಈ ಬಾರಿ ಈಡೇರಲೇಬೇಕು. ಇಲ್ಲದಿದ್ದರೆ ನಾವು ನಮ್ಮ ಹೋರಾಟದ ಮುಂದಿನ ಹಾದಿಯನ್ನು ತುಳಿಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಮುನ್ನ ನಮಗೆ ಅರಣ್ಯ ಇಲಾಖೆಯಿಂದ ವಸತಿ ಗೃಹದ ಸೌಲಭ್ಯವಿತ್ತು. ಗಾರ್ಡುಗಳು ಮತ್ತು ವಾಚರ್‌ಗಳ ಸಂಬಳದೊಂದಿಗೆ ನಮಗೆ ನೀಡುತ್ತಿದ್ದ ವಸತಿ ಗೃಹದ ಸೌಲಭ್ಯಗಳನ್ನು ಕಿತ್ತುಕೊಳ್ಳಲಾಗಿದ್ದು, ನಾವುಗಳು ಕಾಡಿನಲ್ಲಿ ಟಾರ್ಪಾಲ್‌ನಿಂದ ಕಟ್ಟಿಕೊಂಡ ಟೆಂಟ್ ಹೌಸ್‌ಗಳಲ್ಲಿ ವಾಸಿಸಬೇಕಾಗಿದೆ ಎಂದು ಕಾವಾಡಿಗರು ಮತ್ತು ಮಾವುತರು ತಮ್ಮ ಸ್ಥಿತಿಯನ್ನು ಸಭೆಯಲ್ಲಿ ತೆರೆದಿಟ್ಟರು. ಪ್ರತೀ ಬಾರಿ ದಸರಾ ಮಹೋತ್ಸವದಲ್ಲಿ ಎರಡು ತಿಂಗಳುಗಳ ಕಾಲ ಭಾಗವಹಿಸುವ ನಮಗೆ ಹೆಚ್ಚುವರಿ ಕೇವಲ 10 ಸಾವಿರ ರೂ.ಗಳನ್ನು ▶ 8ನೇ ಪುಟಕ್ಕೆ

## ಜು.25ರಿಂದ ಕೆಆರ್‌ಎಸ್ ಅಣೆಕಟ್ಟೆ ಸುತ್ತಮುತ್ತಲಿನ ಕಲ್ಲುಗಣಿಗಳಲ್ಲಿ
# ಪರೀಕ್ಷಾರ್ಥ ಸ್ಫೋಟ

ಮೈಸೂರು, ಜು.21(ಆರ್‌ಕೆ)–ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟೆ ಸುತ್ತಲಿನ ಕಲ್ಲುಗಣಿಗಾರಿಕೆ ಸ್ಥಳಗಳಲ್ಲಿ ಪರೀಕ್ಷಾರ್ಥ ಸ್ಫೋಟಕ್ಕೆ (ಟ್ರಯಲ್ ಬ್ಲಾಸ್ಟ್) ಕಡೆಗೂ ದಿನಾಂಕ ನಿಗದಿಯಾಗಿದೆ.

ಜು.25ರಿಂದ 31ರವರೆಗೆ ಪರೀಕ್ಷಾರ್ಥ ಸ್ಫೋಟ ನಡೆಸಲು ನಿರ್ಧರಿಸಲಾಗಿದ್ದು, ಮಂಡ್ಯ ಜಿಲ್ಲಾಡಳಿತವು ಸಿದ್ಧತೆ ನಡೆಸಿದೆ. ಗಣಿಗಾರಿಕೆಯಿಂದ ಕೃಷ್ಣರಾಜಸಾಗರ ಅಣೆಕಟ್ಟೆಗೆ ತೊಂದರೆಯಾಗುತ್ತದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಸ್ಫೋಟ ನಡೆಸಲಾಗುತ್ತಿದೆ. ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ಪರೀಕ್ಷಾರ್ಥ ಸ್ಫೋಟ ಅತೀ ಮುಖ್ಯವಾಗಿದ್ದು, ಗೊಂದಲಗಳಿಗೆ ಉತ್ತರ ದೊರೆಯಲಿದೆ. ಗಣಿಗಾರಿಕೆಗೆ ಬಳಸುವ ರಾಸಾಯನಿಕ ಸ್ಫೋಟದಿಂದಾಗಿ ಡ್ಯಾಂಗೆ ಅಪಾಯವಿದೆ ಎಂಬ ಆತಂಕ ದಟ್ಟವಾಗಿ ಹರಡಿತ್ತು. ಅದರಿಂದಾಗಿ ಅಲ್ಲಿ ಗಣಿಗಾರಿಕೆ ನಿಷೇಧಿಸಬೇಕೆಂಬ ಒತ್ತಾಯ ಬಲವಾಗಿ ಕೇಳಿಬರುತ್ತಿತ್ತು.

### ಜಾರ್ಖಂಡ್‌ನ ಸಿಎಸ್‌ಐಆರ್–ಸಿಐಎಂಎಫ್‌ಆರ್ ತಂಡದಿಂದ 5 ಕಡೆ ಪರೀಕ್ಷೆ



ಜಾರ್ಖಂಡ್‌ನ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರೀಸರ್ಚ್ (CSIR) ಮತ್ತು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಮೈನಿಂಗ್ ▶ 8ನೇ ಪುಟಕ್ಕೆ



## ಸೋನಿಯಾ ಗಾಂಧಿ ಇಡಿ ವಿಚಾರಣೆ ಖಂಡಿಸಿ
# ಬೆಂಗಳೂರಲ್ಲಿ ಕಾಂಗ್ರೆಸ್ ಪ್ರತಿಭಟನೆ

- ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿ ಹಿರಿಯ ನಾಯಕರ ಬಂಧನ
- ಎರಡು ಕಾರಿಗೆ ಬೆಂಕಿ: ರಾಜಭವನಕ್ಕೆ ಮುತ್ತಿಗೆ ಯತ್ನ



ಬೆಂಗಳೂರು, ಜು.21– ಜಾರಿ ನಿರ್ದೇಶನಾಲಯ (ಇಡಿ) ಎಐಸಿಸಿ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆ ನಡೆಸುತ್ತಿರುವುದನ್ನು ವಿರೋಧಿಸಿ ಕೆಪಿಸಿಸಿ ವತಿಯಿಂದ ಇಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ಸಭೆ ನಡೆಸಿದ ಕಾಂಗ್ರೆಸ್ ಮುಖಂಡರು ನಂತರ ರಾಜಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದಾಗ ಶೇಷಾದ್ರಿ ರಸ್ತೆಯಲ್ಲಿ ಅವರನ್ನು ಪೊಲೀಸರು ಬಂಧಿಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಧ್ವಜ ಹಿಡಿದು ಪೊಲೀಸರು ಅಳವಡಿಸಿದ್ದ ಬ್ಯಾರಿಕೇಡ್ ಮೇಲೆ ಹತ್ತಿ ಪೊಲೀಸರ ಮೇಲೆಯೇ ಡೈವ್ ಹೊಡೆದರು. ಅವರಿಂದ ಸ್ಫೂರ್ತಿ ಪಡೆದಂತೆ ದಿನೇಶ್ ಗುಂಡೂರಾವ್ ಮತ್ತು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ನಳಪಾಡ್ ಕೂಡ ಬ್ಯಾರಿಕೇಡ್ ಹಾರಿ ಬಂಧನಕ್ಕೆ ಒಳಗಾದರು.

ಇತ್ತ ಕಾಂಗ್ರೆಸ್‌ನ ಹಿರಿಯ ಮುಖಂಡರು ರಾಜಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸುತ್ತಿದ್ದಂತೆ ಅತ್ತ ಶಾಂತಿ ನಗರದಲ್ಲಿರುವ ಇಡಿ ಕಚೇರಿ ಮುಂದೆ ಯುವ ಕಾಂಗ್ರೆಸ್ ಕಾರ್ಯಕರ್ತರು ತಾವೇ ತಂದಿದ್ದ 2 ಕಾರುಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಅಗ್ನಿಶಾಮಕ ದಳದವರೊಂದಿಗೆ ಸೇರಿ ಬೆಂಕಿ ನಂದಿಸಿದ್ದಾರೆ. ಈ ಪ್ರಕರಣದಲ್ಲಿ 11 ಮಂದಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಇಂದು ನಡೆದ ಪ್ರತಿಭಟನೆಯಲ್ಲಿ ಕೆಪಿಸಿಸಿ ▶ 8ನೇ ಪುಟಕ್ಕೆ

## ಮೂರು ತಲೆಮಾರಿಗೆ ಆಗುವಷ್ಟು ಗಾಂಧಿ ಹೆಸ್ರಲ್ಲಿ ಹಣ, ಆಸ್ತಿ ಮಾಡ್ಕೊಂಡಿದ್ದೇವೆ!



ಬೆಂಗಳೂರು, ಜು.21– ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯವರನ್ನು ಜಾರಿ ನಿರ್ದೇಶನಾಲಯ (ಇಡಿ) ಕಚೇರಿಯಲ್ಲಿ ವಿಚಾರಣೆ ನಡೆಸುತ್ತಿರುವುದನ್ನು ವಿರೋಧಿಸಿ ಕೆಪಿಸಿಸಿ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಮಾತನಾಡಿ, ಗಾಂಧಿ ಕುಟುಂಬ ಹೆಸರಲ್ಲಿ 3–4 ತಲೆಮಾರುಗಳಿಗೆ ಆಗುವಷ್ಟು ಹಣ, ಆಸ್ತಿ ಮಾಡಿಕೊಂಡ ನಾವು ಈಗ ಗಾಂಧಿ ಕುಟುಂಬದ ಋಣ ತೀರಿಸಬೇಕಿದೆ' ಎಂದು ಸ್ಫೋಟಕ ಮಾಹಿತಿ ಬಿಚ್ಚಿಟ್ಟಿದ್ದಾರೆ.

ಕಾಂಗ್ರೆಸ್ ಸುಮಾರು 70 ವರ್ಷ ದೇಶವನ್ನು ಆಳಿದೆ. ಕಾಂಗ್ರೆಸ್‌ನವರೇ ಆದ ನಾವೆಲ್ಲರೂ ಮುಂದಿನ ಮೂರ್ನಾಲ್ಕು ತಲೆಮಾರುಗಳಿಗೆ ಆಗುವಷ್ಟು ಆಸ್ತಿ, ಹಣ ಗಳಿಸಿದ್ದೇವೆ. ಅಧಿಕಾರ ಅನುಭವಿಸಿದ್ದೇವೆ. ಇದೀಗ ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ ಅವರ ಮೇಲೆ ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಖರೀದಿ ಅವ್ಯವಹಾರ ಮತ್ತು ಹಣ ವರ್ಗಾವಣೆ ಆರೋಪದ ವಿಚಾರಣೆ ನಡೆಯುತ್ತಿದೆ. ದೇಶ ಉಳಿಯಲು, ಕಾಂಗ್ರೆಸ್ ಉಳಿಸಲು ನಾವೆಲ್ಲರೂ ಒಟ್ಟಾಗಿ ಸೋನಿಯಾ ಗಾಂಧಿ ಅವರಿಗೆ ನೈತಿಕ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಗಾಂಧಿ ಕುಟುಂಬದ ಋಣ ತೀರಿಸದೇ ಹೋದರೆ ತಿನ್ನುವ ಅನ್ನಕ್ಕೆ ಹುಳ ಬೀಳುತ್ತದೆ. ಪಕ್ಷ ಕುಟುಂಬ ಇದ್ದಂತೆ, ಕುಟುಂಬ ಎಂದ ಮೇಲೆ ಸಣ್ಣ ಪುಟ್ಟ ಮನಸ್ತಾಪಗಳೆಲ್ಲವೂ ಸಹಜ. ಅವುಗಳನ್ನೆಲ್ಲಾ ಬದಿಗೊತ್ತಿ ನಾವೆಲ್ಲರೂ ಒಂದಾಗಬೇಕು. ಸಂಕಷ್ಟದಲ್ಲಿರುವ ಸೋನಿಯಾ ಅವರೊಂದಿಗೆ ನಿಲ್ಲಬೇಕು. ಆಗ ಮಾತ್ರ ನಾವು ತಿನ್ನುವ ಎರಡು ಹೊತ್ತಿನ ಊಟಕ್ಕೆ ಸಾರ್ಥಕ ಬರುತ್ತದೆ ಎಂದು ರಮೇಶ್ ಕುಮಾರ್ ಹೇಳಿದರು.

ಚಾಮುಂಡೇಶ್ವರಿ ಕ್ಷೇತ್ರದ ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಫಲಾನುಭವಿಗಳಿಗೆ 'ಸರ್ವರಿಗೂ ಸೂರು' ಯೋಜನೆಯಡಿ

# 2446 ಮನೆ ನಿರ್ಮಾಣಕ್ಕೆ ನಾಳೆ ಶಂಕುಸ್ಥಾಪನೆ



- ಮಂಡಕಳ್ಳಿ ವಿಮಾನ ನಿಲ್ದಾಣದ ಹಿಂಭಾಗ ವಸತಿ ಸಚಿವ ಸೋಮಣ್ಣರಿಂದ ಗುದ್ದಲಿಪೂಜೆ
- 2005ರಿಂದಲೂ 40.32 1/2 ಎಕರೆ ಭೂಮಿ ಮೀಸಲು
- ಪತ್ರಿಕಾಗೋಷ್ಠಿಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ಮಾಹಿತಿ

ಮೈಸೂರು,ಜು.21(ಎಂಟಿವೈ)– ಚಾಮುಂಡೇಶ್ವರಿ ಕ್ಷೇತ್ರದ ಪಾಲಿಕೆ ವ್ಯಾಪ್ತಿಯಲ್ಲಿ ನೆಲೆಸಿರುವ 2446 ಮಂದಿ ವಸತಿಹೀನರಿಗೆ 'ಪ್ರಧಾನಮಂತ್ರಿ ಆವಾಜ್ ಯೋಜನೆ–ಸರ್ವರಿಗೂ ಸೂರು' ಯೋಜನೆಯಡಿ ಮನೆ ನಿರ್ಮಿಸಲು ಜು.23ರಂದು ಸಂಜೆ 4ಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗುತ್ತಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದ ವಸತಿಹೀನರಿಗೆ ಮನೆ ಮಂಜೂರು ಮಾಡುವ ನಿಟ್ಟಿನಲ್ಲಿ 2005ರಲ್ಲಿ ಅಂದು ಕ್ಷೇತ್ರದ ಶಾಸಕರೂ ಹಾಗೂ ಉಪಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು, ಮೈಸೂರು ತಾಲೂಕಿನ ಮಂಡಕಳ್ಳಿ ಬಳಿ 40 ಎಕರೆ 32 1/2 ಗುಂಟೆ ಭೂಮಿಯನ್ನು ಆಶ್ರಯ ಯೋಜನೆ ಯಡಿಯಲ್ಲಿ ಖರೀದಿಸಿದ್ದರು. 2007ರಲ್ಲಿ ಆಶ್ರಯ ಮನೆಗಾಗಿ ಖರೀದಿಸಲಾಗಿದ್ದ ಭೂಮಿಯಲ್ಲಿ 1410 ಮಂದಿಗೆ ನಿವೇಶನ ನೀಡಲು ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಕ್ಷೇತ್ರದ ಶಾಸಕನಾಗಿ ನಾನು ಆಯ್ಕೆಯಾದ ಬಳಿಕ 2012ರಲ್ಲಿ ಮಂಡಕಳ್ಳಿಯಲ್ಲಿ ಖರೀದಿಸಿದ್ದ ಜಾಗದಲ್ಲಿ ವಸತಿಹೀನರಿಗೆ ಜಿ+1, ಜಿ+2 ಮಾದರಿಯಲ್ಲಿ ಮನೆ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಪತ್ರ ಬರೆದಿದ್ದೆ. 2015ರಲ್ಲಿ ಮನೆ ನಿರ್ಮಾಣಕ್ಕೆ ಒಪ್ಪಿಗೆ ಸೂಚಿಸಲಾಗಿತ್ತು ಎಂದು ತಿಳಿಸಿದರು.

**ಎರಡು ವರ್ಷದಲ್ಲಿ ಫಲಾನುಭವಿಗಳ ಆಯ್ಕೆ:** ವಸತಿ ಸೌಲಭ್ಯಕ್ಕಾಗಿ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಈ ಹಿಂದೆ 2005ರಿಂದ 07ರ ಅವಧಿಯಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿದಾಗ ಸಲ್ಲಿಕೆಯಾಗಿದ್ದ 1500 ಅರ್ಜಿಯಲ್ಲಿ 750 ಮಂದಿ ಮಾತ್ರ ಮನೆ ಪಡೆಯಲು ಅರ್ಹರಾಗಿದ್ದರು. ಅರ್ಜಿ ಸಲ್ಲಿಸಿದ್ದ ಹೊರ ಜಿಲ್ಲೆ, ವಿವಿಧ ಗ್ರಾ.ಪಂ ವ್ಯಾಪ್ತಿಯ ಫಲಾನುಭವಿಗಳಿಗೆ ಈ ಯೋಜನೆ ಅನ್ವಯವಾಗದ ಕಾರಣ ಆ ಅರ್ಜಿಗಳನ್ನೆಲ್ಲಾ ತಿರಸ್ಕರಿಸಲಾಯಿತು. 2446 ಮಂದಿ ಅರ್ಹರನ್ನು ಆಯ್ಕೆ ಮಾಡಲು 2 ವರ್ಷ ಪರಿಶೀಲಿಸಲಾಗಿದೆ. ಈ ಫಲಾನುಭವಿಗಳಲ್ಲಿ ಪೌರಕಾರ್ಮಿಕರು, ಮಂಗಳಮುಖಿಯರು ಹಾಗೂ ಜನತಾನಗರದಲ್ಲಿ ವಾಸಿಸುತ್ತಿರುವ ಮೇದರ ಜನಾಂಗದ 42 ಕುಟುಂಬಗಳಿಗೂ ಮನೆ ಮಂಜೂರು ಮಾಡಲಾಗಿದೆ ಎಂದು ವಿವರಿಸಿದರು. ▶ 8ನೇ ಪುಟಕ್ಕೆ



### ವಿವಿಧ ವಸತಿ ಯೋಜನೆಯ ನೈಜ ಫಲಾನುಭವಿಗಳಿಗೆ ವಂಚನೆ
## ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಜಿಟಿಡಿ ಸೂಚನೆ

ಮೈಸೂರು,ಜು.21(ಎಂಟಿವೈ)–ನಕಲಿ ದಾಖಲೆ ಸೃಷ್ಟಿಸಿ, ಮೈಸೂರು ನಗರದಲ್ಲಿ ವಸತಿಹೀನರಿಗೆ ವಿವಿಧ ಯೋಜನೆಯಡಿ ಮಂಜೂರಾಗಿರುವ ಮನೆಗಳ ನೈಜ ಫಲಾನುಭವಿಗಳನ್ನು ಒಕ್ಕಲೆಬ್ಬಿಸುವ ಸಂಚು ನಡೆಯುತ್ತಿರುವ ಬಗ್ಗೆ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದೇನೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ.

ಮೈಸೂರಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿರುವ ಬಡವರಿಗಾಗಿ ಆಶ್ರಯ ಯೋಜನೆ ಸೇರಿದಂತೆ ವಿವಿಧ ವಸತಿ ಯೋಜನೆಗಳಡಿ ಮನೆ ಹಾಗೂ ನಿವೇಶನ ಮಂಜೂರು ಮಾಡಲಾಗಿದ್ದು, ಆ ಯೋಜನೆಗಳ ಕೆಲ ಫಲಾನುಭವಿಗಳ ಹೆಸರಲ್ಲಿ ಕೆಲವರು ನಕಲಿ ದಾಖಲೆ ಸೃಷ್ಟಿಸಿ ಮನೆ, ನಿವೇಶನ ಕಬಳಿಸಿರುವುದು ಕಂಡು ಬಂದಿದೆ. ಈಗಾಗಲೇ 4–6 ಪ್ರಕರಣ ಪತ್ತೆಯಾಗಿದ್ದು, ನಿಜವಾದ ಫಲಾನುಭವಿಗಳಿಗೆ ಆಗಿರುವ ತೊಂದರೆ ಸರಿಪಡಿಸುವ ನಿಟ್ಟಿನಲ್ಲಿ ಸೂಕ್ತ ತನಿಖೆಯಾಗಬೇಕು. ಈ ದಂಧೆಯಲ್ಲಿ ಪಾಲಿಕೆಯ ಕೆಲ ಸಿಬ್ಬಂದಿಗಳೂ ಶಾಮೀಲಾಗಿರುವ ಶಂಕೆ ಇದೆ. ಸಿಬ್ಬಂದಿಯ ಸಹಕಾರವಿಲ್ಲದೇ, ಅಕ್ರಮ ನಡೆಯಲು ಸಾಧ್ಯವೇ ಇಲ್ಲ. ಹೀಗಾಗಿ ಈ ಪ್ರಕರಣವನ್ನು ಗಂಭೀರ ವಾಗಿ ಪರಿಗಣಿಸುವಂತೆ ಸೂಚಿಸಿದ್ದೇನೆ ಎಂದರು. ರಾಜರಾಜೇಶ್ವರಿ ಆಶ್ರಯ ಬಡಾವಣೆಯಲ್ಲಿ 1992ರಲ್ಲಿ ಬಸವೇಗೌಡ ಅವರ ಪತ್ನಿ ಮಂಜುಳಾ ಅವರಿಗೆ ಮನೆ ಮಂಜೂರಾಗಿತ್ತು. ಮಂಜುಳಾ ಸೇರಿದಂತೆ ಸಾಕಷ್ಟು ಫಲಾನುಭವಿಗಳು ಮೂಲಸೌಕರ್ಯದ ಕೊರತೆ ಹಿನ್ನೆಲೆಯಲ್ಲಿ ಇಂತಹ ▶ 8ನೇ ಪುಟಕ್ಕೆ

ಮೈಸೂರು ಮಿತ್ರ



# ಮೈಸೂರಲ್ಲಿ ನಾಳೆ 'ಸಿದ್ದರಾಮಯ್ಯ ಆಡಳಿತ; ನೀತಿ-ನಿರ್ಧಾರ' ಪುಸ್ತಕ ಬಿಡುಗಡೆ



ಮೈಸೂರು, ಜು.21(ಆರ್‌ಕೆಬಿ)– ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರ ಆಡಳಿತದ ವೇಳೆ ನೀಡಿದ ಜನೋಪಯೋಗಿ ಕಾರ್ಯಕ್ರಮ ಕುರಿತು ರಚಿಸಿರುವ 'ಸಿದ್ದರಾಮಯ್ಯ ಆಡಳಿತ, ನೀತಿ- ನಿರ್ಧಾರ' ಎಂಬ ತಾತ್ವಿಕ ವಿವೇಚನೆಯ ಪುಸ್ತಕ ಜು.23 ರಂದು ಮೈಸೂರಿನ ಕಲಾಮಂದಿರದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಜನಮನ ಪ್ರತಿಷ್ಠಾನದ ಅಧ್ಯಕ್ಷ ಲಕ್ಷ್ಮಣ ಕೊಡಸೆ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಶಿವಾನಂದಪುರಿ ಸ್ವಾಮೀಜಿ, ರಾಜ್ಯಸಭೆಯ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

70ಕ್ಕೂ ಹೆಚ್ಚು ಲೇಖಕರ ಲೇಖನಗಳನ್ನು ಕೃತಿ ಒಳಗೊಂಡಿದ್ದು, ಇವರಲ್ಲಿ ಸಮಾಜ ಮತ್ತು ಸಂಸ್ಕೃತಿ ಚಿಂತಕರೂ ಸೇರಿದ್ದಾರೆ. ಸಿದ್ದರಾಮಯ್ಯ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದು, ಡಾ.ಬಂಜಗೆರೆ ಜಯಪ್ರಕಾಶ್ 'ಸಂವಾದ' ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಾಹಿತಿ ಕಾ.ತ.ಚಿಕ್ಕಣ್ಣ ಉಪಸ್ಥಿತರಿದ್ದರು.

# ಯುವಪೀಳಿಗೆಯಲ್ಲಿ ಜಾಗೃತಿಗಾಗಿ ಜು.24ಕ್ಕೆ ಮೈಸೂರಲ್ಲಿ ಬೈಕ್ ರ್‍ಯಾಲಿ



ಮೈಸೂರು, ಜು.21(ಆರ್‌ಕೆಬಿ)– ಯುವ ಪೀಳಿಗೆಯ ಜೀವ ದೇಶಕ್ಕೆ ಅಮೂಲ್ಯವಾದದ್ದು ಎಂಬ ಸಂದೇಶ ಹೊತ್ತು ನೂರಾರು ಮಂದಿ ಭಾನುವಾರ (ಜು.24) ಮೈಸೂರಿನಲ್ಲಿ ಬೈಕ್ ರ್‍ಯಾಲಿ ನಡೆಸಲಿದ್ದಾರೆ. ಮೈಸೂರಿನ ವಿಜಯನಗರದ ಟ್ರಿನಿಟಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಆಯೋಜಿಸಿರುವ ಬೈಕ್ ರ್‍ಯಾಲಿ ಅಂದು ಬೆಳಗ್ಗೆ 7 ಗಂಟೆಗೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಿಂದ ಹೊರಟು ಹಾರ್ಡಿಂಜ್ ವೃತ್ತ, ಗನ್‌ಗೌಸ್, ಬಸವೇಶ್ವರ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ವೃತ್ತ (ಮೆಟ್ರೊಪೋಲ್ ವೃತ್ತ), ಸಂತ ಜೋಸೆಫ್ ಕಾಲೇಜು ವೃತ್ತ, ಮಾತೃಮಂಡಳಿ ಸ್ಕೂಲ್ ವೃತ್ತದಿಂದ ವಿಜಯನಗರದ ಟ್ರಿನಿಟಿ ಕಾಲೇಜು ಆವರಣದಲ್ಲಿ ಮುಕ್ತಾಯಗೊಳ್ಳಲಿದೆ ಎಂದು ಕಾಲೇಜಿನ ಉಪ ಪ್ರಾಚಾರ್ಯ ಪ್ರವೀಣ್‌ಕುಮಾರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಲನಾ ಪರವಾನಗಿ ಹೊಂದಿರುವ ನಗರದ ಯಾರು ಬೇಕಾದರೂ ಈ ರ್‍ಯಾಲಿಯಲ್ಲಿ ಉಚಿತವಾಗಿ ಪಾಲ್ಗೊಳ್ಳಬಹುದಾಗಿದೆ. ಭಾಗವಹಿಸಿದವರಿಗೆ ಪ್ರಮಾಣಪತ್ರ ನೀಡಲಾಗುವುದು. ಆಸಕ್ತರು ದೂ–7760004356 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಲ್ಯೆಜರ್ ಮಿಲ್ಟನ್, ಪ್ರಾಚಾರ್ಯ ಡಾ.ಶಮಾ ಮಿಲ್ಟನ್, ಸೈಯದ್ ನಿಹಾಲ್, ದಿಯಾ ಪೂವಯ್ಯ ಉಪಸ್ಥಿತರಿದ್ದರು.

# ಪತ್ರಕರ್ತರ ಸಂಘದಿಂದ ವಾರ್ಷಿಕ ಪ್ರಶಸ್ತಿ ಪ್ರಕಟ



ರವಿಚಂದ್ರ ಪ್ರತಾಪ್ ಕಾರ್ತಿಕ್ ಯಾದವ್ ಜಯಂತ್ ರಾಮು ರಾಘವೇಂದ್ರ



ಕೃಷ್ಣಶೆಟ್ಟಿ ಪ್ರಭುರಾಜನ್ ಪ್ರಗತಿ ಮಾಚಮ್ಮ ಮೋಹನ ರಾಮ್ ಕಿರಣ್‌ಕುಮಾರ್

ಮೈಸೂರು,ಜು.21(ಆರ್‌ಕೆ)–ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು 2021–22ನೇ ಸಾಲಿನ ಪತ್ರಿಕಾ ದಿನಾಚರಣೆ ಅಂಗವಾಗಿ ಕೊಡಮಾಡುವ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಪ್ರಜಾಸತ್ತ ಪತ್ರಿಕೆಯ ರವಿಚಂದ್ರ ಹಂಚ್ಯ, ವಿಜಯವಾಣಿಯ ಪ್ರತಾಪ್ ಟಿ.ಕೆ. ನರಸೀಪುರ, ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನ ಕೆ.ಕೆ.ಕಾರ್ತಿಕ್, ಮೈಸೂರು ಮಿತ್ರ ಛಾಯಾಗ್ರಾಹಕ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್, ದೂರದರ್ಶನದ ಜಿ.ಜಯಂತ್, ಕ್ಯಾಮರಾಮನ್ ರಾಮು, ಎಂ.ಸಿ.ರಾಘವೇಂದ್ರ ಸ್ವಾಮಿ ಪ್ರಶಸ್ತಿಗೆ ಆಯ್ಕೆಯಾದರು. ಅದೇ ರೀತಿ ವಿಜಯವಾಣಿಯ ಹೆಚ್.ಪಿ.ಕೃಷ್ಣಶೆಟ್ಟಿ (ನಿರ್ಮಾದ ಹಿರಿಯ ಉಪ ಸಂಪಾದಕ), ಯುಎನ್‌ಐನ ಬಿ.ಎಸ್.ಪ್ರಭುರಾಜನ್ (ಜೀವಮಾನ ಸಾಧನೆ), ಪ್ರಗತಿ ಫೋಟೋ ನ್ಯೂಸ್‌ನ ಪ್ರಗತಿ ಗೋಪಾಲಕೃಷ್ಣ (ಜೀವಮಾನ ಸಾಧನೆ), ಕನ್ನಡದ ಪ್ರಜಾನುಡಿಯ ಮಾಚಮ್ಮ ಮಲ್ಲಿಗೆ (ಜೀವಮಾನ ಸಾಧನೆ), 'ಮೈಸೂರು ಮಿತ್ರ'ದ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್ (ಹಿರಿಯ ಛಾಯಾಗ್ರಾಹಕ), ಅಮೋಘ ಟಿವಿಯ ಹುಲ್ಲಹಳ್ಳಿ ಮೋಹನ್ (ಹಿರಿಯ ಗ್ರಾಮಾಂತರ ಪತ್ರಕರ್ತ), ಟಿವಿ–9ನ ರಾಮ್ (ದೃಶ್ಯ ಮಾಧ್ಯಮ ಹಿರಿಯ ವರದಿಗಾರ) ಹಾಗೂ ನ್ಯೂಸ್ ಒನ್‌ನ ಕೆ.ವಿ.ಕಿರಣ್‌ಕುಮಾರ್ (ಹಿರಿಯ ಕ್ಯಾಮರಾಮನ್) ಅಭಿನಂದಿತರಾಗಿದ್ದಾರೆ. ಜುಲೈ ಅಂತ್ಯದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ನಡೆಯಲಿರುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ವಾರ್ಷಿಕ ಪ್ರಶಸ್ತಿಗಳನ್ನು ಪ್ರಧಾನ ಮಾಡುವುದಲ್ಲದೆ, ಸಾಧಕರನ್ನು ಸನ್ಮಾನಿಸಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ (ಐಎಂಎ) ಮೈಸೂರು ಶಾಖೆ ವತಿಯಿಂದ ಕಾವೇರಿ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್, ಕಾವೇರಿ ಆರ್ಟ್ ಅಂಡ್ ಮಲ್ಟಿಸ್ಪೆಷಾಲಿಟಿ ಹಾಸ್ಪಿಟಲ್, ಮೆಡ್‌ಸ್ಕ್ಯಾನ್ ಡಯಾಗ್ನೋಸ್ಟಿಕ್ ಅಂಡ್ ಪಾಲಿ ಕ್ಲಿನಿಕ್ ಸಂಸ್ಥಾಪಕ ಅಧ್ಯಕ್ಷರಾದ ಡಾ.ಜಿ.ಆರ್.ಚಂದ್ರಶೇಖರ್ ಅವರನ್ನು 32 ವರ್ಷಗಳ ಅವರ ಸೇವಾ ಸಾಧನೆಯನ್ನು ಪರಿಗಣಿಸಿ, ರಾಷ್ಟ್ರೀಯ ವೈದ್ಯರ ದಿನಾಚರಣೆಯಂದು ಅಭಿನಂದಿಸಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಡಾ.ಜಯಂತ್ ಇತರರು ಉಪಸ್ಥಿತರಿದ್ದರು.

# ಪರಿಶಿಷ್ಟ ಜಾತಿ, ಪಂಗಡಕ್ಕೆ ಮೀಸಲಾತಿ ಹೆಚ್ಚಿಸುವಂತೆ ಕೋರಿ ಸಿಎಂಗೆ ಮನವಿ



ಮೈಸೂರು,ಜು.21–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಬುಧವಾರ ಭೇಟಿ ಮಾಡಿದ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆಯ ಮುಖಂಡರು, ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಮೀಸಲಾತಿ ಹೆಚ್ಚಿಸುವಂತೆ ಮನವಿ ಪತ್ರ ಸಲ್ಲಿಸಿದರು. ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು, ಇನ್ನೆರಡು, ಮೂರು ದಿನಗಳಲ್ಲಿ ಮೀಸಲಾತಿ ಹೆಚ್ಚಳದ ಕುರಿತು ಇತ್ಯರ್ಥ ಹಾದುತ್ತೇವೆ. ಎಲ್ಲಾ ಫೈನಲ್ ಆಗಿದೆ ಎಂದು ಮುಖಂಡರಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾಮಪ್ಪ ನಾಯಕ, ಪ್ರಭಾಕರ ಹುಣಸೂರು, ಮಂಜುನಾಥ್, ಹದಿನಾರು ಪ್ರಕಾಶ್, ರೋಹಿತ್, ರಘು, ವಿಜಯಕುಮಾರ್ ಮತ್ತಿತರರು ಹಾಜರಿದ್ದರು.

# ನ್ಯಾಷನಲ್ ಹೆರಾಲ್ಡ್ ಪ್ರಕರಣ: ಸೋನಿಯಾ ಗಾಂಧಿ ಇಡಿ ವಿಚಾರಣೆ

ನವದೆಹಲಿ, ಜು.21– ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ(ಇಡಿ) ಗುರುವಾರ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ವಿಚಾರಣೆ ನಡೆಸಿತು.

ಸುಮಾರು ಮೂರು ಗಂಟೆಗಳ ವಿಚಾರಣೆ ಬಳಿಕ ಸೋನಿಯಾ ಗಾಂಧಿ ಅವರು ಇಡಿ ಕಚೇರಿಯಿಂದ ನಿರ್ಗಮಿಸಿದರು ಎಂದು ಇಡಿ ಮೂಲಗಳು ತಿಳಿಸಿವೆ. 75 ವರ್ಷದ ಸೋನಿಯಾ ಗಾಂಧಿ ಅವರು ಗುರುವಾರ ಮಧ್ಯಾಹ್ನ 12 ಗಂಟೆಯ ಸುಮಾರಿಗೆ ಝೆಡ್ ಪ್ಲಸ್ ಭದ್ರತೆಯೊಂದಿಗೆ ಮಧ್ಯ ದೆಹಲಿಯ ಎಪಿಜೆ ಅಬ್ದುಲ್ ಕಲಾಂ ರಸ್ತೆಯ ವಿದ್ಯುತ್ ಲೇನ್‌ನಲ್ಲಿರುವ ಫೆಡರಲ್ ತನಿಖಾ ಸಂಸ್ಥೆಯ ಪ್ರಧಾನ ಕಛೇರಿಗೆ ಆಗಮಿಸಿದರು.

ಕೋವಿಡ್ ಪ್ರೋಟೋಕಾಲ್‌ಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರಣೆ ನಡೆಸಲಾಗಿದ್ದು, ಪ್ರಕರಣದಲ್ಲಿ ರಾಹುಲ್ ಗಾಂಧಿಯನ್ನು ಪ್ರಶ್ನಿಸಿದ್ದ ಸಹಾಯಕ ನಿರ್ದೇಶಕ ಮಟ್ಟದ ತನಿಖಾ ಅಧಿಕಾರಿಯೇ ಸೋನಿಯಾ ಗಾಂಧಿ ಅವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ ಎನ್ನಲಾಗಿದೆ. ಸೋನಿಯಾ ಗಾಂಧಿ ಅವರನ್ನು ವಿಚಾರಣೆ ನಡೆಸಿದ ಇಡಿ ಅಧಿಕಾರಿಗಳ ತಂಡದಲ್ಲಿ ಮಹಿಳಾ ಅಧಿಕಾರಿಯೂ ಇದ್ದು, ಆ ಎಲ್ಲಾ ಅಧಿಕಾರಿಗಳು 'ಕೋವಿಡ್ ನೆಗೆಟಿವ್' ಪ್ರಮಾಣಪತ್ರಗಳನ್ನು ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಜುಲೈ 25ಕ್ಕೆ ಹಾಜರಾಗಲು ಇಡಿ ಸಮನ್ಸ್:** ಜುಲೈ 25ರಂದು ಎರಡನೇ ಸುತ್ತಿನ ವಿಚಾರಣೆಗೆ ಹಾಜರಾಗುವಂತೆ ಇಡಿ ಸಮನ್ಸ್ ನೀಡಿರುವುದಾಗಿ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಕೋವಿಡ್–19ನಿಂದ ಚೇತರಿಸಿಕೊಂಡಿರುವ ಸೋನಿಯಾ ಗಾಂಧಿ ಅವರನ್ನು ಇಂದು 2 ಗಂಟೆಗಳ ಕಾಲ ವಿಚಾರಣೆ ನಡೆಸಲಾಯಿತು. ಆಕೆಯ ಮನವಿ ಮೇರೆಗೆ ವಿಚಾರಣೆಯನ್ನು ಅಂತ್ಯಗೊಳಿಸಲಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದಾಗ್ಯೂ, ಮುಂದಿನ ವಿಚಾರಣೆ ಇಲ್ಲ ಎಂದು ಇಡಿ ಸೋನಿಯಾ ಗಾಂಧಿಗೆ ತಿಳಿಸಿರುವುದಾಗಿ ಕಾಂಗ್ರೆಸ್ ಮುಖಂಡ ಜೈರಾಂ ರಮೇಶ್ ಹೇಳಿದ್ದಾರೆ.

ಇತರ ಯಾವುದೇ ವಿಚಾರಣೆಯಿದ್ದರೆ ಅಗತ್ಯವಿದ್ದರೆ ರಾತ್ರಿ 8 ಗಂಟೆಯಲ್ಲ 9 ರವರೆಗೂ ಉತ್ತರಿಸಲು ಸೋನಿಯಾ ಗಾಂಧಿ ಸಿದ್ದರಿದ್ದರು ಎಂದು ರಮೇಶ್ ಟ್ವಿಟರ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಗುರುವಾರ ಅಥವಾ ಶುಕ್ರವಾರ ಅಂತಾ ಇಡಿ ಏನನ್ನೂ ಕೇಳಿಲ್ಲ. ಸೋಮವಾರ ವಿಚಾರಣೆಗೆ ಹಾಜರಾಗುವುದಾಗಿ ಸೋನಿಯಾ ಗಾಂಧಿ ಹೇಳಿರುವುದಾಗಿ ರಮೇಶ್ ತಿಳಿಸಿದ್ದಾರೆ. ಆದರೆ, ಆಕೆಯ ಒತ್ತಾಯದ ಮೇರೆಗೆ ಜು.26ರ ಬದಲಾಗಿ 25ರಂದು ವಿಚಾರಣೆಗೆ ಹಾಜರಾಗಲು ಸಮನ್ಸ್ ನೀಡಲಾಗಿದೆ ಎಂದು ಇಡಿ ಅಧಿಕಾರಿಗಳು ಹೇಳಿದ್ದಾರೆ.



## ಇಡಿ ವಿಚಾರಣೆ ವಿರೋಧಿಸಿ ಪ್ರತಿಭಟನೆ: ಚಿದಂಬರಂ, ಮಾಕೆನ್ ಬಂಧನ, ಕಾರ್ಯಕರ್ತರ ಮೇಲೆ ಜಲಫಿರಂಗಿ



ನವದೆಹಲಿ, ಜು.21– ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಇಡಿ ವಿಚಾರಣೆ ವಿರೋಧಿಸಿ ಕಾಂಗ್ರೆಸ್ ಪಕ್ಷ ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮುಖಂಡರಾದ ಪಿ. ಚಿದಂಬರಂ, ಅಜಯ್ ಮಾಕೆನ್, ಪವನ್ ಖೇರ್, ಜೈರಾಮ್ ರಮೇಶ್, ವಿವೇಕ್ ಟಂಕಾ, ಅಶೋಕ್ ಗೆಹ್ಲೋಟ್, ಶಶಿ ತರೂರ್ ಮತ್ತಿತರರನ್ನು ಬಂಧಿಸಲಾಗಿದೆ. ಸೋನಿಯಾ ಗಾಂಧಿ ಇಡಿ ವಿಚಾರಣೆ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಜಲ ಫಿರಂಗಿ ಪ್ರಯೋಗಿಸಲಾಗಿದೆ.

ಸರ್ಕಾರ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಈ ರೀತಿಯ ಸರ್ಕಾರದ ಕಾರ್ಯವೈಖರಿಯಿಂದ ಅತ್ಯಂತ ನಿರಾಸೆಯಾಗಿದೆ ಎಂದು ಮಾಜಿ ಕೇಂದ್ರ ಸಚಿವ ಶಶಿತರೂರ್ ದೂರಿದ್ದಾರೆ. ದೇಶದಲ್ಲಿ ಕೇಂದ್ರದ ಏಜೆನ್ಸಿಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ನಡೆಸುವುದು ನಮ್ಮ ಹಕ್ಕು. ಆದರೆ, ಅದನ್ನು ಹತ್ತಿಕ್ಕಲಾಗುತ್ತಿದೆ ಎಂದು ಸಚಿನ್ ಪೈಲಟ್ ಆರೋಪಿಸಿದ್ದಾರೆ. ಪಕ್ಷದ ಕೇಂದ್ರ ಕಚೇರಿ ಹೊರಗಡೆ ಪಕ್ಷದ ಸಂಸದರು ಹಾಗೂ ಸಿಡಬ್ಲ್ಯೂಸಿ ಸದಸ್ಯರನ್ನು ಬಂಧಿಸಲಾಗಿದೆ ಎಂದು ಪಕ್ಷದ ವಕ್ತಾರ ಜೈರಾಂ ರಮೇಶ್ ಟ್ವೀಟ್ ಮಾಡಿದ್ದಾರೆ. ಇದಕ್ಕೂ ಮುನ್ನ ಅಕ್ಬರ್ ರಸ್ತೆಯ ಪಕ್ಷದ ಕೇಂದ್ರ ಕಚೇರಿ ಸುತ್ತಮುತ್ತ ಪ್ರತಿಭಟನೆ ಹಿನ್ನೆಲೆಯಲ್ಲಿ ಬ್ಯಾರಿಕೇಡ್ ಹಾಕಲಾಗಿತ್ತು. ಸೋನಿಯಾ ಗಾಂಧಿ ಇಡಿ ವಿಚಾರಣೆ ವಿರೋಧಿಸಿದ ಪ್ರತಿಭಟನಾಕಾರರು ಬ್ಯಾರಿಕೇಡ್‌ಗಳನ್ನು ಮುರಿದು, ಆಕ್ರೋಶ ವ್ಯಕ್ತಪಡಿಸಿದರು.

# ಪುರಾತತ್ವ, ಪರಂಪರೆ ಇಲಾಖೆ ಆಯುಕ್ತರಾಗಿ ಎ.ದೇವರಾಜು ಅಧಿಕಾರ ಸ್ವೀಕಾರ



ಮೈಸೂರು, ಜು.21(ಎಂಕೆ)– ಪುರಾತತ್ವ, ವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆ ಆಯುಕ್ತರಾಗಿ ಹಿರಿಯ ಕೆಎಎಸ್ ಅಧಿಕಾರಿ ಎ.ದೇವರಾಜು ಅಧಿಕಾರ ವಹಿಸಿಕೊಂಡರು.

ಇಲಾಖೆಯ ಆಯುಕ್ತರಾಗಿದ್ದ ಬಿ.ಆರ್. ಪೂರ್ಣಿಮಾ ಅವರು ಜಿಪಂ ಸಿಇಒ ಆಗಿ ವರ್ಗಾವಣೆಗೊಂಡಿದ್ದು, ಅವರೇ ಹೆಚ್ಚುವರಿ ಪ್ರಭಾರ ಆಯುಕ್ತರಾಗಿದ್ದರು.

# ಜು.24ರಂದು ಮೈಸೂರಿಗೆ ಸಾಲುಮರದ ತಿಮ್ಮಕ್ಕ



ಮೈಸೂರು, ಜು.21– ಪರಿಸರ ರಾಯಭಾರಿಯಾದ ವೃಕ್ಷಮಾತೆ ನಾಡೋಜ ಡಾ. ಸಾಲುಮರದ ತಿಮ್ಮಕ್ಕ ಅವರು ಜು.24ರಿಂದ 25ರವರೆಗೆ ಮೈಸೂರು ಜಿಲ್ಲಾ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಜು.24ರಂದು ಭಾನುವಾರ ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಮೈಸೂರು ಮೃಗಾಲಯದಲ್ಲಿ ಪರಿಸರ ಸಂರಕ್ಷಣೆಯ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಜು.25ರಂದು ಸೋಮವಾರ ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವರು. ನಂತರ ಮಧ್ಯಾಹ್ನ 2 ಗಂಟೆಗೆ ನಿವೃತ್ತ ಉಪವಲಯ ಅರಣ್ಯಾಧಿಕಾರಿ ಯೋಗೀಶ್ವರ ಮನೆಗೆ ಭೇಟಿ ನೀಡುವರು.

# ಜು.24ರಂದು 'ಮಹಿಷ ಮಾಧ್ಯಮ' ಪುಸ್ತಕ ಬಿಡುಗಡೆ



ಮೈಸೂರು, ಜು.21(ಆರ್‌ಕೆಬಿ)– ಅಶೋಕಪುರಂ ಅಭಿಮಾನಿಗಳ ಬಳಗ, ಮಹಿಷಾ ಮಂಡಲ ಅಂತಾರಾಷ್ಟ್ರೀಯ ಬುದ್ಧಿಸ್ಟ್ ಕಲ್ಚರಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಜು.24 ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಲೇಖಕ ಸಿದ್ದಸ್ವಾಮಿ ಅವರ 'ಮಹಿಷ ಮಾಧ್ಯಮ' ಪುಸ್ತಕ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠೀಯಲ್ಲಿ ಮಾತನಾಡಿದ ಅವರು, ಮೈಸೂರು ಸಿದ್ಧಾರ್ಥ ನಗರ ಅಷ್ಟಾಂಗ ಮಾರ್ಗ ಧ್ಯಾನ ಕೇಂದ್ರದ ಭಂತೇ ಬೋಧಿದತ್ತ ಸಾನ್ನಿಧ್ಯ ವಹಿಸುವರು. ನಟ ಚೇತನ್‌ಕುಮಾರ್ ಉದ್ಘಾಟಿಸುವರು. ಎಂಎಲ್‌ಸಿ ಹೆಚ್. ವಿಶ್ವನಾಥ್ ಅಧ್ಯಕ್ಷತೆ ವಹಿಸುವರು. ಎ.ಎಸ್. ರಮಾಕಾಂತ್ ಪುಸ್ತಕ ಬಿಡುಗಡೆ ಮಾಡುವರು ಎಂದು ಹೇಳಿದರು.

600 ಪುಟಗಳ 'ಮಹಿಷ ಮಾಧ್ಯಮ' ಪುಸ್ತಕದಲ್ಲಿ ಮಹಿಷ ರಾಕ್ಷಸ ಅಲ್ಲ, ಆತ ರಕ್ಷಕ, ಆತ ಸಮಾಜದ ಮೂಲ ನಿವಾಸಿ ಎಂಬ ಇತಿಹಾಸವನ್ನು ವಿವರಿಸಲಾಗಿದೆ. ನಾಡಿನ ಅನೇಕ ಸಾಹಿತಿಗಳ ಲೇಖನಗಳನ್ನು ಪುಸ್ತಕ ಒಳಗೊಂಡಿದೆ ಎಂದರು.

ಸಂಸದ ಪ್ರತಾಪ್‌ಸಿಂಹ ಅವರು ಮಹಿಷ ದಸರಾ ಆಚರಣೆ ಬಗ್ಗೆ ಮಾಡಿದ ಟೀಕೆಗಳಿಂದಾಗಿ ಮಹಿಷನ ವಿಚಾರ ಇಂದು ಅಂತಾರಾಷ್ಟ್ರೀಯ ಮಟ್ಟದ ಚರ್ಚೆಗೆ ಕಾರಣವಾಗಿದೆ. ಹಾಗಾಗಿ ಪ್ರತಾಪ್‌ಸಿಂಹರಿಗೆ ಕೃತಜ್ಞತೆ ಸಲ್ಲಿಸುತ್ತೇವೆ. ಆದರೆ ಸಂಸದರಾಗಿ ಜನರ ಬಡತನ, ನಿರುದ್ಯೋಗ ಇನ್ನಿತರೆ ಸಮಸ್ಯೆಗಳ ಬಗ್ಗೆ ಶ್ರಮಿಸಬೇಕಾದ ಅವರು ಜಾತಿ, ಧರ್ಮಗಳ ಮಧ್ಯೆ ಸಂಘರ್ಷ ಉಂಟು ಮಾಡುತ್ತಿದ್ದಾರೆ ಎಂದು ಪ್ರತಾಪ್‌ಸಿಂಹ ವಿರುದ್ಧ ಆರೋಪಿಸಿದರು. ಸಾಹಿತಿ ದೇವನೂರು ಮಹಾದೇವ ಅವರ 'ಆರ್‌ಎಸ್‌ಎಸ್ ಆಳ, ಅಗಲ' ಕೃತಿ ಕುರಿತು ಟೀಕಿಸಿರುವ ಸಂಸದ ಪ್ರತಾಪ್‌ಸಿಂಹ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, ದೇವನೂರರು ಕೃತಿಯ ಮೂಲಕ ಹೊಸ ಸಂದೇಶ ನೀಡಿರುವುದನ್ನು ಅರಗಿಸಿಕೊಳ್ಳಲಾಗದೇ ಇಂತಹ ವಿಕೃತ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಎಂಪಿ ಟಿಕೆಟ್‌ಗಾಗಿ ಲೇಖನ ಬರೆಯುತ್ತಿದ್ದ ಪ್ರತಾಪ್‌ಸಿಂಹ, ಅವರಿಗೆ ದೇವನೂರರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಲೇಖಕ ಸಿದ್ದಸ್ವಾಮಿ, ಸೋಮಯ್ಯ ಮಲೆಯೂರು, ಚಿಕ್ಕಂದಾನಿ, ನಂಜುಂಡಸ್ವಾಮಿ ಉಪಸ್ಥಿತರಿದ್ದರು.

# ಪೊಲೀಸರ ವಿರುದ್ಧ ಮಹಿಳೆ ಆರೋಪ

ಮೈಸೂರು, ಜು.21(ಆರ್‌ಕೆಬಿ)– ತಾವು ಸ್ನಾನ ಮಾಡುತ್ತಿದ್ದುದನ್ನು ಗುಪ್ತವಾಗಿ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿರುವ ಪ್ರಮೋದ್ ಹಾಗೂ ಗೋವಿಂದರಾಜು ಎಂಬುವವರು ಅದನ್ನು ಇಟ್ಟುಕೊಂಡು ನನಗೆ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ. ಈ ಕುರಿತು ದೂರು ನೀಡಿದ್ದರೂ ಹೆಬ್ಬಾಳ ಠಾಣೆ ಪೊಲೀಸರು ಅವರ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ಹೆಬ್ಬಾಳ 1ನೇ ಹಂತದ ಗೃಹಿಣಿ ಆರೋಪಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರೋಪಿಗಳಿಬ್ಬರೂ ವಿಡಿಯೋ ದೃಶ್ಯ ತೋರಿಸಿ ತಮ್ಮನ್ನು ಬೆದರಿಸುತ್ತಿದ್ದರು. ಇದನ್ನು ಪ್ರಶ್ನಿಸಿದ ಬಳಿಕ ತಮ್ಮ ಮೇಲೆ ಹಲ್ಲೆ ಮಾಡಿದ್ದಾರೆ. ಈ ಕುರಿತು ಹೆಬ್ಬಾಳ ಠಾಣೆಯಲ್ಲಿ ದೂರು ದಾಖಲಾಗಿದ್ದರೂ ಪೊಲೀಸರು ಇದುವರೆಗೂ ಆರೋಪಿಗಳನ್ನು ಬಂಧಿಸಿಲ್ಲ. ಮೇಲಧಿಕಾರಿಗಳಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ. ಜೊತೆಗೆ ತಮಗೆ ಆರೋಪಿಗಳಿಬ್ಬರೂ ಕೊಲೆ ಬೆದರಿಕೆ ಹಾಕುತ್ತಿದ್ದಾರೆ. ಹೀಗಾಗಿ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದಾಗುವ ಯಾವುದೇ ಅನಾಹುತಗಳಿಗೆ ಪೊಲೀಸರೆ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಗೃಹಿಣಿಯ ಪತಿ ಮಂಜುನಾಥ್ ಉಪಸ್ಥಿತರಿದ್ದರು.

# ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು. 21– ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಜಿಲ್ಲಾ ಶಾಖೆಯು 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಜಿಲ್ಲಾ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹರು ಸ್ವವಿವರಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜು.28 ಕೊನೆದಿನ. ಮಾಹಿತಿಗೆ ಮೊ.988022527, 9901207250 ಸಂಪರ್ಕಿಸಬಹುದು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

22.07.2022 ಶುಕ್ರವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ನವಮೀ, ನಕ್ಷತ್ರ : ಭರಣಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಸೇಂಟ್ ಫಿಲೋಮಿನಾ ಕಾಲೇಜು, ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲ್ಯಾಂಗ್ವೇಜ್ :** ಹಿಂದಿಯ ಬೆಳವಣಿಗೆ ಹಂತ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಭಾರತ ಸರ್ಕಾರದ ಹಿಂದಿ ಎಜುಕೇಷನ್ ಬೋರ್ಡ್ ಉಪಾಧ್ಯಕ್ಷ ಅನಿಲ್ ಜೋಶಿ, ಉಪಸ್ಥಿತರು : ಡಾ. ಬರ್ನಾಡ್ ಪ್ರಕಾಶ್ ಬಾರ್ನಿಸ್, ಮರಿಯಾ ಕ್ಸೇವಿಯರ್, ಜಾನ್ ಪಾಲ್, ಕ್ರಿಸ್ಟೋಫರ್ ಎಸ್.ಜೆ., ಅಧ್ಯಕ್ಷತೆ : ಸೇಂಟ್ ಫಿಲೋಮಿನಾ ಕಾಲೇಜು ಪ್ರಿನ್ಸಿಪಾಲ್ ಡಾ. ರವಿ ಜೆ.ಡಿ. ಸಾಲ್ಡಾನ, ವಿಶೇಷ ಅತಿಥಿಗಳು : ಸಿಐಐಎಲ್ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಸ್ಥಳ: ಇಂಡೋರ್ ಸ್ಟೇಡಿಯಂ, ಸೇಂಟ್ ಫಿಲೋಮಿನಾ ಕಾಲೇಜು, ಬೆಳಗ್ಗೆ 9 ರಿಂದ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಶ್ರೀ ಚಕ್ರ ಪೂಜೆ, ಮಹಾಗಣಪತಿ ಹೋಮ, ಬೆಳಗ್ಗೆ 7.30ಕ್ಕೆ, ಯೋಗ ವಾಸಿಷ್ಠ ಕುರಿತು ಪ್ರವಚನ, ವಿಶೇಷ ಕಾರ್ಯಕ್ರಮ, ಶ್ರೀ ವಿಶಾಲಾಕ್ಷೀ ಅಮ್ಮನವರಿಗೆ ವಿಶೇಷ ಅರ್ಚನೆ, ಆಷಾಢಮಾಸ ಪ್ರಯುಕ್ತ ವಿಶೇಷ ಚಂಡಿಹೋಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ಶೃಂಗೇರಿ :** ಆಷಾಢ ಶುಕ್ರವಾರಗಳ ವಿಶೇಷ ಮಹೋತ್ಸವಗಳು, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ–ಅಭಿಷೇಕ, 8.30ಕ್ಕೆ ಶ್ರೀ ನವಚಂಡಿಕಾಯಾಗ, 11.30ಕ್ಕೆ ಹೋಮ ಪೂರ್ಣಾಹುತಿ, ಮ. 12ಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಶ್ರೀ ರಾಜರಾಜೇಶ್ವರಿ ಅಲಂಕಾರ, ಕೆ.ಪಿ. ಪ್ರಣವ್ ಮತ್ತು ವೃಂದದವರಿಂದ ಕೊಳಲು ವಾದನ, ಸ್ಥಳ : ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ.

■ **ಜಿಲ್ಲಾ ಬ್ರಾಹ್ಮಣ ಮಹಾಸಭಾ, ಯುವ ಬ್ರಾಹ್ಮಣ ಮಹಾಸಭಾ, ಜಿಲ್ಲಾ ಬ್ರಾಹ್ಮಣ ಮಹಿಳಾ ಘಟಕ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ :** ಮಹಾಸಭಾದ ಮಹಿಳಾ ಅಧ್ಯಕ್ಷೆ ಶುಭಮಂಗಳ ಸುನೀಲ್‌ಗೆ ಸನ್ಮಾನ ಹಾಗೂ ಮುತ್ತೈದೆಯರಿಗೆ ಬಾಗಿನ ಸಮರ್ಪಣೆ, ಉಪಸ್ಥಿತರು : ಶಾಸಕ ಜಿ.ಟಿ. ದೇವೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಎನ್.ವಿ. ಪಣೀಶ್, ನವೀನ್ ಕುಮಾರ್, ರಘುರಾಂ ವಾಜಪೇಯಿ, ಅಂಶಿಪ್ರಸನ್ನಕುಮಾರ್, ಜಿ.ಆರ್. ವಿದ್ಯಾರಣ್ಯ, ಎಂ.ಜಿ.ಆರ್. ಅರಸ್, ಲತಾ ರಾಜಶೇಖರ್, ಸ್ಥಳ: ಸಂಧ್ಯಾ ಚೇತನ ಸಭಾ ಭವನ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಭವಾನಿ ಅಸೋಸಿಯೇಟ್ಸ್ :** 47 ಜಿಎಸ್‌ಟಿ ಕೌನ್ಸಿಲ್ ಮೀಟಿಂಗ್, ವ್ಯವಹಾರದ ಮೇಲೆ ಪರಿಣಾಮ ಕುರಿತು ಚಾರ್ಟರ್ಡ್ ಅಕೌಂಟೆಂಟ್ ವೇಣುಗೋಪಾಲ್ ಗೆಲ್ಲ ಅವರಿಂದ ಉಪನ್ಯಾಸ, ಸ್ಥಳ: ರೋಟರಿ ಚಿಲ್ಡ್ರನ್ಸ್ ಲೈಬ್ರರಿ ಡಿ.ಜಿ. ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಶಾರದಾ ವಿಲಾಸ ಕಾಲೇಜು:** ಶಾರದಾ ಫೆಸ್ಟ್–2022 ಅಂತರ ಕಾಲೇಜು ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಾ ಫೆಸ್ಟ್, ಗೌರವ ಅತಿಥಿಗಳು: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಎನ್. ಚಂದ್ರಶೇಖರ್, ಡಾ.ಟಿ.ಕೆ. ಉಮೇಶ್, ಎಸ್.ಎಲ್.ರಾಮಚಂದ್ರ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ದೇವಿಕಾ, ಪ್ರಾಸ್ತಾವಿಕ ನುಡಿ : ಡಾ. ಸತ್ಯನಾರಾಯಣ, ಸ್ಥಳ: ವೆಂಕಟಕೃಷ್ಣಯ್ಯ ಹಾಲ್, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕಾಯಕಲ್ಪ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಅಜಾದಿ ಕಾ ಅಮೃತ್ ಮಹೋತ್ಸವ ಅಂಗವಾಗಿ ವಿಶೇಷ ಪ್ರಚಾರೋಪನ್ಯಾಸ ಮಾಲಿಕೆ ಕಾರ್ಯಕ್ರಮ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಡಾ.ಎಸ್.ವಿದ್ಯಾಶಂಕರ್, ಪ್ರೊ.ಜಿ.ಬಿ. ಶಿವರಾಜು ಅವರಿಂದ ಗಾಂಧೀ ವಿಚಾರಗಳ ಪ್ರಸ್ತುತತೆ ಮತ್ತು ಸ್ವಾತಂತ್ರ್ಯ ಸಂಗ್ರಾಮ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು: ಕರಾಮುವಿವಿ ಕುಲಸಚಿವ ಡಾ.ಎ.ಖಾದರ್ ಪಾಷ, ಸ್ಥಳ: ಕಾವೇರಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ರೋಟರಿ ಮೈಸೂರು ಉತ್ತರ:** ಜಲಸಿರಿ, ವನಸಿರಿ, ವಿದ್ಯಾಸಿರಿ, ಆರೋಗ್ಯಸಿರಿ ಕಾರ್ಯಕ್ರಮಗಳ ಉದ್ಘಾಟನೆ, ಮುಖ್ಯ ಅತಿಥಿಗಳು: ಜಿಲ್ಲಾ ಗವರ್ನರ್ ಹೆಚ್.ಆರ್.ಕೇಶವ್, ಕೆ.ಮಂಜುನಾಥ್, ರಾಮಾನುಜಂ, ಕೆ.ಎಚ್.ಪ್ರಸಾದ್, ಅಧ್ಯಕ್ಷತೆ: ರೋಟರಿ ಮೈಸೂರು ಉತ್ತರ ಅಧ್ಯಕ್ಷ ಜಗದೀಶ್ ಎಸ್.ಎಚ್, ಸ್ಥಳ: ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು, ಕುಂಬಾರಕೊಪ್ಪಲು, ಬೆಳಗ್ಗೆ 10.30 ರಿಂದ.

■ **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ, ಸಾಹಿತ್ಯಕ, ಕ್ರೀಡಾ ವೇದಿಕೆಗಳ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ, ಉದ್ಘಾಟನೆ: ಡಾ.ಅರ್ಪಿತಾ ಸಿಂಹ, ಮುಖ್ಯ ಅತಿಥಿಗಳು: ಕ್ರೀಡಾಪಟು ವಿ.ಅಂಬಿಕಾ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಮೂಗೇಶಪ್ಪ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ

■ **ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ :** ಆಷಾಢ ಶುಕ್ರವಾರದ ವಿಶೇಷ ಅಲಂಕಾರ ಹಾಗೂ ವಿಶೇಷ ಪೂಜೆ, ಹತ್ತಿಯಿಂದ ಅಲಂಕಾರ, ಬೆಳಗ್ಗೆ 8ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿತರಣೆ, ಸಂಜೆ 5ಕ್ಕೆ ಪ್ರಸಾದ ವಿತರಣೆ, ಸ್ಥಳ: ದೇವಸ್ಥಾನ, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ

■ **ಎಡಿನ್ ಸಿನರ್ಜಿ ಸಂಸ್ಥೆ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ, ಹೆಚ್.ಆರ್. ಫೋರಮ್, ನಂಜನಗೂಡು ಇಂಡಸ್ಟ್ರಿಯಲ್ ಅಸೋಸಿಯೇಷನ್ :** ಲೇಬರ್ ಕೋಡ್ಸ್ ಅಂಡ್ ದೇರ್ ಇಂಪ್ಯಾಕ್ಟ್ ಆನ್ ಬ್ಯುಸಿನೆಸ್ ಎಕೋಸಿಸ್ಟಮ್ ಕುರಿತು ವಿಶೇಷ ವೆಬಿನಾರ್ ಸರಣಿ ಕಾರ್ಯಕ್ರಮ, ಉದ್ಘಾಟನೆ : ಕಾರ್ಮಿಕ ಇಲಾಖೆಯ ಸಹಾಯಕ ಆಯುಕ್ತೆ ನಾಜಿಯ ಸುಲ್ತಾನ, ಉಪಸ್ಥಿತರು : ವಿದ್ಯಾವರ್ಧಕ ಕಾಲೇಜು ಪ್ರಿನ್ಸಿಪಾಲ್ ಡಾ. ಬಿ. ಸದಾಶಿವೇಗೌಡ, ನಂಜನಗೂಡು ಇಂಡಸ್ಟ್ರಿಯಲ್ ಅಸೋಸಿಯೇಷನ್ ಅಧ್ಯಕ್ಷ ಹೆಚ್. ರಾಮಕೃಷ್ಣ, ಡಾ. ಪಿ.ಎಸ್.ವಿ. ಬಾಲಾಜಿರಾವ್, ಸ್ಥಳ : ಎಡಿನ್ ಸಿನರ್ಜಿ, ಬೆಳಗ್ಗೆ 10.30ಕ್ಕೆ.

■ **ಮೀಡಿಯಾ ಟಿವಿ, ಎಸ್‌ಎಂಪಿ ಫೌಂಡೇಷನ್, ಬಿಎನ್‌ಆರ್‌ಎಸ್ :** ವೈದ್ಯರ ದಿನಾಚರಣೆ ಪ್ರಯುಕ್ತ ವೈದ್ಯರಿಗೆ ವೈದ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಉದ್ಯಮಿ ಮಹೇಶ್ ಶೆಣೈ, ಮುಖ್ಯ ಅತಿಥಿಗಳು : ಎಸ್‌ಎಂಪಿ ಡೆವಲಪರ್ಸ್ ಮಾಲೀಕ ಎಸ್.ಎಂ. ಶಿವಪ್ರಕಾಶ್, ಕೊರಿಯರ್ ವೆಂಕಟೇಶ್, ಬಿಎನ್‌ಆರ್‌ಎಸ್ ಸಂಸ್ಥೆ ರಕ್ಷಿತ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಗಾನಭಾರತಿ :** ಸಂಜೆ 6 ರಿಂದ ವಿದುಷಿ ಭುವನ ಗುರುಪ್ರಸಾದ್ ಅವರಿಂದ ಭರತನಾಟ್ಯ, ಸಂಜೆ 7.15ರಿಂದ ಶ್ರೀ ಉಮಾಮಹೇಶ್ವರ ನೃತ್ಯ ಕ್ಷೇತ್ರದ ವಿದ್ಯಾರ್ಥಿಗಳಿಂದ ಭರತನಾಟ್ಯ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಡಾ. ಎನ್. ಭಾಸ್ಕರ್ ಅವರಿಂದ ದೈನಂದಿನ ಜೀವನದಲ್ಲಿ ಗಣಿತದ ಅಪ್ಲಿಕೇಶನ್ ಕುರಿತು ತಾಂತ್ರಿಕ ಉಪನ್ಯಾಸ, ಗೌರವ ಅತಿಥಿಗಳು : ಪ್ರೊ. ಎಸ್. ಭಾರ್ಗವ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ. ಎನ್. ವೆಂಕೋಬರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಎಂ.ರಾಘವೇಂದ್ರ, ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ– ಡಾ.ಹೆಚ್.ಎಂ.ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆ–ರಾಜು ಅನಂತಸ್ವಾಮಿ ಮತ್ತು ಸಂಗಡಿಗರು, ಎಸ್.ಸುನೀತಾ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಡಾ.ಸಿ.ಎ. ಶ್ರೀಧರ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ– ಬಿ.ಆರ್. ಛಾಯಾ, ವಿದ್ಯಾ ಭೂಷಣ, 12.45ಕಾದಂಬರಿ ವಿಹಾರ– ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20ಭಾವಗೀತೆ–ಅರ್ಚನ ಕುಲಕರ್ಣಿ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 4.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ನಿರೂಪಣಾ ಸಾಹಿತ್ಯ–ಪ್ರೊ.ಆರ್.ವಿಶ್ವೇಶ್ವರನ್, ಪರಿಕಲ್ಪನೆ ಗೀತಾ ರಮಾನಂದ್, 4.30 ವೃತ್ತಿ ಮಾರ್ಗದರ್ಶನ– ಟೆಕ್ನಿಕಲ್ ಕೋರ್ಸ್ ಆಯ್ಕೆಗೆ ಆಪ್ತ ಸಲಹೆ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಸದಾಶಿವೇಗೌಡ ಬಿ.ಅವರೊಂದಿಗೆ ಮಾತುಕತೆ, 6.50 ಕೃಷಿರಂಗ– ಕಿಸಾನ್ ವಾಣಿ, ಆರ್ಥಿಕ ಅಭಿವೃದ್ಧಿಗಾಗಿ ತಂತ್ರಜ್ಞಾನದ ವಿನಿಮಯ–ಈ ವಿಷಯವಾಗಿ ಡಾ.ವಿಷ್ಣುವರ್ಧನ ಅವರೊಂದಿಗೆ ಸಂದರ್ಶನ, 7.45ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣೀ, ರಚನೆ ಮತ್ತು ಪ್ರಸ್ತುತಿ–ಸಿ.ಕೆ. ವಿಜಯ ನಾರಸಿಂಹ, ನಿರ್ಮಾಣ– ಎಸ್.ಲಕ್ಷ್ಮೀ ನಾರಾಯಣ, 9.00 ಸಂಧ್ಯಾ ರಾಗ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

## ಬೇರೆಯವರ ಮನೆ ಭೋಗ್ಯಕ್ಕೆ ನೀಡಿ 5 ಲಕ್ಷ ವಂಚಿಸಿದ ಭೂಪ!

ಕ್ರೈಂ ಬಾಕ್ಸ್

ಮೈಸೂರು,ಜು.21–ಬೇರೆಯವರ ಮನೆಯನ್ನು ತನ್ನದೇ ಮನೆ ಎಂದು ನಂಬಿಸಿ, ಭೋಗ್ಯದ ಕರಾರು ಮಾಡಿಕೊಂಡು 5 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಪುಷ್ಪಾ ರಮೇಶ್ ಶೇಟ್ (58) ವಂಚನೆಗೊಳಗಾದವರಾಗಿದ್ದು, ಮನೆಯ ನಕಲಿ ಮಾಲೀಕ ವಿನಯ್‌ಕುಮಾರ್, ಮನೆ ಬ್ರೋಕರ್‌ಗಳಾದ ಭಾರತಿ ಮತ್ತು ಸುನೀಲ್‌ಕುಮಾರ್ ವಿರುದ್ಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ರೋಕರ್‌ಗಳಾದ ಭಾರತಿ ಮತ್ತು ಸುನೀಲ್‌ಕುಮಾರ್ ಅವರು ಪುಷ್ಪಾ ಅವರಿಗೆ ವಿನಯ್‌ಕುಮಾರ್ ಎಂಬಾತನನ್ನು ಪರಿಚಯಿಸಿ ಆತನ ಮನೆ ಭೋಗ್ಯಕ್ಕಿದೆ ಎಂದು ತಿಳಿಸಿದ್ದಾರೆ. ವಿದ್ಯಾರಣ್ಯಪುರಂ 4ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ಮನೆ ಸಂಖ್ಯೆ 103ಅನ್ನು 13 ಲಕ್ಷ ರೂ. ಭೋಗ್ಯಕ್ಕೆ ನೀಡುವುದಾಗಿ ತಿಳಿಸಿ ಪುಷ್ಪಾ ಅವರಿಂದ 5 ಲಕ್ಷ ರೂ. ಪಡೆದು ಭೋಗ್ಯದ ಕರಾರು ಮಾಡಿಕೊಟ್ಟಿದ್ದಾರೆ. ಆದರೆ ಈ ಮನೆಯು ದಿವಂಗತ ಸತ್ಯಾನಂದ ಕುಮಾರ್ ಎಂಬುವರಿಗೆ ಸೇರಿದ್ದಾಗಿದ್ದು, ವಿನಯ್‌ಕುಮಾರ್ ಮನೆಯ ಮಾಲೀಕನಲ್ಲ ಎಂದು ತಿಳಿದ ನಂತರ ತಮ್ಮ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದರೆ ಕೊಡದೆ ವಂಚನೆ ಎಸಗಿದ್ದಾರೆ ಎಂದು ಪುಷ್ಪಾ ನೀಡಿದ ದೂರನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ.

## ಕಾರ್ಮಿಕನ ಬೈಕ್ ಕಳವು

ಕೆ.ಆರ್.ನಗರ, ಜು.21– ಕೂಲಿ ಕೆಲಸಕ್ಕೆಂದು ಕಾರ್ಮಿಕನನ್ನು ಕರೆದು, ಆತನ ಬೈಕನ್ನೇ ಖದೀಮನೋರ್ವ ಎಗರಿಸಿದ್ದಾನೆ. ಹುಣಸೂರು ತಾಲೂಕು ಮಾರಗೌಡನಹಳ್ಳಿ ಗ್ರಾಮದ ಕಾರ್ಮಿಕ ಮಂಜೇಗೌಡ (44) ಬೈಕ್ ಕಳೆದುಕೊಂಡವನಾಗಿದ್ದು, ಪ್ರತಿದಿನ ಈತ ತನ್ನ ಹೀರೊಹೋಂಡಾ ಸ್ಪ್ಲೆಂಡರ್ ಬೈಕ್ (ಕೆಎ45, ವೈ5371)ನಲ್ಲಿ ಕೆ.ಆರ್.ನಗರದ ಗರುಡಗಂಭ ಸರ್ಕಲ್‌ಗೆ ತೆರಳುತ್ತಿದ್ದ. ಅಲ್ಲಿ ಯಾರಾದರೂ ಬಂದು ಕೂಲಿ ಕೆಲಸಕ್ಕೆ ಕರೆದರೆ ಹೋಗಿ ಕೆಲಸ ಮಾಡಿ ಬರುತ್ತಿದ್ದ. ಜೂ.10ರಂದು ಬೆಳಗ್ಗೆ ವ್ಯಕ್ತಿಯೋರ್ವ ಈತನ ಬಳಿಗೆ ಬಂದು ಗಾರೆ ಕೆಲಸಕ್ಕೆ ಬರುತ್ತೀಯಾ ಎಂದು ಕರೆದಿದ್ದಾನೆ. ಈತ ಒಪ್ಪಿಕೊಂಡ ನಂತರ ತನ್ನ ಬೈಕ್ ರಿಪೇರಿಗೆ ಬಿಟ್ಟಿರುವುದಾಗಿ ಹೇಳಿ, ನಿನ್ನ ಬೈಕ್‌ನಲ್ಲೇ ಹೋಗೋಣ ಎಂದು ಕರೆದೊಯ್ದಿದ್ದಾನೆ. ದೊಡ್ಡೇಕೊಪ್ಪಲು ಗ್ರಾಮದ ಬಳಿ ಬಂದಾಗ ಮಂಜೇಗೌಡನ ಫೋನನ್ನೇ ಪಡೆದು ಯಾರಿಗೋ ಕರೆ ಮಾಡಿದ ನಂತರ ಮತ್ತೊಬ್ಬ ಕಾರ್ಮಿಕನನ್ನು ಕರೆತರುತ್ತೇನೆ ಎಂದು ಹೇಳಿ ಬೈಕ್ ಕೊಂಡೊಯ್ದವನು ಮತ್ತೆ ಬರಲೇ ಇಲ್ಲ. ಈ ಸಂಬಂಧ ಜು.19ರಂದು ಮಂಜೇಗೌಡ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆ.ಆರ್.ನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

## ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರುಗಳ ರಕ್ಷಣೆ

ನಾಗಮಂಗಲ,ಜು.21–ಕಸಾಯಿಖಾನೆಗೆ ಸಾಗಿಸುತ್ತಿದ್ದ ನಾಲ್ಕು ಜಾನುವಾರುಗಳನ್ನು ರಕ್ಷಿಸಿರುವ ಬೆಳ್ಳೂರು ಠಾಣೆ ಪೊಲೀಸರು, ನಾಲ್ವರನ್ನು ಬಂಧಿಸಿ, ಗೂಡ್ಸ್ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಮೂಲತಃ ಕುಣಿಗಲ್ ತಾಲೂಕು ಹಂಪಾಪುರ ಗ್ರಾಮದವನಾಗಿದ್ದು, ಹಾಲಿ ಬೆಂಗಳೂರಿನ ಕಮಲಾನಗರದಲ್ಲಿ ವಾಸಿಸುತ್ತಿರುವ ಬಿ.ಸಿ.ರೋಹಿತ್ (23), ನಾಗಮಂಗಲ ತಾಲೂಕು ಯಲಚಿಕೆರೆ ಗ್ರಾಮದ ಸುರೇಶ್, ಚನ್ನರಾಯಪಟ್ಟಣ ತಾಲೂಕು ದೊಡ್ಡಮತ್ತೀಘಟ್ಟ ಗ್ರಾಮದ ಸ್ವಾಮಿ (38), ಚನ್ನರಾಯಪಟ್ಟಣ ತಾಲೂಕು ಗೂರನಹಳ್ಳಿ ಗ್ರಾಮದ ಶಿವೇಗೌಡ (59) ಬಂಧಿತ ಆರೋಪಿಗಳು.

ಇವರು ಹಾಸನದ ಸಂತೆಯಲ್ಲಿ ರೈತರಿಂದ ನಾಲ್ಕು ಹೋರಿಗಳನ್ನು ಖರೀದಿಸಿ ಬೆಂಗಳೂರಿನ ಕಸಾಯಿಖಾನೆಗೆ ಅಶೋಕ ಲೈಲ್ಯಾಂಡ್ ದೋಸ್ತ್ ಗೂಡ್ಸ್ (ಕೆಎ54, 8443) ವಾಹನದಲ್ಲಿ ಸಾಗಿಸುತ್ತಿದ್ದಾಗ ಜು.20ರಂದು ಮುಂಜಾನೆ ಬೆಳ್ಳೂರು ಠಾಣೆ ಸಬ್‌ಇನ್ಸ್‌ಪೆಕ್ಟರ್ ಲೋಕೇಶ್ ಮತ್ತು ಸಿಬ್ಬಂದಿ ಮಂಗಳೂರು–ಬೆಂಗಳೂರು ರಸ್ತೆಯ ನೆಲ್ಲಿಗೆರೆ ಸರ್ಕಲ್ ಬಳಿ ವಾಹನವನ್ನು ತಡೆದು ತಪಾಸಣೆ ನಡೆಸಿದಾಗ ಜಾನುವಾರುಗಳ ಸಾಗಾಣಿಕೆ ಪತ್ತೆಯಾಗಿ ಇವರೆಲ್ಲರನ್ನು ಬಂಧಿಸಿ, ಜಾನುವಾರುಗಳನ್ನು ರಕ್ಷಿಸಿದ್ದಾರೆ.

## ನಾಪತ್ತೆಯಾಗಿದ್ದ ಲಾರಿ ಚಾಲಕ ಹತ್ಯೆ

ನಂಜನಗೂಡು,ಜು.21–ನಾಲ್ಕು ತಿಂಗಳ ಹಿಂದೆ ನಾಪತ್ತೆಯಾಗಿದ್ದ ಲಾರಿ ಚಾಲಕನೋರ್ವ ಕೊಲೆಯಾಗಿರುವುದು ಬೆಳಕಿಗೆ ಬಂದಿದೆ. ತಾಲೂಕಿನ ಕಾರ್ಯ ಗ್ರಾಮದ ಸಿ.ದೇವರಾಜು(29) ಕೊಲೆಯಾದವನಾಗಿದ್ದು, ಈತನನ್ನು ಅದೇ ಗ್ರಾಮದ ಅನಿಲ್ ಕುಮಾರ್ ಎಂಬಾತ ಹತ್ಯೆ ಮಾಡಿರುವುದಾಗಿ ಪ್ರಕರಣ ದಾಖಲಾಗಿದೆ.

**ವಿವರ:** ಲಾರಿ ಚಾಲಕ ದೇವರಾಜು, ಕೆಲಸಕ್ಕೆ ಹೋಗಿ 15 ದಿನಕ್ಕೆ ಅಥವಾ ತಿಂಗಳಿಗೊಮ್ಮೆ ಮನೆಗೆ ಬರುತ್ತಿದ್ದ. ಕಳೆದ ಮಾ.20ರಂದು ಮನೆಯಿಂದ ಹೋದವನು ಮತ್ತೆ ವಾಪಸ್ಸಾಗದ ಕಾರಣ ಆತನ ಪತ್ನಿ ರಾಜಮ್ಮ ಜು.8ರಂದು ಹುಲ್ಲಹಳ್ಳಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು. ಜು.18ರಂದು ಮಧ್ಯಾಹ್ನ ಪತಿ ನಾಪತ್ತೆಯಾಗಿದ್ದನ್ನು ನೆನೆಸಿಕೊಂಡು ರಾಜಮ್ಮ ಅಳುತ್ತಿದ್ದಾಗ ಅಲ್ಲಿಗೆ ಬಂದ ಅದೇ ಗ್ರಾಮದ ಶಿವಣ್ಣ ಎಂಬಾತ, ಮಾ.20ರಂದು ಮಧ್ಯಾಹ್ನ ದೇವರಾಜು ಜೊತೆ ತಾನು ಮತ್ತು ಅನಿಲ್‌ಕುಮಾರ್ ಸೇರಿ ಕಾರ್ಯ ಸಮೀಪವಿರುವ ಕಾಲುವೆ ಬಳಿ ಪಾರ್ಟಿ ಮಾಡಿದ್ದಾಗಿಯೂ, ಈ ವೇಳೆ ಮಹಿಳೆಯೋರ್ವಳಿಗೆ ಸಂಬಂಧಿಸಿದಂತೆ ಅನಿಲ್‌ಕುಮಾರ್ ಮತ್ತು ದೇವರಾಜು ನಡುವೆ ಗಲಾಟೆ ನಡೆದು ದೇವರಾಜನ ಮೇಲೆ ಹಲ್ಲೆ ನಡೆಸಿದ ಅನಿಲ್‌ಕುಮಾರ್ ಕಾಲುವೆಯ ಹರಿಯುವ ನೀರಿನಲ್ಲಿ ಆತನನ್ನು ತಳ್ಳಿದ್ದಾಗಿಯೂ, ಆ ಸಂದರ್ಭ ದೇವರಾಜುವನ್ನು ರಕ್ಷಿಸಲು ತಾನೂ ಕಾಲುವೆಗೆ ಧುಮುಕಿ ಪ್ರಯತ್ನಿಸಿದ್ದು, ಅಷ್ಟರಲ್ಲಿ ದೇವರಾಜ ಕೊಚ್ಚಿಕೊಂಡು ಹೋದನು ಎಂದು ಹೇಳಿದ್ದಲ್ಲದೇ ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಅನಿಲ್‌ಕುಮಾರ್ ತನ್ನನ್ನು ಹೆದರಿಸಿದ್ದಾನೆ ಎಂದು ತಿಳಿಸಿದ್ದಾನೆ. ಹೀಗಾಗಿ ತನ್ನ ಗಂಡನನ್ನು ಅನಿಲ್‌ಕುಮಾರ್ ಕೊಲೆ ಮಾಡಿದ್ದಾನೆ ಎಂದು ರಾಜಮ್ಮ ನೀಡಿದ ದೂರನ್ನು ಹುಲ್ಲಹಳ್ಳಿ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

## ಕ್ಲರ್ಕ್ ಕೆಲಸ ಕೊಡಿಸುವುದಾಗಿ 2.80 ಲಕ್ಷ ವಂಚನೆ

ಪಿರಿಯಾಪಟ್ಟಣ, ಜು.21–ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ಕ್ಲರ್ಕ್ ಹುದ್ದೆ ಕೊಡಿಸುವುದಾಗಿ ಬಿಬಿಎಂ ಪದವೀಧರೆಗೆ 2.80 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಪಿರಿಯಾಪಟ್ಟಣ ತಾಲೂಕು ಪಂಚವಳ್ಳಿ ಗ್ರಾಮದ ಪಿ.ಸಿ.ಪಲ್ಲವಿ(30) ವಂಚನೆಗೊಳಗಾದವರಾಗಿದ್ದು, ಪಿರಿಯಾಪಟ್ಟಣ ತಾಲೂಕು ವಡೇರ ಹೊಸಹಳ್ಳಿ ಗ್ರಾಮದ ಸೋಮಣ್ಣ ಮತ್ತು ಕೆ.ಆರ್.ಪೇಟೆ ತಾಲೂಕು ತುರುಕನಕೊಪ್ಪ ಗ್ರಾಮದ ಟಿ.ಎನ್.ಮಾದೇಶ್ ವಂಚನೆ ಆರೋಪಕ್ಕೆ ಗುರಿಯಾದವರಾಗಿದ್ದಾರೆ.

**ವಿವರ:** ಬಿಬಿಎಂ ಪದವೀಧರೆಯಾಗಿರುವ ಪಲ್ಲವಿ ಯಾವುದಾದರೂ ಕೆಲಸ ದೊರೆತರೆ ಹೋಗುವುದಾಗಿ ತಂದೆ ಮತ್ತು ಪತಿಗೆ ತಿಳಿಸಿದ್ದರು. ಇವರ ತಂದೆಯ ಮನೆಗೆ ಬರುತ್ತಿದ್ದ ಸೋಮಣ್ಣ 2018ರ ಜೂನ್‌ನಲ್ಲಿ ಟಿ.ಎನ್.ಮಾದೇಶ್‌ನನ್ನೂ ಕರೆದುಕೊಂಡು ಪಂಚವಳ್ಳಿಯ ಇವರ ಮನೆಗೆ ಬಂದಿದ್ದಾನೆ. ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ಕ್ಲರ್ಕ್ ಹುದ್ದೆ ಖಾಲಿ ಇದ್ದು, 4 ಲಕ್ಷ ರೂ. ಕೊಟ್ಟರೆ ಹುದ್ದೆ ಕೊಡಿಸುವುದಾಗಿ ಇವರಿಬ್ಬರೂ ನಂಬಿಸಿದ್ದಾರೆ. ಇವರ ಮಾತನ್ನು ನಂಬಿದ ಪಲ್ಲವಿ ಹಾಗೂ ಕುಟುಂಬದವರು 2018ರ ಜೂನ್ 1ರಿಂದ ಜುಲೈ 19ರವರೆಗೆ ಹಂತಹಂತವಾಗಿ 4 ಲಕ್ಷ ರೂ.ಗಳನ್ನು ಇವರಿಬ್ಬರಿಗೂ ಕೊಟ್ಟಿದ್ದಾರೆ. 4 ವರ್ಷ ಕಳೆದರೂ ಕೆಲಸ ದೊರೆಯದ ಕಾರಣ ತಮ್ಮ ಹಣ ವಾಪಸ್ ನೀಡುವಂತೆ ಸೋಮಣ್ಣ ಮನೆಗೆ ಪಲ್ಲವಿ ಕುಟುಂಬದವರು ಹೋಗಿ ಕೇಳಿದಾಗ ಬಹಳ ಸತಾಯಿಸಿ ಅವರಿಗೆ 1.20 ಲಕ್ಷ ರೂ.ಗಳನ್ನು ಹಿಂತಿರುಗಿಸಲಾಗಿದೆ. ಉಳಿದ 2.80 ಲಕ್ಷ ರೂ.ಗಳಿಗಾಗಿ ಸೋಮಣ್ಣ ಮತ್ತು ಮಾದೇಶ್ ಮನೆಗೆ ಅಲೆದಾಡಿದರೂ ಹಣ ನೀಡದೇ ಉಡಾಫೆಯಿಂದ ವರ್ತಿಸುತ್ತಿದ್ದಾರೆ ಎಂದು ಪಲ್ಲವಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪಿರಿಯಾಪಟ್ಟಣ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

## ಟ್ರಾಕ್ಟರ್‌ನಿಂದ ಬಿದ್ದು ಕಾರ್ಮಿಕ ಸಾವು

ಹೆಚ್.ಡಿ.ಕೋಟೆ, ಜು.21–ಟ್ರಾಕ್ಟರ್‌ನಿಂದ ಬಿದ್ದು ಕಾರ್ಮಿಕ ಸಾವನ್ನಪ್ಪಿದ ಘಟನೆ ಹೆಚ್.ಡಿ.ಕೋಟೆ ತಾಲೂಕು ಮಾರನಹಾಡಿ ಮತ್ತು ಮಳಲಿ ನಡುವೆ ಸಂಭವಿಸಿದೆ.

ಮಾರನಹಾಡಿ ನಿವಾಸಿ ಕರಿಯ (50) ಅಪಘಾತದಲ್ಲಿ ಮೃತಪಟ್ಟವ. ಇದೇ ಗ್ರಾಮದ ತಿಮ್ಮಾನಾಯಕ ಎಂಬುವರು ಟ್ರಾಕ್ಟರ್ (ಕೆಎ45 ಟಿಎ1988)ನಲ್ಲಿ ಮರ ತುಂಬಿಕೊಂಡು ಕಾರ್ಮಿಕರಾದ ಲೋಕೇಶ, ಮಂಜು, ಕರಿಯ, ಸುರೇಶ್ ಎಂಬುವರನ್ನು ಟ್ರಾಕ್ಟರ್‌ನಲ್ಲಿ ಕೂರಿಸಿಕೊಂಡು ತೆರಳುತ್ತಿದ್ದರು. ಮಾರನಹಾಡಿ–ಮಳಲಿ ರಸ್ತೆ ತಿರುವಿನಲ್ಲಿ ವೇಗವಾಗಿ ಟ್ರಾಕ್ಟರ್ ಚಾಲನೆ ಮಾಡಿದಾಗ ಟ್ರಾಕ್ಟರ್‌ನ ಮಡ್‌ಗಾರ್ಡ್ ಮೇಲೆ ಕುಳಿತಿದ್ದ ಕಾರ್ಮಿಕ ಕರಿಯ ಕೆಳಗೆ ಬಿದ್ದು ಸಾವನ್ನಪ್ಪಿದ್ದಾನೆ. ಬೀಚನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪ್ರತಿಭಾವಂತ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪುರಸ್ಕಾರ

ಮೈಸೂರು,ಜು.21–ಮೈಸೂರಿನ ಆದರ್ಶ ಸೇವಾ ಸಂಘವು ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮತ್ತು ಬೆಂಗಳೂರಿನ ವಿಶ್ವ ವಿಪ್ರ ಪರಿಷತ್ ಸಹಕಾರದೊಂದಿಗೆ ಆ.13ರಂದು ಬೆಳಗ್ಗೆ 10 ಗಂಟೆಗೆ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಪ್ರತಿಭಾವಂತ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪುರಸ್ಕಾರ ಸಮಾರಂಭ ಏರ್ಪಡಿಸಿದೆ. 2022ರಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ರಾಜ್ಯದ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳು ಅರ್ಜಿಯನ್ನು Adarshasevasangha@gmail.com ಮೂಲಕ ಅಥವಾ ಸಂಘದ ಕಚೇರಿ ಮತ್ತು ಸಂಘದ ನಿರ್ದೇಶಕರಿಂದ ಪಡೆದು ತುಂಬಿದ ಅರ್ಜಿಗಳನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಜುಲೈ 31ರೊಳಗೆ ಆದರ್ಶ ಸೇವಾ ಸಂಘ, ನಂ.2, ಬ್ಲಾಕ್ 27, ಮಧುವನ ಬಡಾವಣೆ, ಶ್ರೀರಾಂಪುರ 2ನೇ ಹಂತ, ಮೈಸೂರು–570 034 ವಿಳಾಸಕ್ಕೆ ತಲುಪಿಸಬೇಕು. ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕ್ರೀಡೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಸೇವೆ ಇತ್ಯಾದಿ ಮೂಲಕ ಪ್ರತಿಭೆ ತೋರಿರುವ ಪ್ರತಿಭಾವಂತ ಬ್ರಾಹ್ಮಣರು ವಿವರಗಳೊಂದಿಗೆ ಆದರ್ಶ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ.

# ಅಯ್ಯೋ...! ಈ ಬಾರಿ ದಸರಾದಲ್ಲಾದರೂ ಗುಂಡಿಮುಕ್ತ ಮೈಸೂರು ನೋಡಬಹುದೇ...!

### ಹದಗೆಟ್ಟ ರೀತಿಯಲ್ಲೇ ಅಂದಗೊಳಿಸುವುದರಲ್ಲಿ ನಮ್ಮ ಜನಪ್ರತಿನಿಧಿಗಳು, ಅಧಿಕಾರಿಗಳು ಸಿದ್ಧಹಸ್ತರು!

ಮೈಸೂರು, ಜು.21 (ಎಸ್‌ಬಿಡಿ)– ಈ ಬಾರಿಯ ದಸರಾ ಮಹೋತ್ಸವದ ವೇಳೆಗಾದರೂ ಮೈಸೂರು 'ಗುಂಡಿಮುಕ್ತ ನಗರ'ವಾಗುವುದೇ? ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ಕೊರೊನಾ ಕಾರಣದಿಂದ ಕಳೆದೆರಡು ವರ್ಷ ಸರಳ ಹಾಗೂ ಸಾಂಪ್ರದಾಯಿಕ ದಸರಾ ನಡೆಸಿದ ಹಿನ್ನೆಲೆಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ನಡೆಸಲಿಲ್ಲ. ದಸರಾ ನೆಪದಲ್ಲಾದರೂ ರಸ್ತೆ ಗುಂಡಿ ಮುಚ್ಚುವ ವಾಡಿಕೆಗೂ ಬ್ರೇಕ್ ಬಿದ್ದಿತ್ತು. ಕೊರೊನೋತ್ತರದಲ್ಲಾದರೂ ರಸ್ತೆ ದುರಸ್ತಿ ಆಗಬಹುದು ಎನ್ನುವ ನಿರೀಕ್ಷೆಗೂ ಆಗಾಗ್ಗೆ ಅರ್ಭಟಿಸಿದ ಮಳೆ ತಣ್ಣೀರೆರಚಿತು. ಇದೀಗ ಮತ್ತೆ ದಸರೆ ಬಂದಿದೆ. ಸರಿಯಾಗಿ ಇನ್ನೆರಡು ತಿಂಗಳು ಕಳೆದರೆ ನವರಾತ್ರಿ ಉತ್ಸವ ಆರಂಭವಾಗುತ್ತದೆ. 2–3 ವರ್ಷಗಳ ಗಂಡಾಗುಂಡಿ ಸಂಚಾರದಿಂದ ರೋಸಿಹೋಗಿರುವ ಜನ, ಈ ಬಾರಿಯಾದರೂ ಸುಸ್ಥಿರ ರಸ್ತೆಯಲ್ಲಿ ದಸರಾ ಸಂಭ್ರಮಿಸುವ ನಿರೀಕ್ಷೆಯಲ್ಲಿದ್ದಾರೆ.

ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಭೇಟಿ ನೀಡಿದ್ದ ಹಿನ್ನೆಲೆಯಲ್ಲಿ ಅವರು ಸಂಚರಿಸಿದ ಹಾಗೂ ಸಂಚರಿಸಬಹುದಾಗಿದ್ದ ಕೆಲ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ನಗರ ಬಸ್ ನಿಲ್ದಾಣದಿಂದ ಗ್ರಾಮಾಂತರ ಪ್ರದೇಶಗಳಿಗೆ ಸಂಚರಿಸುವ ಬಸ್ಸುಗಳು ನ್ಯೂ ಸಯ್ಯಾಜಿರಾವ್ ರಸ್ತೆಗೆ ತಿರುವು ಪಡೆಯುವ ಸ್ಥಳದಲ್ಲಿ ಮಾತ್ರ ಒಂದೆರಡು ಗುಂಡಿಯಾಗಿರುವುದನ್ನು ಬಿಟ್ಟರೆ ಉಳಿದೆಲ್ಲಾ ಕಡೆ ಈವರೆಗೂ ಸುಸ್ಥಿತಿಯಲ್ಲಿದೆ. ಕೃಷ್ಣರಾಜ ಹಾಗೂ ಚಾಮರಾಜ ಕ್ಷೇತ್ರಗಳಲ್ಲಿ ಹಲವು ರಸ್ತೆ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿದ್ದು, ಅವುಗಳೆಲ್ಲಾ ದಸರಾ ವೇಳೆಗೆ ಅನುಷ್ಠಾನಕ್ಕೆ ಬರುವುದೇ ಎಂದು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸ್ಪಷ್ಟಪಡಿಸಬೇಕಿದೆ.

**ಮೇಯರ್ ವಾಗ್ದಾನ:** ಮೈಸೂರು ನಗರ ಪಾಲಿಕೆ ಆಡಳಿತ ಚುಕ್ಕಾಣಿ ಹಿಡಿಯಲು ನಿರಂತರ ಪ್ರಯತ್ನ ನಡೆಸಿ, ವಿಫಲವಾಗಿದ್ದ ಬಿಜೆಪಿಗೆ ಅನಿರೀಕ್ಷಿತ ಸದವಕಾಶ ಸೃಷ್ಟಿಯಾಗಿ ಸುನಂದಾ ಪಾಲನೇತ್ರ ಅವರು ಬಿಜೆಪಿಯ ಮೊದಲ ಮೇಯರ್ ಆಗಿ ಆಯ್ಕೆಯಾದರು. ಕಳೆದ ವರ್ಷದ ದಸರಾ ಹೊಸ್ತಿಲಲ್ಲಿ ಆಯ್ಕೆಯಾದ ಸುನಂದಾ ಪಾಲನೇತ್ರ ಅವರು ನವರಾತ್ರಿ ಉತ್ಸವದೊಳಗೆ ಮೈಸೂರನ್ನು ಗುಂಡಿಮುಕ್ತ ನಗರವನ್ನಾಗಿಸುವ ಭರವಸೆ ನೀಡಿ, ಅನುದಾನಕ್ಕಾಗಿ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದರು. ಆದರೆ ಕಳೆದ ದಸರಾ ಹೊತ್ತಿಗೆ ರಸ್ತೆ ಅಭಿವೃದ್ಧಿ ಹಾಗೂ ದುರಸ್ತಿ ಸಾಧ್ಯವಾಗಲಿಲ್ಲ. ಈ ಬಾರಿಯಾದರೂ ಆ ಮಾತು ನಿಜವಾಗುವುದೇ ಎಂದು ಜನ ಕಾತುರರಾಗಿದ್ದಾರೆ.

ಈ ಬಗ್ಗೆ ಮೇಯರ್ ಸುನಂದಾ ಪಾಲನೇತ್ರ ಅವರು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಕಳೆದ ವರ್ಷದ ದಸರಾ ಮಹೋತ್ಸವದ ವೇಳೆಗೆ ಮೈಸೂರನ್ನು ಗುಂಡಿಮುಕ್ತ ನಗರವನ್ನಾಗಿಸಲು ಮುಖ್ಯಮಂತ್ರಿಗಳ ನೆರವು ಕೇಳಿದ್ದೆ. ಆದರೆ ಆ ಸಂದರ್ಭಕ್ಕೆ ಕೋವಿಡ್ ಮತ್ತಿತರ ಕಾರಣಗಳಿಂದ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಲಿಲ್ಲ. ನಂತರದಲ್ಲಿ ಮುಖ್ಯಮಂತ್ರಿಗಳು 50 ಕೋಟಿ ರೂ. ವಿಶೇಷ ಅನುದಾನ ನೀಡಿದ್ದು, ಅದರಲ್ಲಿ 25 ಕೋಟಿ ರೂ. ಬಿಡುಗಡೆಯೂ ಆಗಿದೆ. ಅದರಲ್ಲಿ ಸಾಕಷ್ಟು ರಸ್ತೆಗಳ ಗುಂಡಿ ಮುಚ್ಚುವ ಕೆಲಸವಾಗಿದೆ. ಮಳೆ ಕಾರಣದಿಂದ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿ ವಿಳಂಬವಾಗಿದೆ. ವಾರ್ಡ್‌ಗಳ ರಸ್ತೆ ಗುಂಡಿ ಮುಚ್ಚಲು ತಲಾ 10 ಲಕ್ಷ ರೂ. ಅನುದಾನ ನೀಡಲಾಗಿದ್ದು, ಆಯಾಯ ಸದಸ್ಯರು ನಿರ್ವಹಿಸಲಿದ್ದಾರೆ. ಆದರೆ ಈ ಬಾರಿ ದಸರಾ ವೇಳೆಗೆ ನಗರದ ಪ್ರಮುಖ ರಸ್ತೆಗಳನ್ನು ಗುಂಡಿಮುಕ್ತ ಮಾಡುವುದು ಖಚಿತ ಎಂದು ಸ್ಪಷ್ಟಪಡಿಸಿದ್ದಾರೆ.



ಮೈಸೂರು ನಗರ ಪಾಲಿಕೆ ಹಿಂಭಾಗದ ಡಿ.ಬನುಮಯ್ಯ ರಸ್ತೆಯ ದುಸ್ಥಿತಿ.

**ಖಾಲಿ ಭರವಸೆ ಆಗಬಾರದು:** 'ಗುಂಡಿಮುಕ್ತ ಮೈಸೂರು' ಘೋಷಣೆ ಹೊಸದಲ್ಲ. ಈ ಹಿಂದೆಯೂ ಸಾಕಷ್ಟು ಬಾರಿ ಹೀಗೆ ವಾಗ್ದಾನ ನೀಡಿ, ನಂತರದಲ್ಲಿ ಆ ಮಾತು ಕಾಲದೊಳಗೆ ಕಾಲವಾಗಿ ಹೋಗಿದೆ. 2017–18ನೇ ಸಾಲಿನ ಪಾಲಿಕೆ ಬಜೆಟ್ ವೇಳೆಯೂ 'ಗುಂಡಿಮುಕ್ತ ಮೈಸೂರು' ಘೋಷಣೆ ಸದ್ದು ಮಾಡಿತ್ತು. ನಂತರದ ವರ್ಷಗಳಲ್ಲೂ ಇದು ಸಹಜವಾಗಿ ಕೇಳಿಬಂದಿತ್ತು. ಮೇಯರ್‌ಗಳು ಬದಲಾದರು ಆದರೆ ಮೈಸೂರಿನ ಸ್ಥಿತಿ ಸುಧಾರಿಸಲೇ ಇಲ್ಲ. ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ನಡೆಸುವಂತೆ ದಸರಾಗೆ ಕೆಲವೇ ದಿನ ಇರುವಾಗ ರಸ್ತೆಗಳಿಗೆ ತೇಪೆ ಹಾಕುವ ವಾಡಿಕೆ ಮಾತ್ರ ಮುಂದುವರೆಯಿತು. ನವರಾತ್ರಿ ಮುಗಿಯುವ ಹೊತ್ತಿಗೆ ಆ ರಸ್ತೆಗಳೂ ಹಾಳಾಗಿ ಹೋಗುವುದು ಸಾಮಾನ್ಯ. ಆದರೆ ಈ ಬಾರಿ ದಸರಾ ವೇಳೆಗೆ ಪ್ರಮುಖ ರಸ್ತೆಗಳು ಗುಂಡಿಮುಕ್ತ ಎಂದು ಮೇಯರ್ ಸ್ಪಷ್ಟವಾಗಿ ಹೇಳಿದ್ದು, ಫಲಿತಾಂಶವನ್ನು ಕಾದು ನೋಡೋಣ ಎಂಬುದು ಸಾರ್ವಜನಿಕರ ಆಶಾಭಾವದ ನುಡಿಗಳಾಗಿವೆ.

### ವೃತ್ತ ಅಲಂಕಾರಕ್ಕೆ 10 ಕೋಟಿಗೆ ಮನವಿ



"ಈ ಬಾರಿ ವಿಜೃಂಭಣೆಯಿಂದ ದಸರಾ ಮಹೋತ್ಸವ ಆಚರಿಸಲು ಸರ್ಕಾರ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಮೈಸೂರು–ಬೆಂಗಳೂರು ಮುಖ್ಯ ರಸ್ತೆ ಹಾಗೂ ಜಂಬೂ ಸವಾರಿ ಸಾಗುವ ಮಾರ್ಗದ ಪ್ರಮುಖ ವೃತ್ತಗಳ ಅಭಿವೃದ್ಧಿ ಹಾಗೂ ಸೌಂದರ್ಯೀಕರಣಕ್ಕೆ 10 ಕೋಟಿ ರೂ. ವಿಶೇಷ ಅನುದಾನ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮನವಿ ಮಾಡಿದ್ದೇನೆ. ಈ ಬಗ್ಗೆ ಮತ್ತೊಮ್ಮೆ ಅವರ ಗಮನಕ್ಕೆ ತಂದು ಅನುದಾನಕ್ಕೆ ಒತ್ತಾಯಿಸುತ್ತೇನೆ. ಅಭಿವೃದ್ಧಿ ಕಾರ್ಯಗಳಿಗೆ 50 ಕೋಟಿ ನೀಡಿರುವ ಮುಖ್ಯಮಂತ್ರಿಗಳು, ದಸರಾ ವೈಭವಕ್ಕೆ ಮೆರುಗು ನೀಡುವ ನಿಟ್ಟಿನಲ್ಲಿ ವೃತ್ತ ಸೌಂದರ್ಯೀಕರಣಕ್ಕೂ ಅನುದಾನ ನೀಡುವ ವಿಶ್ವಾಸವಿದೆ."

–ಮೇಯರ್ ಸುನಂದಾ ಪಾಲನೇತ್ರ

**ಕಾಮಗಾರಿಗೆ ಸಿದ್ಧ:** ಪ್ರಧಾನಿ ಮೋದಿ ಅವರ ಭೇಟಿ ಸಂದರ್ಭದಲ್ಲಿ ಪ್ರಮುಖ 18 ಕಿ.ಮೀ. ರಸ್ತೆಯನ್ನು ಎಸ್‌ಎಫ್‌ಸಿ ವಿಶೇಷ ಅನುದಾನದ 7.50 ಕೋಟಿ ರೂ.ಗಳಲ್ಲಿ ಅಭಿವೃದ್ಧಿಪಡಿಸಲಾಗಿದೆ. ಪಾಲಿಕೆ ಮೂಲಕವೇ ಕಾಮಗಾರಿಯ ಪ್ರತಿ ಹಂತದಲ್ಲೂ ಪರಿಶೀಲನೆ ನಡೆಸಿ ಗುಣಮಟ್ಟದ ಕಾಮಗಾರಿ ನಡೆಸಲಾಗಿದೆ. ಎಸ್‌ಎಫ್‌ಸಿ ವಿಶೇಷ ಅನುದಾನ, ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ ಹಾಗೂ ನಗರ ಪಾಲಿಕೆ ಅನುದಾನದಲ್ಲಿ ಬಹುತೇಕ ಪ್ರಮುಖ ರಸ್ತೆಗಳ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗಿದೆ. ಕೃಷ್ಣರಾಜ ಹಾಗೂ ಚಾಮರಾಜ ಕ್ಷೇತ್ರಗಳ ಬಹುತೇಕ ಪ್ರಮುಖ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಟೆಂಡರ್ ಆಗಿದ್ದು, ನಿರಂತರ ಮಳೆ ನಡುವೆ ಗುಣಮಟ್ಟದ ಕಾಮಗಾರಿ ಅಸಾಧ್ಯ ಎನ್ನುವ ಕಾರಣಕ್ಕೆ ತಡವಾಗಿದೆ. ಮಳೆ ನಿಂತ ನಂತರದಲ್ಲಿ ಕಾಮಗಾರಿ ಆರಂಭಿಸಿ 20 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು. ದಸರಾಗೂ ಮುನ್ನವೇ ಉದ್ದೇಶಿತ ಕಾಮಗಾರಿಗಳನ್ನು ಪೂರ್ಣಗೊಳಿಸುವ ವಿಶ್ವಾಸವಿದೆ ಎಂದು ನಗರ ಪಾಲಿಕೆ ಅಧೀಕ್ಷಕ ಇಂಜಿನಿಯರ್ ಮಹೇಶ್ ತಿಳಿಸಿದ್ದಾರೆ.



ಮೈಸೂರಿನ ಕಾಂಟೂರ್ ರಸ್ತೆ ಕಾಲೋನಿಯ ಸಮುದಾಯ ಭವನದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಹಾಗೂ ಕೊಳ್ಳೇಗಾಲ ಶಾಸಕ ಎನ್.ಮಹೇಶ್ ಸಮ್ಮುಖದಲ್ಲಿ ಯುವಕ–ಯುವತಿಯರು ಸೇರಿದಂತೆ ಪರಿಶಿಷ್ಟ ಜಾತಿಯ 50ಕ್ಕೂ ಹೆಚ್ಚು ಮಂದಿ ಬಿಜೆಪಿಗೆ ಸೇರ್ಪಡೆಯಾದರು. ನಗರಪಾಲಿಕೆ ಸದಸ್ಯ ಚಿಕ್ಕವೆಂಕಟು, ಬಿಜೆಪಿ ಮುಖಂಡರಾದ ನರಸಿಂಹ, ಅಶ್ವಥ, ಪುನೀತ್, ಅಭಿ, ಚೌಡಪ್ಪ, ಆರ್ಟ್ಸ್ ರಾಮು, ಸರ್ವೇಶ್, ಕಿರಣ್, ದಿನೇಶ್ ಗೌಡ, ಚಂದ್ರು ಮತ್ತಿತರರು ಉಪಸ್ಥಿತರಿದ್ದರು.

## ಆಜಾದಿ ಕಾ ಅಮೃತ: ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆ ಮೂಡಿಸಲು ಕಾರ್ಯಕ್ರಮ



ಮೈಸೂರು, ಜು.21(ಎಸ್‌ಪಿಎನ್)–'ಆಜಾದಿ ಕಾ ಅಮೃತ'ದ ಅಂಗವಾಗಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆ, ರಾಷ್ಟ್ರಪ್ರೇಮದ ಭಾವನೆಗಳನ್ನು ವಿವಿಧ ಕಾರ್ಯಕ್ರಮಗಳ ಮೂಲಕ ಜಾಗೃತಗೊಳಿಸಲು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಆ.1ರಿಂದ 10ನೇ ತಾರೀಖಿನವರೆಗೆ ನಾನಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವಂತೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳಲ್ಲಿ ಒಂದರಿಂದ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಶಾಲಾ–ಕಾಲೇಜು ಮಟ್ಟದಲ್ಲಿ ಸ್ಪರ್ಧೆಗಳನ್ನು ಆಯೋಜಿಸಿ, ಸ್ವಾತಂತ್ರ್ಯ ದಿನಾಚರಣೆಯಂದು ಬಹುಮಾನ, ಪ್ರಮಾಣ ಪತ್ರ ನೀಡವಂತೆ ಸೂಚಿಸಿದ್ದಾರೆ. ಆ.1ರಿಂದ 6ರವರೆಗೆ 1ರಿಂದ 3ನೇ ತರಗತಿ ವಿದ್ಯಾರ್ಥಿಗಳಿಗೆ ರಾಷ್ಟ್ರಧ್ವಜ ಚಿತ್ರ ಬಿಡಿಸುವುದು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣ ಸ್ಪರ್ಧೆ, 4 ಮತ್ತು 5ನೇ ತರಗತಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಭಾವನೆ ಮೂಡಿಸುವ ಗೀತಾ ಗಾಯನ ಸ್ಪರ್ಧೆ, ಸ್ವಾತಂತ್ರ್ಯ ಹೋರಾಟದ ಕುರಿತು ಭಾಷಣ ಸ್ಪರ್ಧೆಗಳನ್ನು ಆಯೋಜಿಸುವಂತೆ ಸೂಚಿಸಿದ್ದಾರೆ.

ಆ.1ರಿಂದ 10ರವರೆಗೆ 6ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಭಾವನೆ ಮೂಡಿಸುವ ಗೀತಾ ಗಾಯನ ಸ್ಪರ್ಧೆ, ಸ್ವಾತಂತ್ರ್ಯ ಹೋರಾಟ ಕುರಿತು ಭಾಷಣ ಸ್ಪರ್ಧೆ, ಸ್ವಾತಂತ್ರ್ಯ ಭಾರತದ ಅಭಿವೃದ್ಧಿ ಕುರಿತು ಪ್ರಬಂಧ ಸ್ಪರ್ಧೆ ಹಮ್ಮಿಕೊಳ್ಳುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು, ಧಾರವಾಡ ಮತ್ತು ಕಲಬುರಗಿ ಅಪರ ಆಯುಕ್ತರು, ಪಿಯು ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಪತ್ರ ಬರೆದು ತಿಳಿಸಿದ್ದಾರೆ.

## ಜು.24, ಮೈಸೂರು, ಚಾ.ನಗರದಲ್ಲಿ ಸಿದ್ದರಾಮಯ್ಯ ಅಭಿಮಾನಿಗಳ ಸಭೆ



ಮೈಸೂರು, ಜು.21–ದಾವಣಗೆರೆಯಲ್ಲಿ ಆ.3ರಂದು ನಡೆಯಲಿರುವ ವಿಪಕ್ಷ ನಾಯಕ ಸಿದ್ದರಾಮಯ್ಯನವರ 75ನೇ ವರ್ಷದ ಹುಟ್ಟುಹಬ್ಬ, ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ರಾಜ್ಯ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಮಣ್ಯ ತಿಳಿಸಿದ್ದಾರೆ. ಅಮೃತ ಮಹೋತ್ಸವ ಜನರ ಸಂಘಟನೆ ಹಾಗೂ ಸೇವಾ ಸಮಿತಿ ಮತ್ತು ಹಿಂದುಳಿದ ಜಾತಿಗಳ ಒಕ್ಕೂಟದ ವತಿಯಿಂದ ಜಾತ್ಯಾತೀತ, ಪಕ್ಷಾತೀತವಾಗಿ ನಡೆಯಲಿರುವ ಸಿದ್ದರಾಮಯ್ಯನವರ ಅಭಿಮಾನಿಗಳ ಸಭೆ ಜು.24ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಹಾಗೂ ಮಧ್ಯಾಹ್ನ 3 ಗಂಟೆಗೆ ಚಾಮರಾಜನಗರ ರೈಲ್ವೆ ನಿಲ್ದಾಣದ ಸಮೀಪವಿರುವ ಮಾಂಗಲ್ಯ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಧನ ಸಹಾಯಕ್ಕೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ಜು.21–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2022–23ನೇ ಸಾಲಿನ ಸಾಮಾನ್ಯ, ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಯಡಿ ಸಂಘ ಸಂಸ್ಥೆ ಗಳಿಗೆ ಧನಸಹಾಯ ನೀಡಲು ಸೇವಾ ಸಿಂಧು ವೆಬ್‌ಸೈಟ್ se vasindhu.karnataka. gov.in ಮುಖಾಂತರ ಜು.30ರವರೆಗೆ ಅರ್ಜಿಗಳನ್ನು ಆಹ್ವಾನಿಸಲು ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ತಿಳಿಸಿದ್ದಾರೆ.

## ವಿವಿಧ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ



ಮೈಸೂರು, ಜು.21(ಎಂಕೆ)– ಮೈಸೂರಿನ ಅಶೋಕಪುರಂನಲ್ಲಿರುವ ಶಂಭುಲಿಂಗೇಶ್ವರ ಸಮುದಾಯ ಭವನದಲ್ಲಿ ಮೈಸೂರು ಮಹಾನಗರಪಾಲಿಕೆ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ದೀನ್ ದಯಾಳ್ ಅಂತ್ಯೋದಯ–ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ(ಡೇ–ನಲ್ಮ್)ದಡಿ ಸ್ವ–ಸಹಾಯ ಸಂಘ ಮತ್ತು ಪ್ರದೇಶ ಮಟ್ಟದ ಒಕ್ಕೂಟ ಸದಸ್ಯರಿಗೆ ಎರಡು ದಿನಗಳ ವಿವಿಧ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರಕ್ಕೆ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ ಗುರುವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಡೇ–ನಲ್ಮ್ ಅಭಿಯಾನದಡಿ ವಿವಿಧ ಬಗೆಯ ಸಾಲ–ಸೌಲಭ್ಯಗಳಿದ್ದು, ಮಹಿಳೆಯರು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಸ್ವಾವಲಂಬಿಗಳಾಗಿ ಬದುಕುವಂತೆ ಕರೆ ನೀಡಿದರು. ಪಾಲಿಕೆ ಹೆಚ್ಚುವರಿ ಆಯುಕ್ತೆ ಎಂ.ಜೆ.ರೂಪ, ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ವಲಯ ಆಯುಕ್ತ ನಾಗರಾಜು, ಅಭಿಯಾನ ವ್ಯವಸ್ಥಾಪಕ ಡಾ.ಜೆ.ಎಸ್.ಭೈರಲಿಂಗಯ್ಯ ಮತ್ತಿತರರು ಉಪಸ್ಥಿತರಿದ್ದರು.

### ಕೆಆರ್‌ಎಸ್ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 124.80 ಅಡಿ |
| ಗುರುವಾರ | 124.70 ಅಡಿ |
| ಒಳಹರಿವು | 38060 ಕ್ಯೂಸೆಕ್ |
| ಹೊರಹರಿವು | 39483 ಕ್ಯೂಸೆಕ್ |

### ಕಬಿನಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2284.00 ಅಡಿ |
| ಗುರುವಾರ | 2284.00 ಅಡಿ |
| ಒಳ ಹರಿವು | 16000 ಕ್ಯೂಸೆಕ್ |
| ಹೊರ ಹರಿವು | 15000 ಕ್ಯೂಸೆಕ್ |

### ಹಾರಂಗಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2859 ಅಡಿ |
| ಗುರುವಾರ | 2855.56 ಅಡಿ |
| ಒಳ ಹರಿವು | 5135 ಕ್ಯೂಸೆಕ್ |
| ಹೊರ ಹರಿವು | 3250 ಕ್ಯೂಸೆಕ್ |

### ಹೇಮಾವತಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2922 ಅಡಿ |
| ಗುರುವಾರ | 2920.50 ಅಡಿ |
| ಒಳ ಹರಿವು | 9374 ಕ್ಯೂಸೆಕ್ |
| ಹೊರ ಹರಿವು | 4850 ಕ್ಯೂಸೆಕ್ |

## ಸಿದ್ದರಾಮಯ್ಯರಿಂದ ಚಾಮುಂಡೇಶ್ವರಿಯಲ್ಲಿ ಸಾಕಷ್ಟು ಅಭಿವೃದ್ಧಿ

ಮೈಸೂರು,ಜು.21(ಎಂಟಿವೈ)–ಅಭಿವೃದ್ಧಿ ವಿಚಾರದಲ್ಲಿ ಯಾರೇ ಉತ್ತಮ ಕಾರ್ಯ ಮಾಡಿದರೂ ನಾನು ಅವರ ಬಗ್ಗೆ ಮುಕ್ತಕಂಠದಿಂದ ಹೇಳಿಕೊಂಡು ಬಂದಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ. ಈ ಹಿಂದೆ ಚಾಮುಂಡೇಶ್ವರಿ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಸಿದ್ದರಾಮಯ್ಯ, ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಿಲ್ಲ ಎಂದು ನಾನು ಎಲ್ಲಿಯೂ ಹೇಳಿಲ್ಲ. ಚಾಮುಂಡೇಶ್ವರಿ ಕ್ಷೇತ್ರದ ಮೇಲೆ ಅವರಿಗೆ ಹೆಚ್ಚು ಪ್ರೀತಿ ಇದೆ. ಆದರೂ ಕಳೆದ ಚುನಾವಣೆಯಲ್ಲಿ ಸೋತಿದ್ದೇನೆ ಎಂಬ ಕೊರಗು ಅವರಲ್ಲಿದೆ. ಹಾಗಾಗಿ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ನಾನು ಅಭಿವೃದ್ಧಿ ಮಾಡಿದ್ದರೂ ಸೋಲಿಸಿದ್ದೀರಿ ಎಂದು ನೋವನ್ನು ತೋಡಿಕೊಂಡಿದ್ದಾರೆ ಎಂದರು. ಯಾವುದೇ ಜನಪ್ರತಿನಿಧಿ ಅಭಿವೃದ್ಧಿ ಕಾರ್ಯ ಮಾಡಿದರೆ ಅದನ್ನು ಮುಕ್ತಕಂಠದಿಂದ ಶ್ಲಾಘಿಸುವ ಏಕೈಕ ವ್ಯಕ್ತಿ ನಾನು. ಬೇರೆಯವರ ರೀತಿಯಲ್ಲಿ ಎಲ್ಲವನ್ನು ನಾನೇ ಮಾಡಿದೆ ಎಂದು ಕ್ರೆಡಿಟ್ ತೆಗೆದುಕೊಳ್ಳಲು ಹಂಬಲಿಸುವುದಿಲ್ಲ. ಮಂಡಕಳ್ಳಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಆಶ್ರಯ ಯೋಜನೆ ಅನುಷ್ಠಾನದಲ್ಲಿ ಸಿದ್ದರಾಮಯ್ಯ ಅವರ ಪರಿಶ್ರಮ ಇದೆ. ನಾನು ಅವರಿಗೆ ಅಭಿನಂದನೆ ಸಲ್ಲಿಸಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯಾರ ಕಾಲದಲ್ಲಿ ಎಷ್ಟು ಅಭಿವೃದ್ಧಿಯಾಗಿದೆ ಎಂಬುದು ಕ್ಷೇತ್ರದ ಜನರಿಗೆ ಗೊತ್ತಿದೆ ಎಂದರು.



ನಾನು ಈ ಹಿಂದೆ ಸಿದ್ದರಾಮಯ್ಯ ಅವರೊಂದಿಗೆ 25 ವರ್ಷ ಇದ್ದೆ. 1983ರಲ್ಲಿ ಅವರು ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದರು. ಅವರೊಂದಿಗೆ ಅಭಿವೃದ್ಧಿ ಕಾರ್ಯದಲ್ಲಿ ನಾನು ಸಹ ಕೈ ಜೋಡಿಸಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದ ಬಗ್ಗೆ ಅವರಿಗೆ ಇಂದಿಗೂ ಕಾಳಜಿ ಇದೆ. ಹಾಗಾಗಿ ಕ್ಷೇತ್ರ ಅಭಿವೃದ್ಧಿ ಆಗಬೇಕು ಎಂಬ ಕಳಕಳಿ ಹೊಂದಿದ್ದಾರೆ. ಸಿದ್ದರಾಮಯ್ಯ 15 ವರ್ಷ ಕಾಲ ಹಣಕಾಸು ಸಚಿವರಾಗಿದ್ದರು, 5 ವರ್ಷಗಳ ಕಾಲ ಮುಖ್ಯಮಂತ್ರಿ ಯಾಗಿದ್ದರು. ಅವರಿಗೆ ಸರಿಸಮಾನವಾಗಿ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಲು ನನ್ನಿಂದ ಸಾಧ್ಯವೇ? ನಾನು ಕೇವಲ ಶಾಸಕನಷ್ಟೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಾನು ಇಷ್ಟೆಲ್ಲ ಅಭಿವೃದ್ಧಿ ಮಾಡಿದೆ, ಆದರೆ ನನ್ನ ನಿರೀಕ್ಷೆಗೆ ತಕ್ಕಷ್ಟು ಈಗ ಅಭಿವೃದ್ಧಿ ಕಾರ್ಯ ಆಗಿಲ್ಲವಲ್ಲ ಎಂಬ ನೋವು ಸಿದ್ದರಾಮಯ್ಯ ಅವರಿಗೆ ಇರಬಹುದು ಎಂದು ಹೇಳಿದರು.

**ಕಾಂಗ್ರೆಸ್‌ಗೆ ಬಾ ಅಂದಿಲ್ಲ, ಬಿಜೆಪಿಗೆ ಹೋಗಬೇಡ ಅಂದಿದ್ದಾರೆ:** ನನ್ನನ್ನೂ ಕಾಂಗ್ರೆಸ್‌ಗೆ ಬಾ ಎಂದು ಸಿದ್ದರಾಮಯ್ಯ ಅವರು ಆಹ್ವಾನ ನೀಡಿಲ್ಲ. ಆದರೆ, ಬಿಜೆಪಿಗಂತೂ ಹೋಗಬೇಡ ಎಂದಿದ್ದಾರೆ. ಜೆಡಿಎಸ್‌ನಲ್ಲೇ ಉಳಿಯುವಂತೆಯೂ ಹೇಳಿಲ್ಲ. ಕಾಂಗ್ರೆಸ್ ಪಕ್ಷ ಸೇರ್ಪಡೆ ಕುರಿತು ಯಾವುದೇ ಮಾತುಕತೆ ನಡೆದಿಲ್ಲ. ಈ ವಿಚಾರ ಹೈಕಮಾಂಡ್ ಹಂತದಲ್ಲಿ ಚರ್ಚೆ ಆಗಬೇಕಾಗಿದೆ ಎಂದು ಜಿಟಿಡಿ ತಿಳಿಸಿದರು.

**3–4 ತಿಂಗಳ ನಂತರವಷ್ಟೇ ಬೆಂಬಲದ ಬಗ್ಗೆ ಸ್ಪಷ್ಟ ಚಿತ್ರಣ:** ಮುಂಬರುವ ಚುನಾವಣೆಯ ಹಿನ್ನೆಲೆಯಲ್ಲಿ ಒಕ್ಕಲಿಗ ಸಮುದಾಯ ನಮ್ಮೊಂದಿಗೆ ಇದೆ ಎಂದು ಡಿ.ಕೆ. ಶಿವಕುಮಾರ್ ಹೇಳಿಕೆ ನೀಡಿದ್ದರೆ, ಒಕ್ಕಲಿಗ ಸಮುದಾಯ ಜೆಡಿಎಸ್ ಕೈಬಿಡಲ್ಲ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಆದರೆ ಒಕ್ಕಲಿಗ ಸಮುದಾಯ ಯಾರಿಗೆ ಬೆಂಬಲ ನೀಡಬೇಕು ಎನ್ನುವುದನ್ನು ಇನ್ನು 3–4 ತಿಂಗಳ ನಂತರವಷ್ಟೇ ನಿರ್ಧರಿಸುತ್ತದೆ. ಈಗಲೇ ಯಾವುದೂ ಸ್ಪಷ್ಟವಾಗಿ ತಿಳಿಯುವುದಿಲ್ಲ ಎಂದರು.

ಮತ್ತೊಮ್ಮೆ ಸಿಎಂ ಆಗಬೇಕು ಎಂಬ ಆಸೆ ಸಿದ್ದರಾಮಯ್ಯ ಅವರಿಗಿದೆ. ಹಾಗಾಗಿ ಯಾವ ಕ್ಷೇತ್ರದಲ್ಲಿ ನಿಂತರೆ ಗೆಲ್ಲಬಹುದು? ಯಾವುದು ಸುರಕ್ಷಿತ ಕ್ಷೇತ್ರ ಎಂದು ಅವರು ಹುಡುಕಾಟ ನಡೆಸುತ್ತಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಆದಂತಹ ತಪ್ಪು ಮರುಕಳಿಸಬಾರದು ಎಂಬ ಹಿನ್ನೆಲೆಯಲ್ಲಿ ಈ ಬಾರಿ ಸುರಕ್ಷಿತ ಕ್ಷೇತ್ರ ಹುಡುಕುತ್ತಿದ್ದಾರೆ. ನಾಮಪತ್ರ ಸಲ್ಲಿಸಿ ಬಂದರೆ ಗೆಲ್ಲುವಂತಹ ಕ್ಷೇತ್ರವನ್ನು ಅವರು ಈ ಬಾರಿ ಹುಡುಕುತ್ತಿದ್ದಾರೆ. ಸುರಕ್ಷಿತ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿ ನಂತರ ರಾಜ್ಯ ಪ್ರವಾಸ ಕೈಗೊಳ್ಳಬೇಕು ಎಂಬುದು ಅವರ ಲೆಕ್ಕಾಚಾರವೂ ಆಗಿದೆ. ಕಳೆದ ಬಾರಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲು ಅನುಭವಿಸಿದ ಹಿನ್ನೆಲೆಯಲ್ಲಿ ಅದೇ ಕ್ಷೇತ್ರದಲ್ಲಿ ಮತ್ತೆ ಸ್ಪರ್ಧೆಗೆ ಅವರಿಗೆ ಆತಂಕ ಇರುವ ಕಾರಣ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸುವುದಿಲ್ಲ ಎಂದು ಸಿದ್ದರಾಮಯ್ಯ ಘೋಷಿಸಿದ್ದಾರೆ ಎಂದು ಹೇಳಿದರು.

## ನಕ್ಕರೆ ಅದೇ ಸ್ವರ್ಗ

ವೈದ್ಯರು : ನಿಮಗಿಷ್ಟವಾದ ಯಾವುದಾದರೂ ಹಣ್ಣನ್ನು ಸಿಪ್ಪೆ ಸಮೇತ ತಿಂದ್ರೆ ಒಳ್ಳೆಯದು. ಯಾಕೆಂದರೆ ಸಿಪ್ಪೆಯಲ್ಲಿ ತುಂಬಾ ವಿಟಮಿನ್ಸ್ ಇರುತ್ತದೆ.

ರೋಗಿ : (ಸಪ್ಪೆ ಮೋರೆ ಹಾಕಿಕೊಂಡು) ಆದ್ರೆ ಏನು ಮಾಡಲಿ ಡಾಕ್ಟ್ರೆ. ನನಗಿಷ್ಟವಾದ ಹಣ್ಣು ಹಲಸಿನ ಹಣ್ಣು!

ಮೈಸೂರು ಮಿತ್ರ

ಶುಕ್ರವಾರ, 22 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

### ಅಮೃತವಾಹಿನಿ

ದೇವರಿಗೆ ಹತ್ತಿರವಾಗಿರಬಯಸಿದರೆ ಮೊದಲ ಹೆಜ್ಜೆಯಾಗಿ ಮಾನವನಿಗೆ ಹತ್ತಿರವಾಗು – ಸ್ಯಾಮುಯೆಲ್

### ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಡವರ ಮನೆ ಊಟ ಚೆಂದ, ಬಲ್ಲಿದರ ಮನೆ ಮಾತು ಚೆಂದ

## ನಿಮ್ಮ ಪತ್ರಗಳು

### ಮೈಸೂರಿನ ಹೃದಯ ಭಾಗದಲ್ಲೊಂದು ಕೆಸರು ಗದ್ದೆ?

ಮಾನ್ಯರೆ,



ಮೈಸೂರು ಎಂದ ತಕ್ಷಣವೇ ನೆನಪಿಗೆ ಬರುವುದು ಒಂದು ಸುಂದರ ಮತ್ತು ಸ್ವಚ್ಛ ಚಿತ್ರಣ. ಆದರೆ ಮೈಸೂರಿನ ಶೇ.75 ರಷ್ಟು ರಸ್ತೆಗಳಂತೂ ಗುಂಡಿಮಯವಾಗಿವೆ. ಕೆಲವು ದಿನಗಳ ಹಿಂದೆ ಪ್ರಧಾನಿ ಮೋದಿ ಅವರು ಮೈಸೂರಿಗೆ ಬಂದಾಗ ಅವರು ಸಾಗುವ ರಸ್ತೆಗಳನ್ನು ಮರು ಡಾಂಬರೀಕರಣಗೊಳಿಸಿ ಅಂದಗೊಳಿಸಲಾಗಿತ್ತು. ಆದರೆ, ಅದನ್ನು ಬಿಟ್ಟು ಉಳಿದ ರಸ್ತೆಗಳು ಯಾವುದೇ ಡಾಂಬರೀಕರಣ ಕಾಣದೆ ಹಾಳಾಗಿವೆ. ಅದರಲ್ಲೂ ಮೈಸೂರಿನ ಹೃದಯ ಭಾಗವಾದ ಅಗ್ರಹಾರದ ಬಸವೇಶ್ವರ ಬಡಾವಣೆಯ 3ನೇ ಕ್ರಾಸ್ ರಸ್ತೆಯಂತೂ ಮಳೆಯಿಂದಾಗಿ ಕೆಸರುಗದ್ದೆಯಂತಾಗಿದೆ. ಈ ರಸ್ತೆಯಲ್ಲಿ ಪಾದಚಾರಿಗಳು ಹಾಗೂ ವಾಹನ ಸವಾರರು ಓಡಾಡಲು ತುಂಬಾ ಹರಸಾಹಸ ಪಡುವಂತಾಗಿದೆ. ರಸ್ತೆ ಇಷ್ಟು ಹದಗೆಟ್ಟಿದ್ದರೂ ಯಾವೊಬ್ಬ ಜನಪ್ರತಿನಿಧಿ, ಸಂಬಂಧಪಟ್ಟ ಅಧಿಕಾರಿಯಾಗಲೀ ತಲೆಕೆಡಿಸಿಕೊಂಡಿಲ್ಲ ಎನ್ನುವುದು ವಿಷಾದನೀಯ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ರಸ್ತೆ ಸರಿಪಡಿಸಬೇಕೆಂದು ಮನವಿ ಮಾಡುತ್ತೇನೆ.

–ಪ್ರದೀಪ್ ಕುಮಾರ್ ಎ., ಮಹಾರಾಜ ಕಾಲೇಜು ಮೈಸೂರು

### ರಸ್ತೆ ಕಾಮಗಾರಿ ಬೇಗ ಪೂರ್ಣಗೊಳಿಸಿ

ಮಾನ್ಯರೆ,

ನಂಜನಗೂಡಿನ ಹೊರಳವಾಡಿ ಗ್ರಾಮದ ರಸ್ತೆಯಲ್ಲಿ ಸುಮಾರು ನಾಲ್ಕು ವಾರಗಳಿಂದ ಕಾಮಗಾರಿ ನಡೆಯುತ್ತಿದ್ದು, ಮಣ್ಣು ಹಾಕಿದ ನಂತರ ಯಾವುದೇ ರೀತಿಯ ಕಾಮಗಾರಿ ಮುಂದುವರೆದಿಲ್ಲ. ಇದರಿಂದ ರಸ್ತೆಗಳು ತೀವ್ರ ಹದಗೆಟ್ಟಿದ್ದು ಓಡಾಡಲು ತುಂಬಾ ತೊಂದರೆಯಾಗುತ್ತಿದೆ. ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ರಸ್ತೆಯು ಕೆಸರು ಗದ್ದೆಯಂತಾಗಿದೆ. ಇದರಿಂದ ವಿದ್ಯಾರ್ಥಿಗಳು ಹಾಗೂ ವಾಹನ ಸವಾರರು ಪರದಾಡುವಂತಾಗಿದೆ ಜೊತೆಗೆ ಪಾದಚಾರಿಗಳು ರಸ್ತೆಯಲ್ಲಿ ಬಿದ್ದು ಗಾಯಗೊಂಡಿರುವುದು ಉಂಟು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆಯನ್ನು ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕಾಗಿ ವಿನಂತಿ.

–ಪುಟ್ಟಸ್ವಾಮಿ, ಮೈಸೂರು.

### ಮೈಸೂರು ಮಹಾನಗರ ಪಾಲಿಕೆಗೆ ಮನವಿ

ಮಾನ್ಯರೆ,



ಸ್ವಚ್ಛ ಮೈಸೂರು ಮಾಡಲು ಮುಂದಾದಾಗ ಪಾಲಿಕೆಯು ನಗರದ ಪ್ರತಿ ಮನೆಗೂ ಹಸಿ ಕಸ ಹಾಗೂ ಒಣ ಕಸವನ್ನು ಬೇರ್ಪಡಿಸಿ ಕಸ ಸಂಗ್ರಹಕ್ಕೆ ಬರುವವರಿಗೆ ನೀಡಲೆಂದು ಹಸಿರು/ ಕೆಂಪು ಬಣ್ಣದ ಮುಚ್ಚಳವಿರುವ ಬಕೀಟುಗಳನ್ನು ಸುಮಾರು ಐದು ವರ್ಷಗಳ ಹಿಂದೆ ಕೊಟ್ಟಿತ್ತು. ಆ ಬಕೀಟುಗಳು ಈಗ ಉಪಯೋಗಿಸದ ಸ್ಥಿತಿಯಲ್ಲಿವೆ. ಮೈಸೂರು ಮಹಾನಗರಪಾಲಿಕೆ ಕಸ ಸಂಗ್ರಹಿಸಲು ಹೊಸ ಬಕೀಟು ಗಳನ್ನು ನಗರದ ಜನರಿಗೆ ನೀಡುವ ಅಗತ್ಯವಿದೆ. ಪಾಲಿಕೆಯ ಮೇಯರ್, ಸದಸ್ಯರು ಇದರ ಬಗ್ಗೆ ಗಮನ ಹರಿಸಬೇಕಾಗಿ ಮನವಿ.

–ಕೊ.ಸು.ನರಸಿಂಹಮೂರ್ತಿ, ಚಾಮರಾಜಪುರಂ, ಮೈಸೂರು.

### ಖಾದಿಗೆ ಜಿಎಸ್‌ಟಿ ಬೇಕೇ?

ಮಾನ್ಯರೆ,

ಭಾರತದಿಂದ ಬ್ರಿಟಿಷರನ್ನು ಓಡಿಸಿ ದೇಶದ ಜನರನ್ನು ಸ್ವಾವಲಂಬಿಯಾಗಿಸಲು ಗಾಂಧೀಜಿ ಕಂಡುಕೊಂಡ ಸೂತ್ರ ಖಾದಿ. ಅತ್ಯಂತ ಸರಳ ಹಾಗೂ ಭಾರತೀಯ ಜೀವನ ಪದ್ಧತಿಯ ಅವಿಭಾಜ್ಯ ಅಂಗವಾಗಿದ್ದ ಖಾದಿಯನ್ನೇ ಸ್ವಾತಂತ್ರ್ಯ ಹೋರಾಟದ ಅಸ್ತ್ರವಾಗಿಸಿ ಜನಜಾಗೃತಿಯಲ್ಲಿ ತೊಡಗಿದ್ದರಿಂದ ಬಹುದೊಡ್ಡ ಕ್ರಾಂತಿಯೇ ಆಯಿತು. ಬದಲಾಗುತ್ತಿರುವ ಜಗತ್ತಿನ ವಿದ್ಯಮಾನಗಳು, ಅಭಿವೃದ್ಧಿಯ ಹೆಸರಿನಲ್ಲಿ ಹಾಗೂ ಹೆಚ್ಚುತ್ತಿರುವ ಜನಸಂಖ್ಯೆಯ ಬೇಡಿಕೆ ಪೂರೈಸಬೇಕು ಎಂಬ ನೆಪದಲ್ಲಿ ರಾಸಾಯನಿಕ ಯುಕ್ತ ಹಾಗೂ ಪರಿಸರಸ್ನೇಹಿಯಲ್ಲದ ಬಟ್ಟೆಗಳ ಉತ್ಪಾದನೆ ಮಿತಿ ಮೀರಿದೆ. ಇತ್ತೀಚಿನ ದಶಕಗಳಲ್ಲಿ ಖಾದಿಗೆ ಮತ್ತೆ ಬೇಡಿಕೆ ಬಂದಿದ್ದು, ಖಾದಿ ಬ್ರಾಂಡ್ ಮೌಲ್ಯ ಹೆಚ್ಚುತ್ತಿದೆ. ಈ ವೇಳೆಯಲ್ಲಿ ಉದ್ಯೋಗ ನಷ್ಟದ ಮಾತೂ ಕೇಳಿಬರುತ್ತಿದೆ .ಇದರ ನಡುವೆಯ ಖಾದಿಗೆ ಜಿಎಸ್‌ಟಿ ಹಾಕಿರುವುದು ಅಮಾನವೀಯ ವಿಷಯವಾಗಿದೆ ಮೊದಲೇ ಅದರ ಉತ್ಪನ್ನ ಕುಗ್ಗಿದೆ. ಅಂಥದರಲ್ಲಿ ಈ ಜಿಎಸ್‌ಟಿಯನ್ನು ಹಾಕಿದರೆ ಅದನ್ನೇ ನಂಬಿರುವ ಕುಟುಂಬಗಳು ಬೀದಿ ಪಾಲಾಗುತ್ತವೆ. ಸರಕಾರ ಮಾಡುವ ಯೋಜನೆಗಳು ಉದಾಹರಣೆಗೆ ಗ್ರಾಮೋದ್ಯೋಗ ಮತ್ತು ವೋಕಲ್ ಫಾರ್ ಲೋಕಲ್ ಈ ಯೋಜನೆಗಳು ಎಷ್ಟು ಜನರಿಗೆ ಲಭ್ಯವಾಗುತ್ತಿದೆ ಎಂಬುದರ ಅರಿವು ಸರಕಾರಕ್ಕೆ ಇರಬೇಕು. ಇದನ್ನು ಹೀಗೆ ಬಿಟ್ಟರೆ ನಮ್ಮ ದೇಶಕ್ಕೆ ನಾವು ಮಾಡುವ ಅಗೌರವ ವಾಗುತ್ತದೆ. ಸರಕಾರ ಎಚೆತ್ತುಕೊಳ್ಳಬೇಕು.

–ಕೃಪ. ಪಿ. ವೈ, ಮಹಾರಾಜ ಕಾಲೇಜು ಮೈಸೂರು.

### ಇನ್ನೂ ರೈತರ ಖಾತೆ ತಲುಪದ ರಾಗಿ ಖರೀದಿ ಹಣ

ಮಾನ್ಯರೆ,

ಜೂನ್ ತಿಂಗಳಲ್ಲಿ ಪಿರಿಯಾಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (APMC)ಗೆ ರಾಗಿಯನ್ನು ಬೆಂಬಲ ಬೆಲೆಗೆ ಮಾರಾಟ ಮಾಡಿದ್ದರೂ ಈವರೆಗೂ ಅದರ ಹಣ ರೈತರ ಖಾತೆ ತಲುಪಿಲ್ಲ. ಜೂನ್ ತಿಂಗಳ 6ನೇ ತಾರೀಖಿಗೂ ಮುನ್ನ ಖರೀದಿಸಿದ ಹಣ ಈಗಾಗಲೇ ಕೈಸೇರಿದೆ. ಆನಂತರದ್ದೂ ವಿಳಂಬವಾಗುತ್ತಿದೆ. ಹತ್ತಿರ ಹತ್ತಿರ ಎರಡು ತಿಂಗಳಾಗುತ್ತಾ ಬಂದಿದೆ. ಇವರಿಗೆ ಇನ್ನೆಷ್ಟು ಸಮಯ ಬೇಕೋ ತಿಳಿದಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ರೈತರು ಪರದಾಡುವಂತಾಗಿದೆ. ಸಕಾಲಕ್ಕೆ ಒದಗದ ಹಣದಿಂದಾಗಿ ಹತ್ತು ಹಲವು ಸಮಸ್ಯೆಗಳು ತಲೆದೋರುತ್ತಿವೆ... ಹಣಕ್ಕಾಗಿ ಬೇರೆ ಕಡೆ ಸಾಲ ಪಡೆಯುವಂತಾಗಿದೆ. ಮಧ್ಯವರ್ತಿಗಳ ಹಾವಳಿ ತಡೆಯಲು ಸರ್ಕಾರವು ಬೆಂಬಲ ಬೆಲೆಗೆ ರಾಗಿ ಖರೀದಿ ಮಾಡುವುದು ಸ್ವಾಗತಾರ್ಹ ಕ್ರಮ, ಆದರೆ ಅಧಿಕಾರಿಗಳ ನಿಧಾನಗತಿಯ ಕಾರ್ಯವೈಖರಿ ರೈತರಿಗೆ ಸಲ್ಲಬೇಕಾದ ಕೆಲವು ಸೌಲಭ್ಯಗಳು ತಡವಾಗುತ್ತಿದೆ. ಇನ್ನಾದರೂ ರೈತರ ರಾಗಿ ಖರೀದಿ ಹಣ ಆದಷ್ಟು ಬೇಗ ಅವರ ಖಾತೆ ತಲುಪಲಿ ಎಂಬುದು ನಮ್ಮ ಕಳಕಳಿ ಮನವಿ.

–ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

## ಚಿಂತನೆ




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

# ಬದಲಾಗುತ್ತಿದೆ ಜಮ್ಮು–ಕಾಶ್ಮೀರ ಪ್ರದೇಶ

ಇತ್ತೀಚೆಗೆ ನನ್ನ ಪ್ರವಾಸದಲ್ಲಿ ಜಮ್ಮು–ಕಾಶ್ಮೀರ, ಲೇಹ್–ಲಡಾಕ್ ಹಾಗೂ ಹಿಮಾಚಲ ಪ್ರದೇಶಗಳಲ್ಲಿ ವಿಹರಿಸಿದೆ. ಈ ಪ್ರದೇಶಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಗಮನಿಸಿದೆ. (ಈಗ್ಗೆ ಐದು ವರ್ಷಗಳ ಹಿಂದೆಯೂ ಈ ಭಾಗದಲ್ಲಿ ಪ್ರವಾಸ ಮಾಡಿದ್ದೆ). ನನ್ನ ಪ್ರವಾಸದ ಬಗ್ಗೆ ತಿಳಿದ ಸ್ನೇಹಿತರು ದೂರವಾಣಿ ಕರೆ ಮಾಡಿ ಕೇಳಿದ ಮೊದಲ ಪ್ರಶ್ನೆ; ಅಲ್ಲಿನ ಪರಿಸ್ಥಿತಿ ಹೇಗಿದೆ? ಈಗಲೂ ಅಲ್ಲಿ ಗಲಭೆಗಳಾಗುತ್ತಿವೆ ಎಂದು ಆಗಾಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ನಿಮಗೆ ಏನೂ ತೊಂದರೆ ಯಾಗಿಲ್ಲವೇ? ಇದು ಸಹಜವಾದ ಪ್ರಶ್ನೆ. ಏಕೆಂದರೆ ಈವರೆವಿಗೆ ಜಮ್ಮು–ಕಾಶ್ಮೀರ ಎಂದರೆ ಗಲಭೆಗ್ರಸ್ತ ಪ್ರದೇಶ, ಅಲ್ಲಿ ಯಾವಾಗಲೂ ಗಲಾಟೆಗಳಾಗುತ್ತದೆ. ಬರೀ ಹಿಂಸಾಚಾರ, ಸೈನಿಕರ ಮೇಲೆಯೂ ಕಲ್ಲು ತೂರಲಾಗುತ್ತದೆ, ಸರ್ಕಾರದ ಆಸ್ತಿಗಳಿಗೆ ಬೆಂಕಿ ಹಚ್ಚಿ ನಾಶಪಡಿಸಲಾಗುತ್ತಿದೆ, ಅಮಾಯಕರನ್ನು ಕಾರಣವಿಲ್ಲದೆ ಕೊಲ್ಲಲಾಗುತ್ತದೆ ಎಂದೆಲ್ಲಾ ಸುದ್ದಿಗಳಿರುತ್ತಿದ್ದವು ಹೀಗಾಗಿ ಸ್ನೇಹಿತರು ಆತಂಕದಿಂದ ಪ್ರಶ್ನೆ ಮಾಡಿದ್ದರು. ಆದರೆ ಈಗಿನ ಜಮ್ಮು–ಕಾಶ್ಮೀರದಲ್ಲಿ ಅಂತಹ ಆತಂಕದ ಪರಿಸ್ಥಿತಿ ಕಂಡುಬರುವುದಿಲ್ಲ. ಎಲ್ಲವೂ ಶಾಂತವಾಗಿದೆ. ನಿಜ, ಪತ್ರಿಕೆಗಳಲ್ಲಿ ವರದಿಯಾಗುವಂತೆ ನಮ್ಮ ಸೇನಾಪಡೆ ಅನೇಕ ಭಯೋತ್ಪಾದಕರನ್ನು ಹುಡುಕಿ ಹುಡುಕಿ ಕೊಲ್ಲುತ್ತಿದೆ. ಇಲ್ಲವೇ ಸೆರೆ ಹಿಡಿಯಲಾಗುತ್ತಿದೆ. ಆದರೆ ಇದು ಕಳೆದ ಐದಾರು ವರ್ಷಗಳಿಗೆ ಹೋಲಿಸಿದಾಗ ಅತ್ಯಲ್ಪ ಎನಿಸುತ್ತದೆ. ಹಿಂದೆ ಈ ರೀತಿಯ ಸುದ್ದಿಗಳು ಪ್ರತಿದಿನ ಪತ್ರಿಕೆಗಳಲ್ಲಿ ವರದಿಯಾಗುತ್ತಿತ್ತು. ಆದರೆ ಈಗ ಹಾಗಿಲ್ಲ, ಅಂತಹ ಸುದ್ದಿಗಳನ್ನು ವಾರ, ಹದಿನೈದು ದಿನಕ್ಕೆ ಮಾತ್ರ ಕೇಳುತ್ತೇವೆ. ಅದೂ ಕೆಲವು ಭಯೋತ್ಪಾದಕರ ಬಗ್ಗೆ ಮಾತ್ರ. ಈ ಹಿಂದೆ ಸೈನಿಕರ ಮೇಲೆ ನಡೆಯುತ್ತಿದ್ದ ಆಕ್ರಮಣಗಳು ಈಗ ಕಂಡುಬರುವುದಿಲ್ಲ. ಬಹುಶಃ ಮಿಲಿಟರಿಗೆ ಹೆಚ್ಚಿನ ಅಧಿಕಾರವನ್ನು ನೀಡಿದ ನಂತರ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಂತೆ ಕಾಣುತ್ತದೆ. ಜನಜೀವನ ಹೆಚ್ಚೂ ಕಡಿಮೆ ಸಾಮಾನ್ಯವಾಗಿದೆ. ಈ ರಾಜ್ಯದ ಜನರಿಗೆ ಮುಖ್ಯವಾದ ಉದ್ಯೋಗ ಎಂದರೆ ಪ್ರವಾಸೋದ್ಯಮ. ಪ್ರವಾಸಿಗರಿಲ್ಲದಿದ್ದರೆ ಅವರೆಲ್ಲಾ ನಿರುದ್ಯೋಗಿಗಳಾಗುತ್ತಾರೆ, ಹಸಿವಿನಿಂದ ಸಾಯಬೇಕಾಗುತ್ತದೆ. ಈ ಕಾರಣಕ್ಕೆ ಮೊದಲಿನಿಂದಲೂ ಅಲ್ಲಿನ ವ್ಯಾಪಾರಿ ಜನ ಪ್ರವಾಸಿಗರಿಗೆ ಯಾವ ತೊಂದರೆಯನ್ನೂ ನೀಡುತ್ತಿರಲಿಲ್ಲ. ಅಲ್ಲದೆ ವರ್ಷದ ಅರ್ಧದಷ್ಟು ಸಮಯ ಚಳಿ ಹಾಗೂ ಹಿಮದಿಂದಾಗಿ ಅಲ್ಲಿ ಪ್ರವಾಸಿಗರ ಸಂಖ್ಯೆ ಅಷ್ಟಿರುವುದಿಲ್ಲ. ಚಳಿಗಾಲದಲ್ಲಿ ಅಲ್ಲಿ ಪ್ರಖ್ಯಾತ ದಾಲ್ ಸರೋವರ ಹೆಪ್ಪುಗಟ್ಟುತ್ತದೆ. ಇದೇ ಅಲ್ಲಿನ ಪ್ರಮುಖ ಆಕರ್ಷಣೆ. ಹಾಗಾಗಿ ಉಳಿದ ವರ್ಷದ ಅರ್ಧದಷ್ಟು ಸಮಯದಲ್ಲಿ ಅವರಿಗಾಗುವ ವ್ಯಾಪಾರ ಹಾಗೂ ಅದರಿಂದ ಬಂದಂತಹ ಲಾಭದಲ್ಲಿ ಅವರು ಉಳಿದ ಅರ್ಧ ವರ್ಷದ ಜೀವನ ಕಟ್ಟಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದಾಗಿ ಬರುವ ಪ್ರವಾಸಿಗರಿಂದ ಸ್ವಲ್ಪ ಹೆಚ್ಚು ಹಣ ಅಪೇಕ್ಷಿಸುತ್ತಾರೆ. ಅದು ಬಿಟ್ಟರೆ ಅವರು ಪ್ರವಾಸಿಗರೊಂದಿಗೆ ಘರ್ಷಣೆಗೆ ಇಳಿಯುವುದಿಲ್ಲ. ಇದು ಮೊದಲಿನಿಂದಲೂ ಇರುವಂತಹುದು, ಆದರೆ ಅಲ್ಲಿ ಭಯೋತ್ಪಾದಕ ಚಟುವಟಿಕೆ ಪ್ರಾರಂಭವಾದ ನಂತರ ಕಾಶ್ಮೀರದಲ್ಲಿರುವವರೆಲ್ಲಾ ಭಯೋತ್ಪಾದಕರೇನೋ ಎಂಬಂತೆ ಪ್ರತಿಬಿಂಬಿತವಾಗಿತ್ತು.

ಆದರೆ ಸಂವಿಧಾನದ 370ನೇ ವಿಧಿ ತೆಗೆದ ನಂತರ ಅಲ್ಲಿ ಮತ್ತೆ ಗಲಭೆಗಳು ಹೆಚ್ಚಾಗಬಹುದು ಎಂಬ ಗುಮಾನಿ ಇಡೀ ರಾಷ್ಟ್ರಕ್ಕೆ ಇತ್ತು. ಆದರೆ ಹಾಗಾಗಲಿಲ್ಲ, ಇಂದು ಕಾಶ್ಮೀರ ಶಾಂತವಾಗಿರುವಂತೆ ಕಂಡುಬರುತ್ತದೆ. ಇದನ್ನು ಗಮನಿಸಿದಾಗ, ಈವರೆವಿಗೆ ನಡೆದಿದ್ದೆಲ್ಲಾ ರಾಜಕೀಯ ಮೇಲಾಟವೇನೋ ಎನ್ನಿಸುತ್ತದೆ. ಜನಕ್ಕೆ ಬೇಡವಾಗಿದ್ದರೂ ರಾಜಕೀಯ ನಾಯಕರು ತಮ್ಮ ಸ್ವಾರ್ಥಕ್ಕಾಗಿ ಹೀಗೆ ಜನರ ದಾರಿ ತಪ್ಪಿಸುತ್ತಿದ್ದರೇನೋ ಎನ್ನಿಸುತ್ತದೆ. ಅದು ಕಾಶ್ಮೀರವಿರಬಹುದು, ದೇಶದ ಅಥವಾ ವಿಶ್ವದ ಯಾವುದೇ ಭಾಗವಾಗಿರಬಹುದು, ದುಡಿದು ತಿನ್ನುವವರಿಗೆ ತಮ್ಮ ಜೀವನ ಮುಖ್ಯವಾಗಿರುವುದೇ ವಿನಃ, ಯಾವುದೇ ಹೋರಾಟವಲ್ಲ. ಅವರಿಗೆ ಜೀವನವೇ ಹೋರಾಟವಾಗಿರುತ್ತದೆ.

ನಾವು ಶ್ರೀನಗರದ ಲಾಲ್‌ಚೌಕ್‌ನಲ್ಲಿ ಸುಮಾರು ಎರಡು ಗಂಟೆ ಇದ್ದೆವು, ಹೊರಟಾಗ ರಾತ್ರಿ 10ರ ಸಮಯ. ಅದು ಸಹಜ ಸ್ಥಿತಿಯಲ್ಲೇ ಇತ್ತು. ಅಲ್ಲಿ ಒಂದು ನಿಯಮ ಮಾಡಿದ್ದಾರೆ. ಯಾವುದೇ ವಾಹನ ನಿಲುಗಡೆ ಮಾಡುವಂತಿಲ್ಲ, ಅಷ್ಟೇ. ನಾವು ಇದ್ದ ವಾಹನವನ್ನು ಈ ಲಾಲ್‌ಚೌಕ್ ಹತ್ತಿರ ನಿಲ್ಲಿಸಿ ನಮ್ಮನ್ನು ಇಳಿಸಿ ಮತ್ತೊಂದು ಕಡೆ ವಾಹನವನ್ನು ಚಾಲಕ ನಿಲ್ಲಿಸಿಕೊಂಡಿದ್ದ. ಈ ಲಾಲ್‌ಚೌಕ್ ಹಿಂದೆ ಘರ್ಷಣೆಯ ತಾಣವಾಗಿತ್ತು. ಅಲ್ಲಿ ರಾಷ್ಟ್ರ ಧ್ವಜ ಹಾರಿಸುವುದು ಸಾಧ್ಯವಾಗಿರಲಿಲ್ಲ. ಅದರ ಹತ್ತಿರ ಹೋಗುವುದು ಕಷ್ಟಸಾಧ್ಯವೆನಿಸಿತ್ತು. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ಒಂದು ರೀತಿ ಸಹಜ ಸ್ಥಿತಿಯನ್ನು



> ಶ್ರೀನಗರದಿಂದ ಕಾರ್ಗಿಲ್‌ಗೆ ಹೋಗುವ ಮಾರ್ಗ ಅತ್ಯಂತ ಕಠಿಣವಾದ ಮಾರ್ಗ. ಈ ರಸ್ತೆಯಲ್ಲಿ ಹೋಗುವಾಗ ಹೊಸದಾದ ಅನೇಕ ಸುರಂಗಮಾರ್ಗಗಳ ನಿರ್ಮಾಣ ಕಾಣಬಹುದು. ಎಲ್ಲ ಕಡೆಯೂ ಕೆಲಸ ಪ್ರತಿದಿನ ನಡೆಯುತ್ತಿದೆ. ಹಿಮಾಲಯ ಪರ್ವತ ಶ್ರೇಣಿಯಲ್ಲಿ ರಸ್ತೆ ಮಾಡುವ ಕೆಲಸವನ್ನು ಬಿಆರ್‌ಓ (ಬಾರ್ಡರ್ ರೋಡ್ ಆರ್ಗನೈಸೇಷನ್) ಮಾಡುತ್ತದೆ. ಇದು ಭಾರತದ ಮಿಲಿಟರಿಯ ಭಾಗ. ಹಾಗಾಗಿ ಉತ್ತಮ ಗುಣಮಟ್ಟದ ಕಾಮಗಾರಿ ಕಾಣಲು ಸಾಧ್ಯ. ಇಲ್ಲೆಲ್ಲಾ ರಸ್ತೆ, ಸುರಂಗ ನಿರ್ಮಿಸುವುದು ಸುಲಭದ ಕೆಲಸವಲ್ಲ. ಅತ್ಯಂತ ಚಳಿ ಪ್ರದೇಶದಲ್ಲಿ, ಬೆಟ್ಟ, ಗುಡ್ಡ, ಪರ್ವತ ಶ್ರೇಣಿಯಲ್ಲಿ ಕೆಲಸ ನಿರ್ವಹಿಸಬೇಕು. ಕಾಲಿಗೆ ಬೂಟು, ಸ್ವೆಟರ್ (ಬೆಚ್ಚನೆಯ ಉಡುಪು) ಇಲ್ಲದಿದ್ದಲ್ಲಿ ಅಲ್ಲಿ ಹೆಚ್ಚುಹೊತ್ತು ನಿಲ್ಲಲಾಗುವುದಿಲ್ಲ. ಆದರೂ ಕೆಲಸ ನಿರಂತರವಾಗಿ ನಡೆಯುತ್ತಿದೆ. ಕೆಲಸಗಾರರೂ ಅದಕ್ಕೆ ತಕ್ಕಂತೆ ವೇಷ ಹಾಕಿಕೊಂಡು ಕಷ್ಟಪಟ್ಟು ಕಾರ್ಯನಿರ್ವಹಿಸುತ್ತಾರೆ.

ಅಲ್ಲಿ ಕಾಣಬಹುದು. ಇದು ಕೆಲವರಿಗೆ ಇಷ್ಟವಾಗದಿರಬಹುದಾದರೂ ಅಲ್ಲಿನ ಜನ ಶಾಂತಿ ಬಯಸಿದ್ದಾರೆ ಎಂಬಂತೆ ಕಂಡು ಬರುತ್ತದೆ.

ನಾನು ಈ ಪ್ರದೇಶಗಳಲ್ಲಿ (ಜಮ್ಮು–ಕಾಶ್ಮೀರ–ಕಾರ್ಗಿಲ್–ಲೇಹ್–ಲಡಾಕ್–ಹಿಮಾಚಲ ಪ್ರದೇಶ) ಮುಖ್ಯವಾಗಿ ಗಮನಿಸಿದ್ದು ರಸ್ತೆಯ ಅಭಿವೃದ್ಧಿಯನ್ನು, ಮೊದಲನೆಯದಾಗಿ ಜಮ್ಮುವಿನಿಂದ ಹೊರಟು ಶ್ರೀನಗರಕ್ಕೆ ಹೋಗುವಾಗ. ಈಗ ರಸ್ತೆ ಉತ್ತಮವಾಗಿದೆ. ಮಧ್ಯದಲ್ಲಿ ಎರಡು ಮುಖ್ಯ ಸುರಂಗಮಾರ್ಗ ಕಾಣಬಹುದು. ಎರಡೂ ದೊಡ್ಡ ಸುರಂಗಮಾರ್ಗಗಳೇ. ಅದರಲ್ಲಿ ಮೊದಲನೆಯದು ಚನಾನಿ–ನಶ್ರಿ ಸುರಂಗ ಮಾರ್ಗ ಜಮ್ಮು–ಶ್ರೀನಗರ ರಾಷ್ಟ್ರೀಯ ಹೆದ್ದಾರಿಯ ಸಂಖ್ಯೆ 44. ಇದನ್ನು ಈ ಹಿಂದೆ ಎನ್‌ಎಚ್ '1ಎ' ಎಂದು ಕರೆಯಲಾಗುತ್ತಿತ್ತು. ಜಮ್ಮು–ಶ್ರೀನಗರ ರಾಷ್ಟ್ರೀಯ ಹೆದ್ದಾರಿಯ ಜೊತೆಗೆ ಮತ್ತೊಂದು ರಸ್ತೆ 'ಮುಘಲ್ ರಸ್ತೆ' ಇದೆ. ಇದು ಪೂಂಚ್ ಜಿಲ್ಲೆಯಿಂದ ಶ್ರೀನಗರಕ್ಕೆ ಸಂಪರ್ಕ ಕಲ್ಪಿಸುತ್ತದೆ.

ಜಮ್ಮು–ಶ್ರೀನಗರ ಹೆದ್ದಾರಿಯಲ್ಲಿನ ಎರಡು ಪ್ರಮುಖ ಸುರಂಗ ಮಾರ್ಗಗಳೆಂದರೆ ಜವಾಹರ್ ಟನಲ್ ಹಾಗೂ ಚನಾನಿ–ನಶ್ರಿ ಸುರಂಗ ಮಾರ್ಗ. ಜವಾಹರ್ ಟನಲ್‌ನ ಒಟ್ಟು ಉದ್ದ 2.80 ಕಿ.ಮೀ. ಈ ಸುರಂಗದ ಕೆಲಸ 1954ರಲ್ಲಿ ಪ್ರಾರಂಭವಾಗಿದ್ದು, 22–12–1956ರಲ್ಲಿ ಉದ್ಘಾಟನೆಯಾಯಿತು. ಮತ್ತೊಂದು ಪ್ರಮುಖ ಸುರಂಗ ಮಾರ್ಗ; ಚನಾನಿ–ನಶ್ರಿ ಸುರಂಗ ಮಾರ್ಗ. ಇದು ಪ್ರಧಾನಿ ನರೇಂದ್ರ ಮೋದಿಯವರಿಂದ 2–4–2017ರಲ್ಲಿ ಉದ್ಘಾಟಿಸಲ್ಪಟ್ಟಿತು. ಈ ಟನಲ್‌ನ ಒಟ್ಟು ಉದ್ದ 9.2 ಕಿ.ಮೀ. ಇದು ದ್ವಿಮುಖ ಸಂಚಾರದ ಸುರಂಗಮಾರ್ಗ. ಇದನ್ನು ಏಷಿಯಾದ ಉಭಯ ಮಾರ್ಗದ ಅತಿದೊಡ್ಡ ಟನಲ್ ಎಂದು ಹೇಳಲಾಗುತ್ತದೆ. ಇದಕ್ಕೆ ಆಗಿರುವ ವೆಚ್ಚ ಸುಮಾರು 3000 ಕೋಟಿ. ಇದನ್ನು ನಿರ್ಮಿಸಲು 7 ವರ್ಷ ತೆಗೆದುಕೊಳ್ಳಲಾಗಿದೆ. ಇದು ವರ್ಷಪೂರ್ತಿ ವಾಹನ ಓಡಾಡಬಹುದಾದ, ಸರ್ವಋತು ಸುರಂಗ ಮಾರ್ಗವಾಗಿದೆ. ಉಧಂಪುರ ಜಿಲ್ಲೆಯ ಚನಾನಿಯ ಸಮೀಪ ಇದು ನಿರ್ಮಾಣವಾಗಿದೆ. ಇದರ ಕಾಮಗಾರಿ 23–5–2011ರಲ್ಲಿ ಆರಂಭವಾಗಿದ್ದು, 2017ರಲ್ಲಿ ಮುಕ್ತಾಯವಾಗಿದೆ.

ಈ ಹಿಂದೆ ಜಮ್ಮುವಿನಿಂದ ಶ್ರೀನಗರಕ್ಕೆ ಹೋಗಬೇಕಾದರೆ ಅತ್ಯಂತ ದುರ್ಗಮವಾದ ಪಟ್ನಿಟಾಪ್ ಹಿಲ್ ಸ್ಟೇಷನ್ ಮೂಲಕ ಸಂಚರಿಸಬೇಕಾಗಿತ್ತು. ಇದು ಕಠಿಣವಾದ ರಸ್ತೆಯಾದ್ದರಿಂದ ಪ್ರಯಾಣದ ಅವಧಿ ಜಾಸ್ತಿಯಾಗುತ್ತಿತ್ತು. ಹೊಸ ಸುರಂಗದಿಂದಾಗಿ ಈಗ ಪಟ್ನಿಟಾಪ್‌ಗೆ ಹೋಗುವ ಅಗತ್ಯವಿಲ್ಲ. ಈ 9.2 ಕಿ.ಮೀ. ದೂರದ ಟನಲ್ ಅತ್ಯಂತ ವ್ಯವಸ್ಥಿತವಾದ ಹಾಗೂ ವಿಶ್ವಮಟ್ಟದ ಸುರಕ್ಷಾ ವಿಧಾನ ಅಳವಡಿಸಿರುವ ಟನಲ್ ಆಗಿದೆ. ಇದರಲ್ಲಿ ಆಧುನಿಕ ಸ್ಕ್ಯಾನರ್ ಅಳವಡಿಸಲಾಗಿದೆ. ಯಾವುದಾದರೂ ಭದ್ರತಾ ಲೋಪವಾದಲ್ಲಿ ತಕ್ಷಣ ಮಾಹಿತಿ ದೊರಕುತ್ತದೆ. ಉತ್ತಮವಾದ ವಾತಾನುಕೂಲ (ವೆಂಟಿಲೇಷನ್) ವ್ಯವಸ್ಥೆ, ಉತ್ತಮವಾದ ಸಂವಹನಾ (ಕಮ್ಯುನಿಕೇಷನ್) ವ್ಯವಸ್ಥೆ, ತನ್ನದೇ ಆದ ವಿದ್ಯುತ್ ಪೂರೈಕೆ ವ್ಯವಸ್ಥೆ, ಯಾವುದೇ ತೊಂದರೆಯಾದರೂ ತಕ್ಷಣ ಮಾಹಿತಿ ನೀಡುವ ವ್ಯವಸ್ಥೆ, ಎಸ್‌ಒಎಸ್ ಕಾಲ್ ಬಾಕ್ಸ್, ಬೆಂಕಿ ನಿರೋಧಕ ಸಾಧನ, ಅಲ್ಲಲ್ಲೇ ಶೌಚಾಲಯ, ವಾಹನ ನಿಲುಗಡೆಗೆ 'ಬೇ'ಗಳನ್ನು ನಿರ್ಮಿಸಲಾಗಿದ್ದು, ಇದರಲ್ಲಿನ ಸಂಚಾರ ಅಪೂರ್ವ ಅನುಭವ ನೀಡುವುದಲ್ಲದೆ ನಮ್ಮ ದೇಶದ ಬಗ್ಗೆ ಹೆಮ್ಮೆಯೆನ್ನಿಸುತ್ತದೆ.

ಈ ರಾಷ್ಟ್ರೀಯ ಹೆದ್ದಾರಿ ಉಧಂಪುರ್, ರಾಂಬನ್, ಕುಲಗಾಮ್, ಅನಂತನಾಗ್, ಘೂಲ್‌ವಾವಾ ಜಿಲ್ಲೆಗಳಲ್ಲಿ ಹಾದುಹೋಗಿ ಶ್ರೀನಗರದ ಲಾಲ್‌ಚೌಕ್ ಸೇರುತ್ತದೆ. ಇದರಲ್ಲಿ 88 ಕಿ.ಮೀ. ಕಾಶ್ಮೀರ ಕಣಿವೆಗೆ ಸೇರಿದ್ದರೆ, ಉಳಿದದ್ದು ಜಮ್ಮು ವಿಭಾಗಕ್ಕೆ ಸೇರುತ್ತದೆ. ಈ ಹೆದ್ದಾರಿಯಲ್ಲಿ ಪ್ರತಿದಿನ ಸರಾಸರಿ 7000 ವಾಹನ ಸಂಚರಿಸುತ್ತದೆ. ನೂತನ ಸುರಂಗ ಮಾರ್ಗದಿಂದಾಗಿ ಪ್ರತಿದಿನ ರೂ. 30 ಲಕ್ಷದಷ್ಟು ಇಂಧನ ಉಳಿತಾಯವಾಗುತ್ತಿದೆ. ಇದರ ನಂತರ ನಾವು ಕಾಣುವುದು ಜವಾಹರ್ ಟನಲ್. ಇದು 2.85 ಕಿಮೀ ಇರುವಂತಹುದು. (ಬನಿಹಾಲ್–ರಾಂಬನ್ ಸುರಂಗಮಾರ್ಗ). ಇವುಗಳಿಂದಾಗಿ ಇಂದು ಪ್ರಯಾಣ ಸುಖಕರವಾಗಿರುವುದೇ ಅಲ್ಲದೇ, ಪ್ರಯಾಣದ ಅವಧಿಯೂ ಕಡಿಮೆಯಾಗಿದೆ.

ಶ್ರೀನಗರದಿಂದ ಕಾರ್ಗಿಲ್‌ಗೆ ಹೋಗುವ ಮಾರ್ಗ ಅತ್ಯಂತ ಕಠಿಣವಾದ ಮಾರ್ಗ. ಈ ರಸ್ತೆಯಲ್ಲಿ ಹೋಗುವಾಗ ಹೊಸದಾದ ಅನೇಕ ಸುರಂಗಮಾರ್ಗಗಳ ನಿರ್ಮಾಣ ಕಾಣಬಹುದು. ಎಲ್ಲ ಕಡೆಯೂ ಕೆಲಸ ಪ್ರತಿದಿನ ನಡೆಯುತ್ತಿದೆ. ಹಿಮಾಲಯ ಪರ್ವತ ಶ್ರೇಣಿಯಲ್ಲಿ ರಸ್ತೆ ಮಾಡುವ ಕೆಲಸವನ್ನು ಬಿಆರ್‌ಓ (ಬಾರ್ಡರ್ ರೋಡ್ ಆರ್ಗನೈಸೇಷನ್) ಮಾಡುತ್ತದೆ. ಇದು ಭಾರತದ ಮಿಲಿಟರಿಯ ಭಾಗ. ಹಾಗಾಗಿ ಉತ್ತಮ ಗುಣಮಟ್ಟದ ಕಾಮಗಾರಿ ಕಾಣಲು ಸಾಧ್ಯ. ಇಲ್ಲೆಲ್ಲಾ ರಸ್ತೆ ಸುರಂಗ ನಿರ್ಮಿಸುವುದು ಸುಲಭದ ಕೆಲಸವಲ್ಲ. ಅತ್ಯಂತ ಚಳಿ ಪ್ರದೇಶದಲ್ಲಿ, ಬೆಟ್ಟ, ಗುಡ್ಡ, ಪರ್ವತ ಶ್ರೇಣಿಯಲ್ಲಿ ಕೆಲಸ ನಿರ್ವಹಿಸಬೇಕು. ಕಾಲಿಗೆ ಬೂಟು, ಸ್ವೆಟರ್ (ಬೆಚ್ಚನೆಯ ಉಡುಪು) ಇಲ್ಲದಿದ್ದಲ್ಲಿ ಅಲ್ಲಿ ಹೆಚ್ಚುಹೊತ್ತು ನಿಲ್ಲಲಾಗುವುದಿಲ್ಲ. ಆದರೂ ಕೆಲಸ ನಿರಂತರವಾಗಿ ನಡೆಯುತ್ತಿದೆ. ಕೆಲಸಗಾರರೂ ಅದಕ್ಕೆ ತಕ್ಕಂತೆ ವೇಷ ಹಾಕಿಕೊಂಡು ಕಷ್ಟಪಟ್ಟು ಕಾರ್ಯನಿರ್ವಹಿಸುತ್ತಾರೆ.

ಲೇಹ್–ಲಡಾಕ್‌ನಿಂದ ಭಾರತದ ಗಡಿಯಲ್ಲಿರುವ (ಚೀನಾ ಗಡಿ) ಪೆಂಗಾಗ್ ಲೇಕ್‌ಗೆ ಹೋಗುವಾಗಲೂ ಈ ಬಿಆರ್‌ಓ ಸಂಸ್ಥೆ ರಸ್ತೆ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಈಗ ಚೀನಾ ಗಡಿ ಭಾಗದವರೆಗೆ ಉತ್ತಮ ರಸ್ತೆ ನಿರ್ಮಿಸಲಾಗುತ್ತಿದೆ. ಕೆಲವೆಡೆ ನಿರ್ಮಾಣವೂ ಆಗಿದೆ. ಈ ಬಗ್ಗೆ ಚೀನಾ ದೇಶ ಮಾಡಿದ್ದ ಆರೋಪಕ್ಕೆ ಭಾರತ 'ಕ್ಯಾರೇ' ಎನ್ನದೆ ರಸ್ತೆ ನಿರ್ಮಾಣ ಕಾರ್ಯ ಮುಂದುವರೆಸಿದೆ. ಇಂದು ಆ ಭಾಗದಲ್ಲಿ ಯುದ್ಧ ಏರ್ಪಟ್ಟರೆ ಒಂದು ಗಂಟೆಯಲ್ಲಿ ನಮ್ಮ ಸೈನ್ಯ ಆ ಜಾಗ ತಲುಪಬಹುದಾಗಿದೆ. ಇದು ಚೀನಾದ ಆತಂಕಕ್ಕೆ ಕಾರಣ. ಆದರೆ ನಮ್ಮ ದೇಶದಲ್ಲಿ ನಾವು ರಸ್ತೆ ನಿರ್ಮಿಸಲು ಚೀನಾದೇಶದ ಅನುಮತಿ ಬೇಕಾಗಿಲ್ಲ, ಅಲ್ಲದೆ ಅದರ ಆಕ್ಷೇಪಣೆಯನ್ನು ಗಮನಿಸುವ ಅಗತ್ಯವೂ ಇರುವುದಿಲ್ಲ. ಹಾಗಾಗಿ ರಸ್ತೆ ಕೆಲಸ ಸುಲಲಿತವಾಗಿ ನಡೆಯುತ್ತಿದೆ. ಬಹುಶಃ ಇನ್ನು ನಾಲ್ಕಾರು ವರ್ಷದಲ್ಲಿ ಈಗ ತೆಗೆದುಕೊಂಡಿರುವ ರಸ್ತೆ ಹಾಗೂ ಸುರಂಗ ಮಾರ್ಗಗಳ ಕೆಲಸ ಮುಗಿಯಬಹುದು. ಆಗ ಸಂಚಾರ ಅತ್ಯಂತ ಸುಲಲಿತವಾಗಿರುತ್ತದೆ ಎನಿಸುತ್ತದೆ.

ಅದೇ ರೀತಿ ಹಿಮಾಚಲ ಪ್ರದೇಶದಲ್ಲಿ ಮನಾಲಿಯಿಂದ ಚಂಡೀಗಢಕ್ಕೆ ಹೋಗುವ ರಸ್ತೆಯಲ್ಲೂ ಅನೇಕ ಸುರಂಗ ಮಾರ್ಗ ಆಗುತ್ತಿರುವುದನ್ನು ಕಾಣಬಹುದು. ಇವೆಲ್ಲಾ ಕಾರ್ಯಗತವಾದಾಗ ಈ ಭಾಗದ ಸಂಚಾರ ವ್ಯವಸ್ಥೆ ಖಂಡಿತಾ ಸುಧಾರಣೆಯಾಗುತ್ತದೆ ಎಂಬುದು ಕಂಡು ಬರುತ್ತದೆ. ಒಂದು ದೇಶದ ಪ್ರಗತಿ ಕಾಣುವುದು ಅಲ್ಲಿನ ಸುಸಜ್ಜಿತ ರಸ್ತೆಗಳಿಂದ. ಹಿಮಾಲಯ ಪರ್ವತ ಶ್ರೇಣಿಯಲ್ಲಿ ಆಗಾಗ್ಗೆ ಆಗುವ ಪ್ರಾಕೃತಿಕ ಬದಲಾವಣೆಯಿಂದ ವಾಹನ ಓಡಾಟಕ್ಕೆ ಧಕ್ಕೆಯಾಗುತ್ತಿತ್ತು. ಬಹುಶಃ ಮುಂದೆ ಆ ಸಮಸ್ಯೆ ಕಾಣಲಾರದು. ಅಲ್ಲದೆ ರಸ್ತೆ ನಿರ್ಮಾಣ ಮಿಲಿಟರಿ ಸಂಸ್ಥೆಯಿಂದ ಆಗುತ್ತಿರುವುದೂ ಸಮಾಧಾನದ ವಿಷಯವಾಗಿದೆ. ಈವರೆವಿಗೆ ಗಲಭೆಗಳಿಂದ ಹೆಸರು ಕೆಡಿಸಿಕೊಂಡಿದ್ದ ಈ ಪ್ರದೇಶದಲ್ಲಿ ಈಗ ಸುಧಾರಣೆಯ ಪರ್ವ ಕಂಡುಬರುತ್ತಿದೆ.

# ರಾಷ್ಟ್ರಪತಿಯಾಗಿ ಮುರ್ಮು ಆಯ್ಕೆ: ಮೈಸೂರಲ್ಲಿ ಸಂಭ್ರಮಾಚರಣೆ






ಮೈಸೂರು, ಜು.21(ಜಿಎ)– ನೂತನ ರಾಷ್ಟ್ರಪತಿಗಳಾಗಿ ದ್ರೌಪದಿ ಮುರ್ಮು ಆಯ್ಕೆಯಾದ ಹಿನ್ನೆಲೆಯಲ್ಲಿ ಮೈಸೂರು ನಗರ ಬಿಜೆಪಿ ವತಿಯಿಂದ ವಿಜಯ ಯಾತ್ರೆ ನಡೆಸಲಾಯಿತು.

ಕೃಷ್ಣರಾಜ ಕ್ಷೇತ್ರದ 55ನೇ ವಾರ್ಡಿನ ಮೇದರ ಕೇರಿ ಮತ್ತು ನಗರ ಬಿಜೆಪಿ ಕಚೇರಿ ಮುಂಭಾಗ ವಿಜಯೋತ್ಸವ ಆಚರಿಸಿ, ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಕಾರ್ಯಕರ್ತರು ದ್ರೌಪದಿ ಮುರ್ಮು ಅವರ ಫೋಟೋಗಳನ್ನು ಹಿಡಿದು ರಾಮಸ್ವಾಮಿ ವೃತ್ತದವರೆಗೂ ನಗರ ಬಿಜೆಪಿ ಅಧ್ಯಕ್ಷ ಶ್ರೀವತ್ಸ ನೇತೃತ್ವದಲ್ಲಿ ವಿಜಯಯಾತ್ರೆ ನಡೆಸಿ. ನಂತರ ಕಚೇರಿ ಮುಂಭಾಗ ಪಟಾಕಿ ಸಿಡಿಸಿದರು. ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರು ಕಚೇರಿ ಅಕ್ಕ–ಪಕ್ಕದ ಮನೆಗಳಿಗೆ ಸಿಹಿ ಹಂಚಿದರು.

ಈ ವೇಳೆ ಶ್ರೀವತ್ಸ ಮಾತನಾಡಿ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಶೇ.31 ರಷ್ಟು ಮತಗಳನ್ನು ಮಾತ್ರ ಪಡೆದುಕೊಂಡಿದ್ದಾರೆ. ಆದರೆ, ದ್ರೌಪದಿ ಮುರ್ಮು ಅವರು ಶೇ.68 ಕ್ಕೂ ಅಧಿಕ ಮತಗಳನ್ನು ಪಡೆದು ದಾಖಲೆ ನಿರ್ಮಿಸಿದ್ದಾರೆ. ದ್ರೌಪದಿ ಮುರ್ಮು ಪ್ರಮಾಣ ವಚನ ಸ್ವೀಕರಿಸುವ ದಿನ ಚಾಮರಾಜ ಕ್ಷೇತ್ರದ ಮಂಜುನಾಥಪುರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರೊಂದಿಗೆ ವಿಶೇಷ ಸಹ ಪಂಕ್ತಿ ಭೋಜನವನ್ನು ಆಯೋಜಿಸಲಾಗುತ್ತದೆ ಎಂದು ತಿಳಿಸಿದರು.

ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಮೈಸೂರು ನಗರ ಬಿಜೆಪಿ ಸಹ ವಕ್ತಾರ ಕೇಬಲ್ ಮಹೇಶ್, ಮಾಜಿ ಪಾಲಿಕೆ ಸದಸ್ಯ ಜಯರಾಂ, ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಮಹಿಳಾ ಪ್ರಕೋಷ್ಟಕದ ಮಮತಾ ಶೆಟ್ಟಿ, ಜೋಗಿ ಮಂಜು, ಪ್ರಧಾನ ಕಾರ್ಯದರ್ಶಿ ಗಿರಿಧರ್, ಸೋಮಸುಂದರ್, ಜಯಪ್ರಕಾಶ್, ಶಾಂತಕ್ಕ, ಯಶಸ್ವಿನಿ ಸೋಮಶೇಖರ್, ಮಾಧ್ಯಮ ಸಹ ವಕ್ತಾರ ಪ್ರದೀಪ್ ಕುಮಾರ್,ಜಗದೀಶ್ ಸೇರಿದಂತೆ ಇತರೆ ಕಾರ್ಯಕರ್ತರು ಭಾಗಿಯಾಗಿದ್ದರು.

**ಕೆ.ಆರ್. ಕ್ಷೇತ್ರದಲ್ಲಿ ಸಂಭ್ರಮ :** ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ವಿಜಯೋತ್ಸವ ಆಚರಿಸಲಾಯಿತು. ಮತ ಎಣಿಕೆಯಲ್ಲಿ ಭಾರೀ ಮುನ್ನಡೆ ಸಾಧಿಸಿದ್ದ ಮುರ್ಮು ಅವರ ಗೆಲುವು ಖಚಿತವಾಗುತ್ತಿದ್ದಂತೆ ಕ್ಷೇತ್ರದ 55ನೇ ವಾರ್ಡ್ ವ್ಯಾಪ್ತಿಯ ಮೇದರ ಕೇರಿಯಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಈ ವೇಳೆ ಮೋದಿ ಅವರು ಸಾಮಾಜಿಕ ನ್ಯಾಯ ನೀಡಿದ್ದಾರೆ ಎಂದು ವಿವಿಧ ಘೋಷಣೆ ಮೂಲಕ ಧನ್ಯವಾದ ತಿಳಿಸಿದರು. ಈ ವೇಳೆ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಮಾ.ವಿ.ರಾಮಪ್ರಸಾದ್, ರೂಪ ಯೋಗೇಶ್, ಪಿ.ಟಿಕೃಷ್ಣ, ಕೃಷ್ಣರಾಜ ಕ್ಷೇತ್ರದ ಪ್ರಧಾನ ಕಾರ್ಯ ದರ್ಶಿ ಓಂ.ಶ್ರೀನಿವಾಸ್, ನಾಗೇಂದ್ರಕುಮಾರ್, ಉಪಾಧ್ಯಕ್ಷ ಜೆ.ರವಿ, ದೇವರಾಜಗೌಡ, ಪ್ರಸಾದ್ ಬಾಬು, ಪುರುಷೋತ್ತಮ್, ಶಿವಪ್ಪ, ಎಸ್ಟಿ ಮೋರ್ಚಾ ಅಧ್ಯಕ್ಷ ನಾಗರಾಜ್, ಪ್ರಧಾನ ಕಾರ್ಯದರ್ಶಿ ವಿಜಯ್, ಉಮೇಶ್, ಮಾಸ್ಟರ್ ಮಂಜುನಾಥ್, ಮೋಹನ್, ನಾಗರತ್ನ, ಅನ್ನ ಪೂರ್ಣ, ಆದಿ, ಮುರಳಿಧರ(ವಿಷ್ಣು), ಮಧು, ಉಮಾಶಂಕರ್, ವಿಜಯ, ಅನ್ನಪೂರ್ಣ, ಉಮಾ ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ಜು.23ರಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಪುಸ್ತಕ ಬಿಡುಗಡೆ ಹಿನ್ನೆಲೆಯಲ್ಲಿ ಬೆಂಗಳೂರಿನ ಜನಮನ ಟ್ರಸ್ಟ್ ಪದಾಧಿಕಾರಿಗಳು ಗುರುವಾರ ಸಿದ್ಧತೆಗಳನ್ನು ಪರಿಶೀಲಿಸಿದರು. ಈ ವೇಳೆ ಲಕ್ಷ್ಮಣ ಕೊಡಸೆ, ಎಂ.ರಾಮಯ್ಯ, ಪ್ರಜ್ವಲ್ ಬಿ.ರಾಜ್, ಕೆ.ಎಸ್.ಶಿವರಾಮ್, ಹರೀಶ್ ಮೊಗಣ್ಣ ಇನ್ನಿತರರಿದ್ದಾರೆ.

## ಪ್ರವಾಹ ಭೀತಿ: ಸುರಕ್ಷಿತ ಸ್ಥಳಗಳಿಗೆ ತೆರಳಲು ಸೂಚನೆ

ಮೈಸೂರು,ಜು.21–ಕಾವೇರಿ ನೀರಾವರಿ ನಿಗಮ ನಿಯಮಿತ ವತಿಯಿಂದ ತಾರಕ ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ, ತಾರಕ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿ ಜಲಾಶಯವು ಗರಿಷ್ಠ ಮಟ್ಟ ತಲುಪುವ ಹಂತದಲ್ಲಿ ಇರುವುದರಿಂದ, ಜಲಾಶಯದಿಂದ ನದಿಗೆ ಯಾವುದೇ ಕ್ಷಣದಲ್ಲಾದರೂ ನೀರನ್ನು ಹೊರ ಬಿಡಲಾಗುವುದು. ಈ ಹಿನ್ನೆಲೆಯಲ್ಲಿ ತಾರಕ ನದಿಯ ದಂಡೆಯಲ್ಲಿ ವಾಸಿಸುತ್ತಿರುವವರು, ಸಾರ್ವಜನಿಕರು ಹಾಗೂ ನದಿ ಪಾತ್ರದ ತಗ್ಗು ಪ್ರದೇಶದಲ್ಲಿ ಇರುವವರು ತಮ್ಮ ಆಸ್ತಿ ಪಾಸ್ತಿ, ಜನ ಜಾನುವಾರು ರಕ್ಷಣೆಗೆ ಮುನ್ನೆಚ್ಚರಿಕೆ ವಹಿಸಿ, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಹೆಚ್.ಡಿ.ಕೋಟೆ ತಾರಕ ನಾಲಾ ಉಪ–ವಿಭಾಗದ ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಾಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*

# ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ

# ಲವ್ 360

## ಕರಾವಳಿಯ ಕ್ರೈಮ್ ಲವ್‌ಸ್ಟೋರಿ..!




ಮೊಗ್ಗಿನ ಮನಸ್ಸು, ಕೃಷ್ಣನ್ ಲವ್‌ಸ್ಟೋರಿ ಖ್ಯಾತಿಯ ನಿರ್ದೇಶಕ ಶಶಾಂಕ್ ಅವರೀಗ ಕ್ರೈಮ್ ಹಿನ್ನೆಲೆಯಲ್ಲಿ ನಡೆಯೋ ಪೇಮಕಥೆಯನ್ನು ಹೇಳಹೊರಟಿದ್ದಾರೆ. ಲವ್ 360 ಹೆಸರಿನ ಆ ಚಿತ್ರದ ಹಾಡೊಂದರ ಬಿಡುಗಡೆ ಹಾಗೂ ಮೊಗ್ಗಿನ ಮನಸು ಚಿತ್ರಕ್ಕೆ 14 ವರ್ಷ ತುಂಬಿದ ಸಂತಸವನ್ನು ಹಂಚಿಕೊಳ್ಳಲೆಂದು ಶಶಾಂಕ್ ಅವರು ಕಾರ್ಯಕ್ರಮ ಆಯೋಜಿಸಿದ್ದರು. ನಂತರ ಮಾತನಾಡಿದ ನಿರ್ದೇಶಕ ಶಶಾಂಕ್, ನಮ್ಮ ಮೊಗ್ಗಿನ ಮನಸು ಬಿಡುಗಡೆಯಾಗಿ ಇಂದಿಗೆ 14 ವರ್ಷ ತುಂಬಿದೆ. ಆ ಸಂತೋಷವನ್ನು ನಿಮ್ಮ ಜೊತೆ ಹಂಚಿಕೊಳ್ಳುತ್ತಿದ್ದೇನೆ. ಈಗ ಬಿಡುಗಡೆಯಾಗಿರುವುದು ಚಿತ್ರದ ಮೂರನೇ ಗೀತೆ, ಲವ್ 360 ಚಿತ್ರದಲ್ಲಿ ಪ್ರೇಮದ ಜೊತೆ ಸ್ವಾರ್ಥವನ್ನು ಸಮಾಜ ಹೇಗೆ ಬಳಸಿಕೊಳ್ಳುತ್ತಿದೆ ಎಂಬುದನ್ನು ಹೇಳಲು ಪ್ರಯತ್ನಿಸಿದ್ದೇವೆ. ನಾನು ಹೊಸಬರೊಂದಿಗೆ ಕೆಲಸ ಮಾಡಿ ಸುಮಾರು ವರ್ಷಗಳೇ ಆಗಿತ್ತು. ಪ್ರವೀಣ್‌ಗೆ ನಟನೆಯ ತರಬೇತಿ ನೀಡಿ, ಚಿತ್ರ ಆರಂಭಿಸಿದೆವು. ರಚನಾ ಇಂದರ್ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಚಿತ್ರದ ಥೀಮ್ ಥರ ಈ ಹಾಡನ್ನು ಮಾಡಿದ್ದೇವೆ, ಇಡೀ ಚಿತ್ರದ ಆಶಯ ಇದರಲ್ಲಿದೆ. ಚಿತ್ರದ ರಿಲೀಸ್ ಡೇಟನ್ನು ಸದ್ಯದಲ್ಲೇ ತಿಳಿಸುವುದಾಗಿ ಹೇಳಿದರು.

ನಾಯಕ ಪ್ರವೀಣ್ ಮಾತನಾಡುತ್ತ ಈಗಾಗಲೇ ಚಿತ್ರದ 2 ಹಾಡು ಹಿಟ್ ಆಗಿದ್ದು ತುಂಬಾ ಖುಷಿ ಕೊಟ್ಟಿದೆ. ನನ್ನ ಮೊದಲ ಸಿನಿಮಾದ ಹಾಡುಗಳು ಹಿಟ್ ಆಗಿದ್ದು ಖುಷಿಯಾಗಿದೆ. ನಾನು ಎಲ್ಲೇ ಹೋದ್ರು ಹಾಡಿನ ಬಗ್ಗೆಯೇ ಕೇಳುತ್ತಾರೆ. ಚಿತ್ರದಲ್ಲಿ ನಾನೊಬ್ಬ ಬೋಟ್ ಮೆಕ್ಯಾನಿಕ್ ಆಗಿದ್ದೇನೆ. ಶಶಾಂಕ್ ಅವರು ಸಾಕಷ್ಟು ವರ್ಕ್‌ಶಾಪ್ ನಡೆಸಿ ನನ್ನಿಂದ ಅಭಿನಯ ತೆಗೆಸಿದ್ದಾರೆ ಎಂದು ಹೇಳಿದರು.

ಚಿತ್ರದ ನಾಯಕಿ ರಚನಾ ಇಂದರ್ ಮಾತನಾಡಿ, ಪೂರ್ಣಪ್ರಮಾಣದ ನಾಯಕಿಯಾಗಿ ಅಭಿನಯಿಸಿರುವ ಮೊದಲ ಚಿತ್ರವಿದು. ಚಿತ್ರ ತುಂಬಾ ಚೆನ್ನಾಗಿ ಮೂಡಿಬಂದಿದೆ. ನಮ್ಮ ಈ ಹಿಂದಿನ ಹಾಡಿಗೆ ಈಗಾಗಲೇ 250 ಪ್ಲಸ್ ರೀಲ್ಸ್ ಆಗಿವೆ. ಈ ಗೀತೆ ಕೂಡ ಹಿಟ್ ಆಗುವ ನಿರೀಕ್ಷೆಯಿದೆ ಎಂದರು.

ನಂತರ ಮಾತನಾಡಿದ ಆನಂದ್ ಆಡಿಯೋ ಶಾಮ್, ನಾವು ಮೊದಲೇ ಸಾಂಗ್ ಹಿಟ್ ಆಗುತ್ತೆ ಅಂದುಕೊಂಡು ರಿಲೀಸ್‌ಗೆ ಸಿದ್ದವಾಗಿದ್ದೆವು ಎಂದರು. ಚಿತ್ರಕ್ಕೆ ಸೆನ್ಸಾರ್‌ನಿಂದ ಉತ್ತಮ ಪ್ರಶಂಸೆಯೊಂದಿಗೆ ಯು/ಎ ಪ್ರಮಾಣಪತ್ರ ಸಿಕ್ಕಿದೆ. ಇದೊಂದು ಲವ್‌ಸ್ಟೋರಿನೇ ಆದ್ರು ಕ್ರೈಮ್ ಬ್ಯಾಕ್‌ರೌಂಡ್‌ನಲ್ಲಿ ತೋರಿಸಲಾಗಿದೆ. ಚಿತ್ರದಲ್ಲಿ ಕ್ರೈಮ್ ಕೂಡ ಎಮೋಷನಲ್ ಆಗಿರುತ್ತೆ, ಗೋಕರ್ಣದಲ್ಲಿ ನಡೆಯುವ ಕ್ರೈಂ ಲವ್‌ಸ್ಟೋರಿ ಇದಾಗಿದೆ. ಅಭಿಲಾಶ್ ಕಲ್ಲತ್ತಿ ಅವರ ಕ್ಯಾಮೆರಾ ವರ್ಕ್, ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಚಿತ್ರದ ಉಳಿದ ಪಾತ್ರಗಳಲ್ಲಿ ಗೋಪಾಲಕೃಷ್ಣ ದೇಶಪಾಂಡೆ, ಡ್ಯಾನಿ ಕುಟ್ಟಪ್ಪ ಕಾವ್ಯಶಾಸ್ತ್ರಿ ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ.



'ಲವ್ 360' ಚಿತ್ರದಲ್ಲಿ ಪ್ರವೀಣ್ ಮತ್ತು ರಚನಾ ಇಂದರ್



ಹಾಟ್‌ಲುಕ್‌ನಲ್ಲಿ ಮೀರಾ ಜಾಸ್ಮಿನ್

# ಓಮಿನಿ

## ಸಿನಿಮಾದಲ್ಲೊಂದು ಸಿನಿಮಾ !

ಓಮಿನಿ ಎಲ್ಲರಿಗೂ ಗೊತ್ತಿರುವ ಹಾಗೆ ಕಾರಿನ ಹೆಸರು. ಲ್ಯಾಟಿನ್ ಭಾಷೆಯಲ್ಲಿ ಅದಕ್ಕೆ ಎಲ್ಲಾ ಎಂಬ ಅರ್ಥವಿದೆ. ಇದೇ ಹೆಸರಿನಲ್ಲಿ ಮಂಜು ಹೆದ್ದೂರ್ ಚಿತ್ರವೊಂದನ್ನು ನಿರ್ದೇಶಿಸಿದ್ದಾರೆ. ಸಿನಿಮಾದಲ್ಲೊಂದು ಸಿನಿಮಾ ಕಾನ್ಸೆಪ್ಟ್ ಮೇಲೆ ತಯಾರಾಗಿರುವ ಈ ಚಿತ್ರದ ಟ್ರೇಲರ್ ಬಿಡುಗಡೆ ಇತ್ತೀಚೆಗೆ ನೆರವೇರಿತು, ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಗೃಹಸಚಿವ ಆರಗ ಜ್ಞಾನೇಂದ್ರ ಮಾತನಾಡಿ, ತೀರ್ಥಹಳ್ಳಿ ಸುಂದರವಾದ ಊರು. ಅಲ್ಲಿನ ಗಾಳಿ, ನೀರಿಗೆ ಅದ್ಭುತ ಶಕ್ತಿಯಿದೆ. ರಾಷ್ಟ್ರಕವಿ ಕುವೆಂಪು, ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪ ಸೇರಿದಂತೆ ಅನೇಕ ಗಣ್ಯರು ನಮ್ಮ ತಾಲ್ಲೂಕಿನವರೆಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಓಮಿನಿ ಚಿತ್ರದ ನಿರ್ದೇಶಕರೂ ಸಹ ನಮ್ಮೂರಿನವರು ಎಂದು ಹೇಳಿದರು.

ನಿರ್ದೇಶಕ ಮಂಜು, ಮಾತನಾಡುತ್ತ ಓಮಿನಿ ಕಾರ್ ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಚಿತ್ರದ ನಿರ್ದೇಶನದೊಂದಿಗೆ ಹಲವಾರು ಜವಾಬ್ದಾರಿಗಳನ್ನು ನಿಭಾಯಿಸಿದ್ದೇನೆ. ಜೊತೆಗೆ ಪ್ರಮುಖ ಪಾತ್ರದಲ್ಲೂ ಸಹ ಕಾಣಿಸಿಕೊಂಡಿದ್ದೇನೆ ಎಂದರು. ನಾಯಕ ಸಿದ್ದು ಮೂಲಿಮನಿ ಮಾತನಾಡಿ ಒಂದು ವಿಭಿನ್ನ ಕಥೆ ಈ ಚಿತ್ರದಲ್ಲಿದ್ದು, ಸಿನಿಮಾದಲ್ಲೊಂದು ಸಿನಿಮಾಕಥೆ ಜೊತೆಗೆ ಲವ್, ಸಸ್ಪೆನ್ಸ್, ಹಾರರ್ ಹೀಗೆ ಎಲ್ಲಾ ರೀತಿಯ ಅಂಶಗಳು ಚಿತ್ರದಲ್ಲಿವೆ. ತೀರ್ಥಹಳ್ಳಿಯ ಸುಂದರ ಪರಿಸರದಲ್ಲೇ ಹೆಚ್ಚಿನ ಭಾಗ ಅಲ್ಲದೆ ದಾವಣಗೆರೆಯ ಗ್ಲಾಸ್‌ಹೌಸ್‌ನಲ್ಲಿ ಚಿತ್ರದ ಪ್ರಮುಖ ದೃಶ್ಯದ ಚಿತ್ರೀಕರಣ ಮಾಡಿದ್ದೇವೆ, ಆಗಸ್ಟ್ 19ರಂದು ರಾಜ್ಯಾದ್ಯಂತ ಓಮಿನಿ ಬಿಡುಗಡೆಯಾಗುತ್ತಿದೆ ಎಂದರು.

ಬೆಳ್ಳುಡಿ ಫಿಲಂಸ್ ಹಾಗೂ ಎಸ್‌ಆರ್ ಗ್ರೂಪ್ಸ್ ಲಾಂಛನದಲ್ಲಿ ಪ್ರವೀಣ್, ದೇವಿರಹರ್ಷ ಮತ್ತು ಆಶಾ ರಮೇಶ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಅರ್ಜುನ್ ರಾಮು ಅವರ ಸಂಗೀತ ಹಾಗೂ ಎಂ.ಬಿ. ಅಳ್ಳಿಕಟ್ಟಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಸಿದ್ದು ಮೂಲಿಮನಿ, ಪೂಜಾ ಜನಾರ್ದನ್, ಅಶ್ವಿನಿ ಚಂದ್ರಶೇಖರ್, ಭರತ್ ಬೋಪಣ್ಣ, ಮಂಜು ಹೆದ್ದೂರ್, ಆಕಾಂಕ್ಷ ಪಟಮಕ್ಕಿ, ಮೋಹನ್ ಜುನೇಜ, ಪ್ರಕಾಶ್ ತುಮ್ಮಿನಾಡು, ಮನಸ್ವಿತ್ ಮುಂತಾದವರು ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ.






'ಓಮಿನಿ' ಚಿತ್ರದಲ್ಲಿ ಸಿದ್ದು ಮೂಲಿಮನಿ ಮತ್ತು ಅಶ್ವಿನಿ ಚಂದ್ರಶೇಖರ್

# ಸಿನಿಪದಬಂಧ-017

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ______________________

ವಿಳಾಸ ______________________

______________________

ದೂರವಾಣಿ ಸಂಖ್ಯೆ ______________________

**ಎಡದಿಂದ ಬಲಕ್ಕೆ**

1. ಮಾಸ್ತಿಯವರ ಕೃತಿ ಆಧಾರಿತ ಸಿ. ಆರ್. ಸಿಂಹ ನಿರ್ದೇಶನದ ಚಿತ್ರ (5)
3. ವಿಷ್ಣುವರ್ಧನ್-ಮಂಜುಳಾ, ದ್ವಾರಕೀಶ್ ಅಭಿನಯದ 1978ರ ಚಿತ್ರ (5)
6. ಅಹಂ ಪ್ರೇಮಾಸ್ಮಿ ಚಿತ್ರದ ನಾಯಕ ನಟ ಇಲ್ಲಿ ದೀರ್ಘವಾಗಿದ್ದಾನೆ (3)
8. --- ಮೈ ಡಾರ್ಲಿಂಗ್, ಕಮಲ್ ಹಾಸನ್-ಶ್ರೀಪ್ರಿಯ ಜೋಡಿಯ ಚಿತ್ರ (3)
9. ಶ್ರೀನಾಥ್-ಮಂಜುಳಾ ಅಭಿನಯದ 1976ರ ಚಿತ್ರ (3)
12. ಡಾ.ರಾಜ್-ಜಯಂತಿ, ಶ್ರೀನಾಥ್ ಅಭಿನಯದ 1969ರ ಚಿತ್ರ (3)
15. ಹಾಲುಂಡ ತವರು ಚಿತ್ರದ ನಾಯಕಿ (3)
16. ಏಳು ಸುತ್ತಿನ ಕೋಟೆ ಚಿತ್ರದ ನಾಯಕಿ (3)
18. ಅಂಬರೀಶ್ ದ್ವಿಪಾತ್ರಾಭಿನಯದ 1987ರ ಚಿತ್ರ (5)
19. ನಾಗರಹಾವು ಚಿತ್ರದ ಸುಪ್ರಸಿದ್ಧ ಗೀತೆ, ----- ಹನ್ನೆರಡು ವರ್ಷ (5)

**ಮೇಲಿನಿಂದ ಕೆಳಕ್ಕೆ**

1 ಬಿಜಿಎಲ್ ಸ್ವಾಮಿ ಕಾದಂಬರಿಯ ಪುಟ್ಟಣ್ಣ ಕಣಗಾಲ್ ನಿರ್ದೇಶನದ ಚಿತ್ರ (5)
2. ಬಂದೆಯ --- ಬೆಳಕಾಗಿ... ಅವಳ ಹೆಜ್ಜೆ ಚಿತ್ರದ ಗೀತೆ. (ತಲೆಕೆಳಗಾಗಿದೆ) (3)
4. ದೇವರಾಜ್-ಅರ್ಚನಾ ಅಭಿನಯದ 1996ರ ಚಿತ್ರ (3)
5. ಶ್ರೀನಾಥ್-ಅಂಬಿಕಾ-ಮಾಧವಿ ಅಭಿನಯದ 1982ರ ಚಿತ್ರ (5)
7. ಕಾರ್ತಿಕ್ ಸರಗೂರ್ ನಿರ್ದೇಶನದ 2016ರ ಚಿತ್ರ (3)
8. 1991ರ ಚಿತ್ರ, ಮೈಸೂರು --- (3)
10. ಸುಬ್ಬಿ --- ಸುವ್ವಲಾಲಿ, 1980ರ ಚಿತ್ರ (3)
11. ಗಿರೀಶ್ ಕಾಸರವಳ್ಳಿ ನಿರ್ದೇಶನದಲ್ಲಿ ಜಯಮಾಲಾರ 1997ರ ಚಿತ್ರ (5)
12. ಚೆಲುವಿನ --- ಗಣೇಶ್-ಅಮೂಲ್ಯ ಅಭಿನಯದ ಚಿತ್ರ (3)
13. ಉಪೇಂದ್ರ-ರಮ್ಯಾ ಅಭಿನಯದ 2005ರ ಚಿತ್ರ ತಲೆಕೆಳಗಾಗಿದೆ (3)
14. ಡಿ ರಾಜೇಂದ್ರ ಬಾಬು ನಿರ್ದೇಶನದಲ್ಲಿ ರವಿಚಂದ್ರನ್-ಖುಷ್ಬೂ ಚಿತ್ರ (5)
15. ಶಶಾಂಕ್ ನಿರ್ದೇಶನದಲ್ಲಿ ಪ್ರಜ್ವಲ್ ದೇವರಾಜ್-ದೇವಕಿ ಅಭಿನಯದ ಚಿತ್ರ (3)
17. ಶ್ರೀನಾಥ್-ಮಂಜುಳಾ ಅಭಿನಯದ 1980ರ ಚಿತ್ರ (3)



## ಸಿನಿ ಪದಬಂಧ 016ರ ಸರಿ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಚ | ದು | ರಿ | ದ | ಚಿ | ತ್ರ | ಗ | ಳು | | | |
| ದು | | | | ಕ್ಕ | | | | | | ಅ |
| ರಂ | | ಜೇ | | | | ಶಂ | ಕ | ರ್ | ಗು | ರು |
| ಗ | ರು | ಡ | ಧ್ವ | ಜ | | | | | | ಣೋ |
| | | ರ | | ಯಂ | | | ಗೆ | ಜ್ಜೆ | ನಾ | ದ |
| ಮಿಂ | | ಬ | | ತಿ | ಲ | ಕ | | ಹೆ | | ಯ |
| ಚಿ | ತ್ರ | ಲೇ | ಖ | | | ರಿ | | ನ | | |
| ನ | | | | | | ಯ | ಜ | ವಿ | ಕ್ತ | ಭ |
| ಓ | ಹಿ | ಲೇ | ಶ್ವ | ರ | | | | ಹಾ | | ಲೇ |
| ಟ | | | | | | ರೋ | | | | ಜೋ |
| | | | ಬ | ದು | ಕು | ಜ | ಟ | ಕ | ಬಂ | ಡಿ |

ವಿಜೇತರು: ಗೋಪಾಲಕೃಷ್ಣ ಅಡಿಗ
ದೀಪಾ ಜೆರಾಕ್ಸ್, ಭಾನುಕೋಟಿ ಬಡಾವಣೆ,
ಪಿರಿಯಾಪಟ್ಟಣ, ಮೈಸೂರು ಜಿಲ್ಲೆ

# 'ಮಿತ್ರ'ನೊಂದಿಗೆ ವಿಕ್ರಾಂತ್ ರೋಣ ಸುದೀಪ್ ಮಾತು..




ಕನ್ನಡ ಚಿತ್ರರಂಗದ ಬಹುನಿರೀಕ್ಷೆಯ ಮತ್ತೊಂದು ಚಿತ್ರ ವಿಕ್ರಾಂತ್ ರೋಣ. ಇದೇ ತಿಂಗಳ 28ರಂದು ದೇಶಾದ್ಯಂತ ತೆರೆಕಾಣುತ್ತಿರುವ ಈ ಚಿತ್ರದ ವರ್ಲ್ಡ್ ಪ್ರೀಮಿಯರ್ ಶೋ ಬಿಡುಗಡೆಗೂ ಒಂದು ದಿನ ಮುಂಚೆ ಅಂದರೆ ಜು.27ರಂದು ನಡೆಯಲಿದೆ. ಕಿಚ್ಚಾವರ್ಸ್ ಸಂಸ್ಥೆ ಆಯೋಜಿಸಿರುವ ಈ ಪ್ರದರ್ಶನ ದುಬೈನಲ್ಲಿ ನಡೆಯಲಿದೆ. ರಾಜ್ಯದ ಕೆಲ ಕೇಂದ್ರಗಳಲ್ಲಿ ಅದೇ ದಿನ ಮಧ್ಯರಾತ್ರಿಯಿಂದಲೇ ಪ್ರದರ್ಶನ ಆರಂಭವಾಗುವ ಸಾಧ್ಯತೆಯೂ ಇದೆ.

ವಿಕ್ರಾಂತ್ ರೋಣ ಚಿತ್ರ ಕುರಿತಂತೆ 'ಮೈಸೂರು ಮಿತ್ರನೊಂದಿಗೆ ಮಾತನಾಡಿದ ಸುದೀಪ್, ಚಿತ್ರ ಇಷ್ಟು ದೊಡ್ಡಮಟ್ಟದಲ್ಲಿ ಹೊರಬರಲು ನಿರ್ಮಾಪಕ ಜಾಕ್ ಮಂಜು ಅವಿರತ ಪ್ರಯತ್ನವೇ ಕಾರಣ. ಕೋವಿಡ್ ಸಮಯದಲ್ಲಿ ಅವರು ಮಾಡಿದ ಸಾಹಸ ದೊಡ್ಡದು.

ಒಬ್ಬ ಕನ್ನಡಿಗನಾಗಿ ಇಂಥ ಒಂದು ದೊಡ್ಡ ಚಿತ್ರದ ಬಗ್ಗೆ ಯುಎಸ್‌ಎನಲ್ಲಿ ಪ್ರಚಾರ ಮಾಡುವ ಆಸೆಯಿದೆ. ಆದರೆ ಸಮಯವಿಲ್ಲ, ಹಿಂದಿ ಭಾಷೆಯ ಚಿತ್ರ ಎಲ್ಲಾ ರಾಜ್ಯಗಳಲ್ಲೂ ಪ್ರದರ್ಶನವಾಗುತ್ತದೆ. ಭೋಜ್ ಪುರಿ ಬೆಂಗಾಳಿಯಂಥ ಕೆಲ ರಾಜ್ಯಗಳಲ್ಲಿ ಹಿಂದಿ ಚಿತ್ರಗಳನ್ನೇ ಹೆಚ್ಚಿನ ಜನ ವೀಕ್ಷಿಸುತ್ತಾರೆ. ಉಳಿದಂತೆ ಆಯಾ ರಾಜ್ಯಗಳಲ್ಲಿ ತೆಲುಗು, ತಮಿಳು, ಮಲಯಾಳಂ ಭಾಷೆಯಲ್ಲೇ ತೆರೆ ಕಾಣಲಿದೆ. ಸುಮಾರು 4-5 ವರ್ಷ ಈ ಸಿನಿಮಾದಲ್ಲಿ ಕಳೆದಿದ್ದೇನೆ. ನಿರ್ಮಾಪಕ ಮಂಜು ಕಂತೆ ಕಂತೆ ಹಣ ಇಟ್ಟುಕೊಂಡವರಲ್ಲ. ಆದರೆ ಒಬ್ಬ ನಿರ್ಮಾಪಕನಾಗಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ನನ್ನ ಫ್ಯಾನ್ಸ್ ಮೇಲೆ ನಂಬಿಕೆಯಿದೆ ಎಂದರು. ನಂತರ ಪೈರಸಿ ತಡೆಯುವ ಕುರಿತು ಮಾತನಾಡುತ್ತ ಥಿಯೇಟರ್‌ನಲ್ಲಿ ಸಿಗುವ ಅನುಭವ ಮೊಬೈಲ್‌ನಲ್ಲಿ ಸಿಗೋಲ್ಲ, ಅದರಲ್ಲೂ ವಿಕ್ರಾಂತ್ ರೋಣ ತ್ರೀಡಿ ಚಿತ್ರದ ಥಿಯೇಟರ್ ಎಕ್ಸ್‌ಪೀರಿಯನ್ಸ್ ಬೇರೇನೇ ಆಗಿರುತ್ತದೆ. ಮೊಬೈಲ್‌ನಲ್ಲಿ ನೋಡಿದರೂ ಅವರು ಥೇಟರಿಗೆ ಬರಲೇಬೇಕು ಎಂದು ಹೇಳಿದರು.

# ರಕ್ಕಂ ಇಲ್ಲಿ ಹಣವೇ ಎಲ್ಲಾ..!



ಕೆಲ ವರ್ಷಗಳ ಹಿಂದೆ ಪ್ರಧಾನಿ ನರೇಂದ್ರ ಮೋದಿಯವರು ಡೀಮಾನಿಟೈಸೇಷನ್ ಮಾಡಿದಾಗ ದೇಶದ ಆರ್ಥಿಕ ವ್ಯವಸ್ಥೆಯೇ ಅಲ್ಲೋಲ ಕಲ್ಲೋಲವಾಯಿತು. ನ್ಯಾಯವಾಗಿ ದುಡಿದವರು, ಪ್ರತಿ ವರ್ಷ ತೆರಿಗೆ ಪಾವತಿಸುತ್ತಿರುವವರು ನೆಮ್ಮದಿಯಾಗಿದ್ದರು. ಆದರೆ ತೆರಿಗೆ ವಂಚಕರು ಹಾಗೂ ಅನ್ಯಾಯದಿಂದ ಹಣ ಗಳಿಸಿದವರು ಸಂಕಷ್ಟಕ್ಕೀಡಾದರು. ಈ ಕಂಟೆಂಟ್ ಮೇಲೆ ಈಗಾಗಲೇ ಹಲವಾರು ಚಲನಚಿತ್ರಗಳು ಬಂದು ಹೋಗಿವೆ. ಅದೆಲ್ಲಕ್ಕಿಂತ ವಿಭಿನ್ನವಾದ ಮತ್ತೊಂದು ಕಥೆಯನ್ನು ತೆರೆ ಮೇಲೆ ತರಲು ಹೊರಟಿದ್ದಾರೆ ನಿರ್ದೇಶಕ ಕೆ. ಸೆಂದಿಲ್. ಆ ಚಿತ್ರದ ಹೆಸರು ರಕ್ಕಂ. ಈ 'ರಕ್ಕಂ' ಎಂದರೇನು ಎಂದು ಬಹಳಷ್ಟು ಜನರಿಗೆ ಗೊತ್ತಿಲ್ಲ, 'ಹಣದ ಖಜಾನೆ' ಅಥವಾ 'ಬಂಚ್ ಆಫ್ ಮನಿ'.

ಒಂದು ಸಸ್ಪೆನ್ಸ್ ಹಾಗೂ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರ ಇದೇ ತಿಂಗಳ 29ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದ್ದು, ಅದರಂಗವಾಗಿ ಚಿತ್ರದ ಹಾಡು ಹಾಗೂ ಟ್ರೈಲರ್ ಪ್ರದರ್ಶನ ಕಾರ್ಯಕ್ರಮ ಕಳೆದ ವಾರ ನಡೆಯಿತು. ರಣಧೀರ್‌ಗೌಡ ಈ ಚಿತ್ರದ ನಾಯಕನಾಗಿ ನಟಿಸಿದ್ದು, ಅಮೃತಾ ನಾಯರ್ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಶ್ರೀವತ್ಸ ಅವರ ಸಂಗೀತ ಸಂಯೋಜನೆ ಹಾಗೂ ಸ್ಯಾಮ್ ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ. ಶ್ರೀಮತಿ ಸ್ನೇಹಲತಾ ಕೆ.ಎನ್. ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಚಿತ್ರದ ನಿರ್ದೇಶಕ ಸೆಂದಿಲ್ ಮೋದಿಯವರು ಕೊಟ್ಟಂಥ ಒಂದು ಬ್ರೇಕಿಂಗ್ ನ್ಯೂಸ್ ನನ್ನ ಚಿತ್ರದ ಕಥೆಗೆ ಪ್ರೇರಣೆಯಾಯಿತು. ಡೀಮಾನಿಟೈಸೇಷನ್ ಆದ ನಂತರ ಅದು ಒಬ್ಬ ಕಾಮನ್‌ಮ್ಯಾನ್ ಮೇಲೆ ಹೇಗೆ ಪರಿಣಾಮ ಬೀರಿತು, ಈ ಪರಿಸ್ಥಿತಿಯಲ್ಲಿ ಸಿಕ್ಕಂಥ ನಾಯಕನ ಸ್ಥಿತಿ ಹೇಗೆಲ್ಲ ಬದಲಾಗುತ್ತಾ ಹೋಯಿತು ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇನೆ. ಕೋವಿಡ್‌ಗೂ ಮುನ್ನವೇ ನಮ್ಮ ಚಿತ್ರ ರೆಡಿಯಾಗಿತ್ತು. ಬೆಂಗಳೂರಲ್ಲಿ ಶೇ.40 ರಷ್ಟು ಚಿತ್ರೀಕರಣವಾದರೆ, ಉಳಿದಂತೆ ಶಿವಮೊಗ್ಗ, ಹಾಸನ, ಕೊಡಚಾದ್ರಿಯಲ್ಲಿ ಶೂಟಿಂಗ್ ನಡೆಸಿದ್ದೇವೆ ಕಿರುತೆರೆಯ ಕೋಟ್ಯಾಧಿಪತಿ ಸೇರಿದಂತೆ ಕಾಮಿಡಿ ಕಿಲಾಡಿಗಳು, ಡ್ರಾಮಾ ಜೂನಿಯರ್ಸ್ ಕಾರ್ಯಕ್ರಮಗಳಲ್ಲಿ ಬರಹಗಾರನಾಗಿಯೂ ನಾನು ಕೆಲಸ ಮಾಡಿದ್ದು, ಎನ್‌ಎಸ್‌ಡಿ, ಆದರ್ಶ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದು ಈ ಚಿತ್ರದ ಮೂಲಕ ನಿರ್ದೇಶಕ ನಾಗಿದ್ದೇನೆ ಎಂದರು. ಚಿತ್ರದಲ್ಲಿ ಅಭಿನಯಿಸಿದ ಹಿರಿಯ ಕಲಾವಿದ ಬೆನಕ ನಂಜಪ್ಪ, ವಿನಯ ಪಾಂಡವಪುರ ಮುಂತಾದವರು ತಮ್ಮ ಅನುಭವ ಹಂಚಿಕೊಂಡರು.

# ಕೆ.ಆರ್.ಪೇಟೆ ತಾಲೂಕು ಅಭಿವೃದ್ಧಿಗೆ 1700 ಕೋಟಿ ಅನುದಾನ

## ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮುಖ್ಯಮಂತ್ರಿ ಬಸರಾಜ ಬೊಮ್ಮಾಯಿ ಮಾಹಿತಿ



ಕೆ.ಆರ್.ಪೇಟೆ, ಜು.21– ಕೆ.ಆರ್.ಪೇಟೆಯನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಿ ರಾಜ್ಯಕ್ಕೆ ಮಾದರಿ ತಾಲೂಕನ್ನಾಗಿಸುವ ಸಂಕಲ್ಪ ಮಾಡಲಾಗಿದ್ದು, ಇದಕ್ಕಾಗಿ 1700ಕೋಟಿ ಅನುದಾನ ನೀಡಲಾಗಿದೆ. ಇನ್ನೂ ಅಗತ್ಯವಿರುವ ಅನುದಾನವನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಪಟ್ಟಣದ ಟಿ.ಬಿ.ಬಡಾವಣೆಯ ಮುರಸ್ಥಾ ಕಚೇರಿ ಪಕ್ಕದ ಮೈದಾನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಮತ್ತು ಸರ್ಕಾರಿ ಸೌಲಭ್ಯಗಳ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕಿನಲ್ಲಿ 2 ಏತ ನೀರಾವರಿ ಯೋಜನೆಗೆ 25 ಕೋಟಿ ರೂ., 11 ಕೆರೆ ತುಂಬಿಸುವ ಯೋಜನೆ, ಪ್ರತಿ ಮನೆಗೆ ನೀರು ತಲುಪಿಸುವ ಜಲಜೀವನ ಮಿಷನ್ ಯೋಜನೆಯಡಿ ಕೆ.ಆರ್.ಪೇಟೆಗೆ 430 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ ನದಿಗಳ ಅಚ್ಚುಕಟ್ಟು ಅಭಿವೃದ್ಧಿಗೊಳಿಸುವ ಜೊತೆಗೆ ತಾಲೂಕಿನಲ್ಲಿ ಹೇಮಗಿರಿ, ಮಂದಗೆರೆ ಸೇರಿದಂತೆ ಮಹಾರಾಜರ ಕಾಲದ ಹಳೆಯ ಅಣೆಕಟ್ಟೆಗಳ 11 ನಾಲೆಗಳ ಆಧುನೀಕರಣಗೊಳಿಸಲಾಗುವುದು ಎಂದರು.

ಹೇಮಾವತಿ ಎಡದಂಡೆ ಕಾಲುವೆಯ ಕೆಲಸ ಕಾರ್ಯಗಳಿಗೆ ಅನುದಾನ ನೀಡಿ, ಪೂರ್ಣಗೊಳಿಸಲಾಗುವುದು. ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ನಾಲೆಯ ಮದ್ದೂರ್ ಬ್ರಾಂಚ್, ಸಾಹುಕಾರ್ ಬ್ರಾಂಚ್ ಚಾನಲ್‌ಗಳಿಗೆ ನೀರು ತಲುಪಿಸಲಾಗುವುದು. ಆಗಸ್ಟ್‌ನಲ್ಲಿ ಮೈಶುಗರ್ ಕಾರ್ಖಾನೆ ಪ್ರಾರಂಭಿಸಿ, ಮಂಡ್ಯದ ಕಬ್ಬನ್ನು ಅರೆಸಲಾಗುವುದು. ಕೆ.ಆರ್.ಪೇಟೆಗೆ ಪಿಪಿಪಿ ಮಾದರಿಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ಯೋಜನೆ ರೂಪಿಸಲಾಗುವುದು ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದರು.

**40 ಸಾವಿರ ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು:** ಮುಂದಿನ ತಿಂಗಳಿನಿಂದ ಸುಮಾರು 40 ಸಾವಿರ ಸ್ತ್ರೀ ಶಕ್ತಿ ಸಂಘಗಳಿಗೆ ತಲಾ 1.50 ಲಕ್ಷ ಆರ್ಥಿಕ ನೆರವು ನೀಡಲಾಗುವುದು. ಅದಕ್ಕೆ ಪೂರಕವಾಗಿ ಬ್ಯಾಂಕ್ ವ್ಯವಸ್ಥೆ, ಪ್ರಾಜೆಕ್ಟ್, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ತಿಳಿಸಿದರು.

ದೇಶದ ತಲಾದಾಯದಲ್ಲಿ ಕರ್ನಾಟಕ 4ನೇ ಸ್ಥಾನದಲ್ಲಿದೆ. ಈ ಪೈಕಿ ಶೇ. 30ರಷ್ಟು ಜನ ರಾಜ್ಯದ ಆದಾಯಕ್ಕೆ ಕೊಡುಗೆ ನೀಡುತ್ತಿದ್ದಾರೆ. ಇನ್ನುಳಿದ ಶೇ.70ರಷ್ಟು ಜೀವನೋಪಾಯಕ್ಕಾಗಿ ದುಡಿಯುತ್ತಿದ್ದಾರೆ. ಈ ದುಡಿಯುವ ವರ್ಗ ರಾಜ್ಯದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮಹಿಳಾ ಸಂಘದ ಸದಸ್ಯರನ್ನು ಸೇರಿಸಲು ಯೋಜನೆ ರೂಪಿಸಲಾಗುವುದು ಎಂದು ಸಿಎಂ ತಿಳಿಸಿದರು.

**ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ:** ನಾನು ಮುಖ್ಯಮಂತ್ರಿಯಾದ ಎರಡೇ ದಿನಕ್ಕೆ ರೈತ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ವಿದ್ಯಾನಿಧಿ ಯೋಜನೆಗೆ ಚಾಲನೆ ನೀಡಿದ್ದೇನೆ. ರೈತರ ಮಕ್ಕಳು ವಿದ್ಯಾವಂತರಾಗಿ ಆರ್ಥಿಕವಾಗಿ ಸಬಲರಾಗಬೇಕೆಂಬ ಉದ್ದೇಶದಿಂದ ಈ ಯೋಜನೆ ಜಾರಿಗೊಳಿಸಲಾಗಿದೆ. ಈವರೆಗೆ ಸುಮಾರು 14 ಲಕ್ಷ ಮಕ್ಕಳು ಇದರ ಸದ್ಬಳಕೆ ಮಾಡಿಕೊಂಡಿದ್ದಾರೆ ಎಂದರು.

ಈ ವೇಳೆ ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್ ಅವರು ಬರೆದಿರುವ 'ಕೃಷ್ಣರಾಜಪೇಟೆ ತಾಲೂಕು ಮಹಾ ದರ್ಶನ' ಕೃತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಅಬಕಾರಿ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಭಾರಿ ಮತ್ತು ಮಧ್ಯಮ ನೀರಾವರಿ ಸಚಿವ ಗೋವಿಂದ ಎಂ.ಕಾರಜೋಳ, ರೇಷ್ಮೆ–ಯುವಜನ ಸಬಲೀಕರಣ ಕ್ರೀಡಾ ಸಚಿವ ಡಾ. ಕೆ.ಸಿ.ನಾರಾಯಣಗೌಡ, ಕಂದಾಯ ಸಚಿವ ಆರ್.ಅಶೋಕ್, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಶಾಸಕ ಪ್ರೀತಮ್ ಜೆಗೌಡ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಜಿಲ್ಲಾಧಿಕಾರಿ ಎಸ್. ಅಶ್ವತಿ, ಎಡಿಸಿ ಶೈಲಜಾ, ಪಾಂಡವಪುರ ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ, ಜಿಪಂ ಸಿಇಓ ಶಾಂತ ಎಂ.ಹುಲ್ಮನಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಧನಂಜಯ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ತಹಸೀಲ್ದಾರ್ ಎಂ.ವಿ.ರೂಪಾ, ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಪುರಸಭಾ ಅಧ್ಯಕ್ಷೆ ಮಹಾದೇವಿ ನಂಜುಂಡ, ಉಪಾಧ್ಯಕ್ಷೆ ಗಾಯಿತ್ರಿ ಸುಬ್ರಹ್ಮಣ್ಯ, ಮುಖ್ಯಾಧಿಕಾರಿ ಕುಮಾರ್, ತಾಪಂ ಇಓ ಸತೀಶ್, ಮುಖಂಡರಾದ ಎಸ್.ಅಂಬರೀಶ್, ಕೆ.ಎಸ್. ಪ್ರಭಾಕರ್, ಕೆ.ಜಿ.ತಮ್ಮಣ್ಣ, ಕೆಎಂಎಫ್ ಮಾಜಿ ನಿರ್ದೇಶಕ ಅಶೋಕ್, ಡಾ. ಇಂದ್ರೇಶ್, ಕಾಡೇನಹಳ್ಳಿ ನಾಗಣ್ಣಗೌಡ, ಸಿದ್ದರಾಜು, ಸಚಿವರ ಆಪ್ತ ಕಾರ್ಯದರ್ಶಿ ಪ್ರಭಾಕರ್ ಉಪಸ್ಥಿತರಿದ್ದರು.

## ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ: ಬಿಎಸ್‌ವೈ

ಕೆ.ಆರ್.ಪೇಟೆ ಜು.21– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 140 ಸ್ಥಾನಗಳನ್ನು ಪಡೆಯುವ ಮೂಲಕ ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದು ಖಚಿತ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನನ್ನ ಹುಟ್ಟೂರಿನಲ್ಲಿ ಬಿಜೆಪಿ ಗೆಲುವು ದೊರೆಯಲಿಲ್ಲ ಎಂಬ ನನ್ನ ಕೊರಗನ್ನು ಉಪ ಚುನಾವಣೆಯಲ್ಲಿ ದೂರ ಮಾಡಿದ್ದೀರಿ. ಅದೇ ರೀತಿ ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ನಾರಾಯಣಗೌಡರನ್ನು ಮತ್ತೆ ಅಧಿಕ ಮತಗಳ ಅಂತರದಿಂದ ಗೆಲ್ಲಿಸಬೇಕು. ಈ ಮೂಲಕ ಹೊಸ ಇತಿಹಾಸ ನಿರ್ಮಿಸಬೇಕು ಎಂದು ತಿಳಿಸಿದರು.

ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಯಾವುದೇ ಕಪ್ಪು ಚುಕ್ಕೆ ಇಲ್ಲದಂತೆ ಉತ್ತಮ ಆಡಳಿತ ನಡೆಸುತ್ತಿದ್ದಾರೆ. ಅದೇ ರೀತಿ ರಾಜ್ಯದಲ್ಲಿ ಬೊಮ್ಮಾಯಿ ಅವರು ಉತ್ತಮ ಆಡಳಿತ ನಡೆಸುತ್ತಿದ್ದಾರೆ. ರೈತರು, ಬಡವರ ಏಳಿಗೆಗೆ ಸಾಕಷ್ಟು ಯೋಜನೆ ಜಾರಿಗೆ ತಂದಿದ್ದಾರೆ. 60–65ವರ್ಷ ತುಂಬಿದ ವಯೋವೃದ್ಧರಿಗೆ ಮನೆ ಮನೆಗೆ ಪಿಂಚಣಿ ಆದೇಶ ಪತ್ರಗಳನ್ನು ತಲುಪಿಸುವ ಯೋಜನೆಯನ್ನು ಜಾರಿಗೊಳಿಸಿದ್ದಾರೆ ಎಂದು ತಿಳಿಸಿದರು.

ಕಂದಾಯ ಇಲಾಖೆಯಲ್ಲಿ ಭಾರೀ ಸುಧಾರಣೆ ತಂದು ರೈತರಿಗೆ ಅನುಕೂಲ ಮಾಡಿಕೊಡಲಾಗಿದೆ. ಈ ಎಲ್ಲಾ ಯೋಜನೆಗಳ ಪ್ರತಿಫಲವಾಗಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತವಾಗಿದೆ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಇಬ್ಬರು ಆಕಾಂಕ್ಷಿಗಳ ನಡುವೆ ಕೂಸು ಹುಟ್ಟುವ ಮುಂಚೆಯೇ ಕುಲಾವಿ ಹೊಲಿಸುವ ಕೆಲಸ ನಡೆಯುತ್ತಿದೆ. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಕನಸಿನ ಮಾತು ಎಂದು ಬಿ.ಎಸ್.ಯಡಿಯೂರಪ್ಪ ಹೇಳಿದರು.

## ಸಾಲಬಾಧೆ: ರೈತ ಆತ್ಮಹತ್ಯೆ

ಮದ್ದೂರು, ಜು.21– ಸಾಲಬಾಧೆ ತಾಳಲಾರದೆ ರೈತನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕೊಪ್ಪ ಹೋಬಳಿ ಚಿಕ್ಕೋನಹಳ್ಳಿ ಗ್ರಾಮದಲ್ಲಿ ಗುರುವಾರ ಬೆಳಗ್ಗೆ ನಡೆದಿದೆ.

ಗ್ರಾಮದ ಪುಟ್ಟಸ್ವಾಮಿ(61) ಆತ್ಮಹತ್ಯೆ ಮಾಡಿಕೊಂಡ ರೈತ. ಇವರಿಗೆ ಒಂದು ಎಕರೆ ಸ್ವಂತ ಜಮೀನಿದ್ದು, 2 ಎಕರೆ ಜಮೀನನ್ನು ಬೇರೆಯವರಿಂದ ಪಾಲಿಗೆ ತೆಗೆದುಕೊಂಡು ಭತ್ತ, ಕಬ್ಬಿನ ಬೆಳೆಗಳನ್ನು ಬೆಳೆದಿದ್ದರು. ಬೆಳೆ ಬೆಳೆಯಲು ಕೊಪ್ಪ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 25 ಸಾವಿರ, ಎಸ್‌ಬಿಐ ಬ್ಯಾಂಕ್‌ನಲ್ಲಿ ಚಿನ್ನಾಭರಣ ಅಡಮಾನವಿಟ್ಟು 3.50 ಲಕ್ಷ ರೂ. ಹಾಗೂ ಕೈ ಸಾಲ ಅಂದಾಜು 3 ಲಕ್ಷ ಮಾಡಿದ್ದರು. ಬೆಳೆಗಳು ಸರಿಯಾಗಿ ಫಸಲು ಬಾರದೆ ನಷ್ಟವಾಗಿತು. ಸಾಲಗಾರರ ಕಾಟ ತಾಳಲಾರದೆ ಜಿಗುಪ್ಸೆಗೊಂಡು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತ ರೈತನಿಗೆ ಪತ್ನಿ, ಓರ್ವ ಪುತ್ರ, ಪುತ್ರಿ ಇದ್ದಾರೆ. ಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೆಆರ್‌ಎಸ್ ಗ್ರಾಮಸ್ಥರಿಗೆ ಹಕ್ಕು ಪತ್ರ ವಿತರಣೆ



ಶ್ರೀರಂಗಪಟ್ಟಣ, ಜು.21– ತಾಲೂಕಿನ ಕೃಷ್ಣರಾಜಸಾಗರ ಗ್ರಾಮದಲ್ಲಿ ಜಿಲ್ಲಾ ಹಾಗೂ ತಾಲೂಕು ಆಡಳಿತದಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸುಮಾರು 1800ಕ್ಕೂ ಹೆಚ್ಚು ಫಲಾನುಭವಿಗಳಿಗೆ ಹಕ್ಕು ಪತ್ರವನ್ನು ಕಂದಾಯ ಸಚಿವ ಆರ್.ಅಶೋಕ್ ವಿತರಿಸಿದರು.

ಬಳಿಕ ಮಾತನಾಡಿದ ಅವರು, 1974ರಿಂದ ಯಾವುದೇ ದಾಖಲೆಯಿಲ್ಲದೆ ವಾಸವಾಗಿದ್ದ ಕೆಆರ್‌ಎಸ್ ಗ್ರಾಮಸ್ಥರು ಇಂದಿನಿಂದ ಅಧಿಕೃತವಾಗಿ ಗ್ರಾಮದ ಸದಸ್ಯರಾಗಿದ್ದು, ಸ್ವತ್ತಿನ ಮಾಲೀಕರಾಗಿದ್ದೀರಿ ಎಂದರು.

ನಾನು ಕಂದಾಯ ಸಚಿವರಾದ ನಂತರ ರಾಜ್ಯದ ಜನವಸತಿ ಪ್ರದೇಶಗಳಲ್ಲಿ ಕುರುಬರ ಹಟ್ಟಿ, ಲಂಬಾಣಿ ತಾಂಡ್ಯ ಸೇರಿದಂತೆ 1,132 ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡಿ ಅವರಿಗೆ ಹಕ್ಕು ಪತ್ರ ವಿತರಿಸಿದ್ದೇನೆ. ಇದರಿಂದ ಅವರಿಗೆ ಸರ್ಕಾರದ ಯೋಜನೆಗಳು ಸುಲಭವಾಗಿ ತಲುಪುತ್ತಿವೆ ಎಂದರು. ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಕೆಆರ್‌ಎಸ್ ಗ್ರಾಮದ ನಿವಾಸಗಳಿಗೆ ಹಕ್ಕು ಪತ್ರ ವಿತರಿಸುವಲ್ಲಿ ಪಕ್ಷ ಭೇದ ಮರೆತು ಎಲ್ಲರೂ ಒಗ್ಗೂಡಿ ಮಹತ್ತರವಾದ ಕೆಲಸಕ್ಕೆ ಮುಂದಾಗಿರುವುದು ಶ್ಲಾಘನೀಯವಾಗಿದೆ ಎಂದರು.

ಇದೇ ವೇಳೆ ತಾಲೂಕಿನ ಗಡಿ ಭಾಗದಲ್ಲಿರುವ ಮೊಗರಳ್ಳಿ ಮಂಟಿ ಗ್ರಾಮದಲ್ಲಿ ಈ ಹಿಂದೆ 211 ನಿವೇಶಗಳನ್ನು ಹಂಚಿ ಹಕ್ಕು ಪತ್ರ ನೀಡಲಾಗಿತ್ತು. ಆದರೆ, ಪ್ರಸ್ತುತ ಅಲ್ಲಿ ನಿವೇಶನ ನಿರ್ಮಿಸಿಕೊಂಡು ವಾಸಿಸುತ್ತಿರುವವರು ಅತಂತ್ರ ಪರಿಸ್ಥಿತಿಯಲ್ಲಿದ್ದಾರೆ. ಕೂಡಲೇ ಅವರ ಸಮಸ್ಯೆಗಳನ್ನು ನಿವಾರಿಸುವಂತೆ ಕಂದಾಯ ಸಚಿವರಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ಮನವಿ ಮಾಡಿದರು. ಶಾಸಕರ ಮನವಿಗೆ ಸ್ಪಂದಿಸಿದ ಸಚಿವರು, ಸಂಬಂಧಪಟ್ಟ ದಾಖಲೆಗಳನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಗ್ರಾಪಂ ಅಧ್ಯಕ್ಷ ನರಸಿಂಹ, ಉಪಾಧ್ಯಕ್ಷೆ ಶೃತಿ, ಮೈಸೂರು ವಿಭಾಗ ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಾಮ್‌ಪ್ರಸಾದ್ ಮನೋಹರ್, ಜಿಲ್ಲಾಧಿಕಾರಿ ಎಸ್.ಅಶ್ವತಿ, ಸಿಇಓ ಶಾಂತ ಹುಲ್ಮನಿ, ಎಸಿ ಶಿವಾನಂದ ಮೂರ್ತಿ, ತಹಸೀಲ್ದಾರ್ ಶ್ವೇತಾ ಎನ್.ರವೀಂದ್ರ, ತಾಪಂ ಇಓ ಬಿಂದು ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

## ಕರಾಟೆ ಯೋಜನೆ ಅನುಷ್ಠಾನಕ್ಕೆ 18 ಕೋಟಿ ರೂ. ವೆಚ್ಚ: ಸಚಿವ ಕೋಟ ಶ್ರೀನಿವಾಸ ಪೂಜಾರಿ



ಶೆಟ್ಟಿನಾಯಕನ ಕೊಪ್ಪಲು ಚೆನ್ನಮ್ಮ ವಸತಿ ಶಾಲೆ ವಿದ್ಯಾರ್ಥಿನಿಯರ ಕರಾಟೆ ಕಲೆ ಅಭ್ಯಾಸ.

ಕೆಆರ್.ಪೇಟೆ, ಜು.21– ರಾಜ್ಯ ವಸತಿ ಶಾಲೆಗಳ ಹೆಣ್ಣುಮಕ್ಕಳ ಆತ್ಮರಕ್ಷಣೆಗಾಗಿ ರೂಪಿಸಿರುವ ಓಬವ್ವ ಆತ್ಮರಕ್ಷಣಾ ಕಲೆ 'ಕರಾಟೆ' ಯೋಜನೆಯಡಿ ಕರಾಟೆ ಯೋಜನೆ ಅನುಷ್ಠಾನಕ್ಕಾಗಿ 18 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುತ್ತಿದೆ ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ತಾಲೂಕಿನ ಶೆಟ್ಟಿನಾಯಕನ ಕೊಪ್ಪಲು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಗುರುವಾರ ಭೇಟಿ ನೀಡಿ ಹೆಣ್ಣು ಮಕ್ಕಳ ಕರಾಟೆ ಕೌಶಲ್ಯವನ್ನು ವೀಕ್ಷಿಸಿದ ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಹೆಚ್ಚುತ್ತಿದ್ದು, ಅವರಿಗೆ ಆತ್ಮರಕ್ಷಣೆ ಕಲೆ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಓಬವ್ವ ಆತ್ಮರಕ್ಷಣಾ ಕಲೆ ಕರಾಟೆ ಯೋಜನೆಯನ್ನು ರಾಜ್ಯದ ಎಲ್ಲಾ ವಸತಿ ಶಾಲೆಗಳಲ್ಲಿ ಆರಂಭಿಸಿದ್ದು, ಸುಮಾರು ಒಂದು ಸಾವಿರ ಕರಾಟೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಮಕ್ಕಳ ಕರಾಟೆ ಕಲೆ ಹಾಗೂ ಸಮವಸ್ತ್ರಕ್ಕಾಗಿ 18 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುತ್ತಿದೆ ಎಂದರು. ಕರಾಟೆ ಕಲೆಯನ್ನು ಶ್ರದ್ಧೆಯಿಂದ ಕಲಿತರೆ ಬ್ಲಾಕ್‌ಬೆಲ್ಟ್ ಪಡೆಯಬಹುದು. ಬ್ಲಾಕ್ ಬೆಲ್ಟ್ ಕಲಿತ ಹೆಣ್ಣು ಮಕ್ಕಳು ಎಂಥ ಕಠಿಣ ಸಂದರ್ಭವನ್ನೂ ಎದುರಿಸಬಲ್ಲರು ಎಂದರು.

ಬಡವರು, ಆರ್ಥಿಕವಾಗಿ ಹಿಂದುಳಿದವರು, ಅಲೆಮಾರಿಗಳ ಮಕ್ಕಳೇ ವಿಶೇಷವಾಗಿ ಈ ವಸತಿ ಶಾಲೆಗಳಿಗೆ ದಾಖಲಾಗುತ್ತಿದ್ದು, ಈ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿ ವಸತಿಗಳನ್ನು ಮತ್ತಷ್ಟು ಬಲಪಡಿಸಲು ಕ್ರಮ ವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ರಂಗೇಗೌಡ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಶ್ರೀನಿವಾಸ್, ಮುಖಂಡರು ಉಪಸ್ಥಿತರಿದ್ದರು. ಕಾರ್ಯಕ್ರಮ ನಂತರ ಇಲಾಖೆ ಅಧಿಕಾರಿಗಳೊಂದಿಗೆ ಸಚಿವರು ಸಭೆ ನಡೆಸಿದರು.

## ಸಿಎಂ ನನಗೆ ಪೆಟ್ಟು ಕೊಟ್ಟರೂ ಬೇಸರವಿಲ್ಲ

### ಮುಖ್ಯಮಂತ್ರಿಗಳು ತಮ್ಮ ವಿರುದ್ಧ ಸಿಡಿಮಿಡಿಗೊಂಡಿದ್ದಕ್ಕೆ ಸಂಸದ ಪ್ರತಾಪ್ ಸಿಂಹ ಸಮರ್ಥನೆ



ಮೈಸೂರು, ಜು.21(ಎಂಟಿವೈ)– ನಾನು ಜನರ ಸೇವಕ. ಅಭಿವೃದ್ಧಿ ಕೆಲಸವೊಂದರ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಳಿ ಹೋಗಿದ್ದೆ. ಆ ವೇಳೆ ಮುಖ್ಯಮಂತ್ರಿಗಳು ನನ್ನ ಮೇಲೆ ಕೋಪಿಸಿಕೊಂಡರು. ನನ್ನ ಮೇಲೆ ಕೋಪಿಸಿಕೊಳ್ಳುವುದಕ್ಕೆ ಅವರಿಗೆ ಹಕ್ಕಿದೆ ಎಂದು ಸಂಸದ ಪ್ರತಾಪ್ ಸಿಂಹ ಸಮರ್ಥಿಸಿಕೊಂಡಿದ್ದಾರೆ.

ಬೆಂಗಳೂರಲ್ಲಿ ಮಂಗಳವಾರ ನಡೆದ ದಸರಾ ಉನ್ನತ ಮಟ್ಟದ ಸಭೆಯಲ್ಲಿ ಅಭಿವೃದ್ಧಿ ಕಾರ್ಯ ಸಂಬಂಧ ಪತ್ರ ನೀಡಿ, ಸೆಲ್ಫಿ ತೆಗೆಸಿಕೊಳ್ಳುವುದಾಗಿ ಹೇಳಿದ್ದಕ್ಕೆ ಸಿಡಿಮಿಡಿಗೊಂಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ವಿಶ್ವಾಸವಿಲ್ಲದಿದ್ದರೆ ಲೆಟರ್ ವಾಪಸ್ಸು ತೆಗೆದುಕೊಂಡು ಹೋಗು. ಅತೀ ಬುದ್ಧಿವಂತರೊಂದಿಗೆ ವ್ಯವಹರಿಸುವುದು ಕಷ್ಟ' ಎಂದು ಸಂಸದ ಪ್ರತಾಪ್ ಸಿಂಹ ವಿರುದ್ಧ ಕಿಡಿಕಾರಿದ್ದರು. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ಸಂಸದ ಪ್ರತಾಪಸಿಂಹ ಅವರನ್ನು ಕೆಲವರು ಟೀಕಿಸಿದ್ದರೆ, ಸಿಂಹ ಬೆಂಬಲಿಗರು ಸಿಎಂ ವರ್ತನೆಯನ್ನು ಖಂಡಿಸಿದ್ದರು.

ಮೈಸೂರಲ್ಲಿ ಗುರುವಾರ ಸಂಸದ ಪ್ರತಾಪಸಿಂಹ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ್ದು, ಸಿಎಂ ಮುನಿಸನ್ನು ಸಮರ್ಥಿಸಿಕೊಂಡಿದ್ದಾರೆ. ನಾನು ಜನರ ಸೇವಕ. ಯಾರ ಕಾಲಿಗೆ ಬೇಕಾದರೂ ಬಿದ್ದು, ಕೈ ಮುಗಿದು ಜನರ ಕೆಲಸ ಮಾಡಿ ಕೊಡುತ್ತೇನೆ. ನಾನು ಯಾವುದೋ ವರ್ಗಾವಣೆಗೋ, ಕಂಟ್ರಾಕ್ಟರ್ ಫೈಲ್ ತೆಗೆದುಕೊಂಡು ಹೋಗಿದ್ದಾಗ ಹೀಗೆ ಆಗಿದ್ದರೆ ಅದು ಅವಮಾನ. ಸಿಎಂ ವೈಯಕ್ತಿಕವಾಗಿ ನನಗೆ ಅಣ್ಣನ ಸಮಾನ. ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಸಿಎಂ ಬಳಿ ಪತ್ರ ನೀಡಿದೆ. ಅವರು ಸಂಪುಟದ ಮುಂದೆ ಇಡಲು ಪತ್ರದ ಮೇಲೆ ನೋಟ್ ಬರೆದರು. ಮುಂದಿನ ಫಾಲೋ ಅಪ್ ಮಾಡಲು ಆ ಲೆಟರ್‌ನ ಫೋಟೋ ತೆಗೆದುಕೊಳ್ಳಲು ಕೇಳಿದೆ. ಆಗ ಸಿಎಂ ಕಾರ್ಯ ಒತ್ತಡದಿಂದಾಗಿ ಸಣ್ಣದಾಗಿ ಸಿಡುಕಿದರು. ಸಿಎಂ ನನಗೆ ಪೆಟ್ಟು ಕೊಟ್ಟರೂ ಬೇಸರ ಇಲ್ಲ. ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿದ್ದಾರೆ. ನಾನು ಕೇಳಿದ್ದಕ್ಕೆಲ್ಲ ಹಣ ಕೊಟ್ಟ ಏಕೈಕ ಸಿಎಂ ಬಸವರಾಜ ಬೊಮ್ಮಾಯಿ ಎಂದರು.

ವಸತಿ ಸಚಿವ ವಿ.ಸೋಮಣ್ಣ ಅವರ ಹುಟ್ಟುಹಬ್ಬ ಇದ್ದ ಕಾರಣ, ಅವರಿಗೆ ಶುಭ ಕೋರಲು ಹೋಗಿದ್ದೆ. ಹೀಗಾಗಿ ಮೈಸೂರಿಗೆ ಸಿಎಂ ಬಂದಾಗ ಬರಲು ಆಗಲಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು ಎಐಸಿಸಿ ಅಧ್ಯಕ್ಷೆ ಸೋನಿಯಾಗಾಂಧಿ ಅವರಿಗೆ ಇಡಿ ನೋಟಿಸ್ ನೀಡಿರುವ ಹಿನ್ನೆಲೆಯಲ್ಲಿ ಪ್ರತಿಭಟಿಸುತ್ತಿರುವ ಕಾಂಗ್ರೆಸ್‌ನ ನಿಜ ಬಣ್ಣ ಬೀದಿಗೆ ಬಂದಿದೆ. ಅವ್ಯವಹಾರದ ಆರೋಪದಲ್ಲಿ ಸಿಲುಕಿದವರಿಗೆ ಜನರ ಅನುಕಂಪ ದೊರೆಯಲ್ಲ ಎಂದರು.

## ನನಗೂ ಸಿಎಂ ಆಗುವ ಆಸೆ ಇದೆ

### ಡಿಕೆ ಶಿವಕುಮಾರ್‌ಗೆ ಟಾಂಗ್ ಕೊಟ್ಟ ಶಾಸಕ ಜಮೀರ್ ಅಹ್ಮದ್



ಬೆಂಗಳೂರು: ಸಿಎಂ ಅಭ್ಯರ್ಥಿಗಾಗಿ ಕಾಂಗ್ರೆಸ್ ಪಕ್ಷದಲ್ಲಿ ಗೊಂದಲ ಶುರುವಾಗಿರುವ ವಿಚಾರಕ್ಕೆ ಸಂಬಂಧಿಸಿ ಪ್ರತಿಕ್ರಿಯೆ ನೀಡಿದ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್, ಎಲ್ಲರಿಗೂ ಸಿಎಂ ಆಗಬೇಕು ಅನ್ನೋ ಆಸೆ ಇರುತ್ತದೆ. ನನಗೂ ಸಿಎಂ ಆಗುವ ಆಸೆ ಇದೆ. ಒಂದೇ ಸಮುದಾಯದಿಂದ ಯಾರೂ ಮುಖ್ಯಮಂತ್ರಿ ಆಗಲ್ಲ. ಒಕ್ಕಲಿಗ ಸಮುದಾಯದಂತೆ ನಮ್ಮ ಸಮುದಾಯವೂ ದೊಡ್ಡದಿದೆ. ಎಲ್ಲ ಸಮಾಜದವರು ಸೇರಿ ಮತ ಕೊಟ್ಟರೆ ಸಿಎಂ ಆಗಬಹುದು. ರಾಜ್ಯಕ್ಕೆ ಒಳ್ಳೆಯದಾಗಬೇಕೆಂದರೆ ಸಿದ್ದರಾಮಯ್ಯ ಸಿಎಂ ಆಗಬೇಕು ಅನ್ನೋದು ಜನರ ಆಸೆ. ಹಾಗೇ ನನ್ನ ವೈಯಕ್ತಿಕ ಅಭಿಪ್ರಾಯ ಎಂದು ಡಿಕೆ ಶಿವಕುಮಾರ್‌ಗೆ ಟಾಂಗ್ ಕೊಟ್ಟಿದ್ದಾರೆ.

ಸೋನಿಯಾ ಗಾಂಧಿಗೆ ಇಂದು ಇಡಿ ವಿಚಾರಣೆ ಬಗ್ಗೆ ಮಾತನಾಡಿದ ಶಾಸಕರು, ಟಾರ್ಗೆಟ್ ಮಾಡಿ ಸೋನಿಯಾ ಗಾಂಧಿ ವಿಚಾರಣೆ ನಡೆಸುತ್ತಿದ್ದಾರೆ. ಬಿಜೆಪಿಯವರು ನಮ್ಮನ್ನು ಹೆದರಿಸಲು ವಿಚಾರಣೆ ಮಾಡುತ್ತಿದ್ದಾರೆ. ಮುಚ್ಚೋಗಿದ್ದ ಪ್ರಕರಣವನ್ನು ಮತ್ತೆ ರೀ ಓಪನ್ ಮಾಡಿಸಿದ್ದಾರೆ. 10 ವರ್ಷದ ಹಿಂದೆ ನ್ಯಾಷನಲ್ ಹೆರಾಲ್ಡ್ ಕೇಸ್ ಕ್ಲೋಸ್ ಆಗಿತ್ತು. ಆದರೆ ಇದೀಗ ವಿಚಾರಣೆ ಹೆಸರಲ್ಲಿ ಸೋನಿಯಾ ಗಾಂಧಿ, ರಾಹುಲ್‌ಗೆ ಕಿರುಕುಳ ನೀಡುತ್ತಿದ್ದಾರೆಂದು ದೂರಿದರು. ದೇಶದಲ್ಲಿ ಕಾಂಗ್ರೆಸ್‌ನವರನ್ನು ಬಿಟ್ಟರೆ ಬೇರೆ ಯಾರು ಇಲ್ಲ. ನಮ್ಮ ಹೋರಾಟ ನಿರಂತರವಾಗಿ ನಡೆಯುತ್ತದೆ. ರಾಜ್ಯದಲ್ಲಿ ನಾನು, ಡಿಕೆ ಶಿವಕುಮಾರ್ ಮೇಲೆ ಯಾಕೆ ದಾಳಿ ಮಾಡಿರೋದು ಬೇರೆ ಯಾರು ಇಲ್ವಾ ಎಂದು ಬಿಜೆಪಿ ವಿರುದ್ಧ ಜಮೀರ್ ಅಹ್ಮದ್ ವಾಗ್ದಾಳಿ ನಡೆಸಿದ್ದಾರೆ.

## ಯಾವ ಜಮೀರ್ ಗಿಮೀರ್‌ಗೆಲ್ಲ ಉತ್ತರ ಕೊಡೋಕೆ ನಾನು ತಯಾರಿಲ್ಲ



ಬೆಂಗಳೂರು, ಜು.21– ಯಾವ ಜಮೀರ್ ಗಿಮೀರ್‌ಗೆಲ್ಲ ಉತ್ತರ ಕೊಡೋಕೆ ನಾನು ತಯಾರಿಲ್ಲ ಎಂದು ಚಾಮರಾಜಪೇಟೆ ಶಾಸಕ ಜಮೀರ್ ಅಹ್ಮದ್ ಖಾನ್ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕಿಡಿಕಾರಿದ ಪ್ರಸಂಗ ನಡೆದಿದೆ.

ಸಿಎಂ ಅಭ್ಯರ್ಥಿ ಸ್ಥಾನಕ್ಕಾಗಿ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಪೈಪೋಟಿ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿದ್ದ ಜಮೀರ್ ಅಹ್ಮದ್ ಖಾನ್, ಡಿಕೆ ಶಿವಕುಮಾರ್ ಒಕ್ಕಲಿಗ ಟ್ರಂಪ್ ಕಾರ್ಡ್‌ಗೆ ವಿರೋಧ ವ್ಯಕ್ತಪಡಿಸಿದ್ದರು. ಈ ವೇಳೆ ಮಾತನಾಡಿದ್ದ ಅವರು ಒಂದೇ ಸಮುದಾಯವನ್ನು ನಂಬಿಕೊಂಡರೆ ಮುಖ್ಯಮಂತ್ರಿ ಆಗಲು ಸಾಧ್ಯವಿಲ್ಲ ಎಂದು ಹೇಳಿದ್ದರು.

ಈ ವಿಚಾರವಾಗಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್, ಶಾಸಕ ಜಮೀರ್ ಅಹ್ಮದ್ ಖಾನ್‌ಗೆ ವಾರ್ನಿಂಗ್ ನೀಡಿದರು. ಯಾವ ಜಮೀರ್, ಜಮೀರ್ ಗಿಮೀರ್‌ಗೆಲ್ಲ ಉತ್ತು ಕೊಡೋಕೆ ನಾನು ತಯಾರಿಲ್ಲ ಎಂದರು. ಅಲ್ಲದೇ, ಇಂತಹವರು ನೂರಾರು ಜನ, ಯಾರು ಏನು ಬೇಕಾದರು ಮಾತಾಡಿದ್ರು ಕಾಂಗ್ರೆಸ್ ಪಾರ್ಟಿ ಅದನ್ನು ಒಪ್ಪಲ್ಲ. ಕಾಂಗ್ರೆಸ್ ಪಾರ್ಟಿ, ಕಾಂಗ್ರೆಸ್ ಲೈನ್‌ನಲ್ಲಿಯೇ ಹೋಗಬೇಕು. ಪ್ರತಿಯೊಬ್ಬರು ಕಾಂಗ್ರೆಸ್ ಪಾರ್ಟಿ ಲೈನ್‌ನಲ್ಲಿ ಹೋಗಬೇಕು. ಯಾವ ರಾಜಕಾರಣ ಮಾಡಬೇಕು ಎಂದರೆ, ಕಾಂಗ್ರೆಸ್ ಪಕ್ಷಕ್ಕೆ ಎಲ್ಲಾ ಸಮುದಾಯ ಬೇಕು ಎಂದು ಸ್ಪಷ್ಟವಾಗಿ ಹೇಳಿದರು.

## ಲಿಂಗಾಂಬುದಿ ಕೆರೆಗೆ ಪ್ರವೇಶ ಶುಲ್ಕ ವಿಧಿಸುವ ಪ್ರಸ್ತಾಪಕ್ಕೆ ವಿರೋಧ




ಮೈಸೂರು, ಜು.21(ಎಂಟಿವೈ)– ಲಿಂಗಾಂಬುದಿ ಕೆರೆಗೆ ಪ್ರವೇಶ ಶುಲ್ಕ ವಿಧಿಸಲು ಉದ್ದೇಶಿಸಿರುವ ಅರಣ್ಯ ಇಲಾಖೆಯ ಪ್ರಸ್ತಾವನೆಯನ್ನು ವಿರೋಧಿಸಿ ಲಿಂಗಾಂಬುದಿ ಉದ್ಯಾನದ ವಾಯು ವಿಹಾರಿಗಳ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು. ಯಾವುದೇ ಕಾರಣಕ್ಕೂ ಪ್ರವೇಶ ಶುಲ್ಕ ವಿಧಿಸಬಾರದು ಎಂದು ಆಗ್ರಹಿಸಿದರು.

ಇದು ಮೈಸೂರಿನ ಅತ್ಯಂತ ದೊಡ್ಡ ಹಾಗೂ ಹಳೆಯ ಐತಿಹಾಸಿಕ ಕೆರೆಯಾಗಿದೆ. ಇದರ ಬಹು ಭಾಗವು ನೀರಿನಿಂದ ಆವೃತವಾಗಿದೆ. ಉಳಿದ ಪ್ರದೇಶವನ್ನು ಮೀಸಲು ಅರಣ್ಯ ಪ್ರದೇಶವೆಂದು ಘೋಷಿಸಲಾಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನಸಾಮಾನ್ಯರ ತೆರಿಗೆಯಿಂದ ಅನೇಕ ಸಾರ್ವಜನಿಕ ಸೇವೆಯನ್ನು ಕಲ್ಪಿಸಿಕೊಡಲಾಗುತ್ತಿದೆ. ಈ ಕೆರೆಯೂ ಜನಗಳ ಆಸ್ತಿ, ಅದರ ನಿರ್ವಹಣೆ ಸರ್ಕಾರದ ಜವಾಬ್ದಾರಿ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಇತ್ತೀಚೆಗೆ ಸರ್ಕಾರದ ನಿರ್ದೇಶನದಂತೆ ಲಿಂಗಾಂಬುದಿ ವೃಕ್ಷೋದ್ಯಾನ ನಿರ್ವಹಣೆ ಮಾಡಲೆಂದು ಪ್ರವೇಶ ಶುಲ್ಕ ವಿಧಿಸಲು ಅರಣ್ಯ ಇಲಾಖೆ ಮುಂದಾಗಿರುವುದು ಖಂಡನೀಯ. ಕೊರೊನಾ ಕಾರಣದಿಂದ ಬಹುಕಾಲ ಮುಚ್ಚಿದ್ದ ಈ ಉದ್ಯಾನ ಮತ್ತೆ ಸಾರ್ವಜನಿಕರಿಗೆ ತೆರೆದಿದೆ. ನೂರಾರು ಜನ ಹಿರಿಯರು, ಮಕ್ಕಳು, ಜನಸಾಮಾನ್ಯರು ತಮ್ಮ ಆರೋಗ್ಯದ ಹಿತದೃಷ್ಟಿಯಿಂದ ವಾಯು ವಿಹಾರಕ್ಕಾಗಿ ಇಲ್ಲಿಗೆ ಆಗಮಿಸುತ್ತಾರೆ. ಆದರೀಗ ಶುಲ್ಕದ ಹೆಸರಿನಲ್ಲಿ ತಡೆ ಉಂಟು ಮಾಡುತ್ತಿರುವುದು ಜನರ ಆರೋಗ್ಯದ ಬಗ್ಗೆ ಸರ್ಕಾರಕ್ಕೆ ಇರುವಂತಹ ಕಾಳಜಿ ಎಂತಹುದು ಎಂಬುದನ್ನು ತೋರಿಸುತ್ತದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಅರಣ್ಯ ಇಲಾಖೆಯು ಉದ್ಯಾನವನ್ನು ಪ್ರವೇಶಿಸಲು ಪ್ರವೇಶ ಶುಲ್ಕ ವಿಧಿಸಲು ಹೊರಟಿರುವ ಪ್ರಸ್ತಾಪವನ್ನು ಈ ಕೂಡಲೇ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಈ ಕುರಿತು ಮನವಿ ಸ್ವೀಕರಿಸಿ ಮಾತನಾಡಿದ ಅರಣ್ಯ ಇಲಾಖೆಯ ಎಸಿಎಫ್ ಲಕ್ಷ್ಮಿಕಾಂತ್ ಅವರು, ಪ್ರವೇಶ ಶುಲ್ಕ ವಿಧಿಸುವ ಕುರಿತು ಯಾವುದೇ ಪ್ರಸ್ತಾವನೆ ಇಲ್ಲ. ನಿತ್ಯ ವಾಯುವಿಹಾರಕ್ಕೆ ಬರುವ ಸಾರ್ವಜನಿಕರಿಗೆ ಪ್ರವೇಶ ಶುಲ್ಕ ವಿಧಿಸುವುದಿಲ್ಲ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಸಮಿತಿಯ ಸದಸ್ಯರಾದ ನಾಗೇಶ್, ಸಿದ್ದೇಶ್, ಸಂಧ್ಯಾ, ಟಿ.ಆರ್.ಸುನಿಲ್, ಅವಿನಾಶ್ ಹಾಗೂ ಕಿನಿ, ಲಕ್ಕಿಮಾರ್, ನರಕೇಸರಿ, ಶಿವಕುಮಾರ್ ಬಸವಣ್ಣ, ಲೋಕೇಶ್, ಸುಮತಿ, ಜನಾರ್ಧನ್, ಬಸವೇಶ್ವರ ಸೇವಾ ಸಮಿತಿ, ಸುರಭಿ ಮಹಿಳಾ ಸಂಘ, ನಾಗರಿಕ ಸಮಿತಿಗಳ ಸಮನ್ವಯ ವೇದಿಕೆ, ರಾಮಕೃಷ್ಣ ನಗರದ ಹಿರಿಯ ನಾಗರಿಕರು ಇದ್ದರು.


## ಇರ್ಫಾನ್ ಸೇಠ್ ನಿಧನ



ಮೈಸೂರು, ಜು.21– ಮೈಸೂರಿನ ಬೆಂಗಳೂರು ರಸ್ತೆಯಲ್ಲಿರುವ ಶೋಭಾ ಗಾರ್ಡನ್ ನಿವಾಸಿ ಹಾಗೂ ಶಾಸಕ ತನ್ವೀರ್ ಸೇಠ್ ಸೋದರ ಸಂಬಂಧಿ ಇರ್ಫಾನ್ ಸೇಠ್(46) ಅನಾರೋಗ್ಯದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಮೃತರು ತಾಯಿ, ಪತ್ನಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಸಂಜೆ 5.15ರಲ್ಲಿ ಮೈಸೂರಿನ ಟಿಪ್ಪು ವೃತ್ತದ ಬಳಿಯಿರುವ ಮುಸ್ಲಿಂ ಸಮುದಾಯದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ನಗರ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಎನ್.ಮಂಜುನಾಥ್, ಸಯ್ಯದ್ ಎಕ್ಬಾಲ್ ಸಂತಾಪ ಸೂಚಿಸಿದ್ದಾರೆ.

## ಕಮಲಮ್ಮ



**ಮೈಸೂರು:** ತಾಲೂಕಿನ ಮಾಕನಹುಂಡಿ ಗ್ರಾಮದ ನಿವಾಸಿ ಕಮಲಮ್ಮ (70) ಅನಾರೋಗ್ಯದಿಂದ ಬುಧವಾರ ರಾತ್ರಿ ನಿಧನರಾದರು. ಮೃತರಿಗೆ ಪುತ್ರ ರವಿರಾಜ್ ಅರಸ್, ಸೊಸೆ ಶ್ವೇತಾ, ಮೊಮ್ಮಕ್ಕಳು ಇದ್ದಾರೆ. ಗುರುವಾರ ಮಧ್ಯಾಹ್ನ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

## ಕೆ.ಮಣಿವಣ್ಣನ್



ಮೈಸೂರು, ಜು.21– ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ ಕೆ.ಮಣಿವಣ್ಣನ್(75) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ರಾಜ್ಯಸಭೆಯಲ್ಲಿ ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿದ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ



ನವದೆಹಲಿ, ಜು.21– ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರು ರಾಜ್ಯಸಭೆಯಲ್ಲಿಂದು ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿದರು. 'ಭಾರತ ಸಂವಿಧಾನದಲ್ಲಿ ನಿಜವಾದ ನಂಬಿಕೆ ಹೊಂದಿ, ತಮ್ಮ ಕರ್ತವ್ಯವನ್ನು ಶ್ರದ್ಧಾ ಪೂರ್ವಕವಾಗಿ ನಿರ್ವಹಿಸುವೆ' ಎಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿದರು. ಇದಕ್ಕೂ ಮುನ್ನ ಭವನಕ್ಕೆ ಆಗಮಿಸಿದ ವೀರೇಂದ್ರ ಹೆಗ್ಗಡೆ ಅವರನ್ನು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಆತ್ಮೀಯವಾಗಿ ಸ್ವಾಗತ ನೀಡಿ, ಬರಮಾಡಿಕೊಂಡರು.

ಈ ವೇಳೆ ಪ್ರತಿಕ್ರಿಯೆ ನೀಡಿದ ಅವರು, ಧರ್ಮಸ್ಥಳದ ಧರ್ಮಾಧಿಕಾರಿಯಾಗಿರುವ ವೀರೇಂದ್ರ ಹೆಗ್ಗಡೆ ಅವರನ್ನು ರಾಜ್ಯಸಭೆಯಲ್ಲಿ ನೋಡಲು ಅವಕಾಶ ಸಿಕ್ಕಿರುವುದು ಸಂತಸವನ್ನುಂಟು ಮಾಡಿದೆ ಎಂದರು. ನಂತರ ಡಾ. ವೀರೇಂದ್ರ ಹೆಗ್ಗಡೆ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಡಾ. ವೀರೇಂದ್ರ ಹೆಗಡೆ ಅವರನ್ನು ಆಯ್ಕೆ ಮಾಡಿದ್ದಕ್ಕಾಗಿ ನಳಿನ್ ಕುಮಾರ್ ಕಟೀಲ್ ಅವರು ಪ್ರಧಾನಿ ಮೋದಿ ಅವರಿಗೆ ಮಾಲಾರ್ಪಣೆ ಮಾಡಿ ಗೌರವಿಸಿದರು.

ರಾಜ್ಯಸಭಾ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ಡಾ.ವೀರೇಂದ್ರ ಹೆಗ್ಗಡೆ ಅವರು ಸಂಸತ್ ಭವನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದರು.

ಪ್ರಧಾನಿ ಮೋದಿ ಅವರಿಗೆ ಶಾಲು ಹೊದಿಸಿ, ಹೂವಿನ ಹಾರ ಹಾಕಿ ಕೃತಜ್ಞತೆ ತಿಳಿಸಿದರು. ಜೊತೆಗೆ ಪ್ರಸಾದ ಕೂಡ ನೀಡಿದರು. ಪ್ರಧಾನಿ ಭೇಟಿ ಕುರಿತು ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೀರೇಂದ್ರ ಹೆಗ್ಗಡೆ ಅವರು, ಸಂಸತ್ ನೋಡುವ ಆಸೆ ಮೊದಲಿನಿಂದಲೂ ಇತ್ತು ಆದರೆ ಸಂಸತ್ ಸದಸ್ಯನಾಗಿ ಒಳಗೆ ಹೋಗುವ ಅವಕಾಶ ಸಿಕ್ಕಿತು. ಒಳಗೆ ಹೋಗಿ ನೋಡಿದ ಮೇಲೆ ತುಂಬಾ ಗೌರವ ಬಂತು. ಎಲ್ಲ ಭಕ್ತರು ನನ್ನ ಆಯ್ಕೆಯಿಂದ ಸಂತೋಷಪಟ್ಟಿದ್ದಾರೆ. ಎಲ್ಲರೂ ಗೌರವ ಸಲ್ಲಿಸುತ್ತಿದ್ದಾರೆ ಎಂದು ಖುಷಿ ಹಂಚಿಕೊಂಡಿದ್ದಾರೆ.

ಈ ಹಿಂದೆ ಹಲವು ಪ್ರಯೋಗಗಳನ್ನು ಮಾಡಿದ್ದೇವೆ. ಅವು ಯಶಸ್ಸು ಕಂಡಿವೆ, ಅವುಗಳನ್ನು ಬೇರೆ ರಾಜ್ಯಗಳಿಗೆ ವಿಸ್ತರಿಸಲು ಅವಕಾಶ ಇದೆ. ಸರ್ಕಾರದ ಬೆಂಬಲವೂ ಇರುವುದರಿಂದ ಇದು ಸುಲಭವಾಗಬಹುದು. ಮೊದಲು ಅರ್ಜಿ ಹಾಕಿ ಪದವಿ ಪಡೆಯುತ್ತಿದ್ದರು. ಈಗ ಕೆಲಸ ಮಾಡಿದವರನ್ನು ಗುರುತಿಸಲಾಗುತ್ತಿದೆ ನಾನು ಯಾವುದೇ ಪಕ್ಷಕ್ಕೂ ಈಗಲೂ ಹೊಂದಿಕೊಳ್ಳುವುದಿಲ್ಲ. ನಾನು ಪಕ್ಷಾಂತರವಾಗಿ ಕೆಲಸ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ.

## ಶ್ರೀಲಂಕಾದ ಅಧ್ಯಕ್ಷರಾಗಿ ರಾನಿಲ್ ವಿಕ್ರಮಸಿಂಘೆ ಪ್ರಮಾಣ ವಚನ ಸ್ವೀಕಾರ

ಕೊಲಂಬೊ, ಜು.21– ಶ್ರೀಲಂಕಾದ ಅಧ್ಯಕ್ಷರಾಗಿ ರಾನಿಲ್ ವಿಕ್ರಮಸಿಂಘೆ ಅವರು ಇಂದು ಪ್ರಮಾಣ ವಚನ ಸ್ವೀಕರಿಸಿದರು. ಜುಲೈ 20 ರಂದು ಬುಧವಾರ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲ್ಲುವ ಮುಖೇನ ರಾನಿಲ್ ವಿಕ್ರಮಸಿಂಘೆ ಶ್ರೀಲಂಕಾದ ಒಂಬತ್ತನೇ ಅಧ್ಯಕ್ಷರಾಗಿ ಹೊರಹೊಮ್ಮಿದ್ದಾರೆ.

ರಾನಿಲ್ ವಿಕ್ರಮಸಿಂಘೆ ಅವರು ಎದುರಾಳಿಗಳ ಎದುರು ಸುಮಾರು 134 ಮತಗಳನ್ನು ಗಳಿಸಿ ಜಯಗಳಿಸಿದ್ದರು. ರಾನಿಲ್ ವಿಕ್ರಮಸಿಂಘೆ ಅವರ ವಿರುದ್ಧ ಭಾರೀ ಪ್ರತಿಭಟನೆಗಳ ನಡುವೆಯೇ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. ಬುಧವಾರ ಚುನಾವಣೆಯಲ್ಲಿ ಗೆದ್ದ ಬೆನ್ನಲ್ಲೇ ಅವರು ಸಂಸತ್ತಿನ ಸಂಕೀರ್ಣದ ಒಳಗೆ ಸಂಸತ್ತಿನ ಸಭಾಂಗಣದ ಹೊರಗೆ ಪ್ರಮಾಣವಚನ ಸ್ವೀಕರಿಸಲು ಸ್ಪೀಕರ್‌ಗೆ ಅನುಮತಿ ಕೋರಿದರು.

ಮೈಸೂರು ಮಿತ್ರ ಶುಕ್ರವಾರ 22 ಜುಲೈ 2022

# ಜಲ ಸ್ಫೋಟಗೊಂಡ ನಿಶಾನಿ ಬೆಟ್ಟದಲ್ಲಿ ಭಾರೀ ಬಿರುಕು

## ● ಬೆಟ್ಟ ಕುಸಿದರೆ ಗ್ರಾಮಗಳೇ ನೆಲಸಮವಾಗುವ ಆತಂಕ ● ವೈಜ್ಞಾನಿಕ ಅಧ್ಯಯನಕ್ಕೆ ಗ್ರಾಮಸ್ಥರ ಆಗ್ರಹ

● ಪ್ರಸಾದ್ ಸಂಪಿಗೆಕಟ್ಟೆ

ಮಡಿಕೇರಿ,ಜು.21– ಜಲ ಸ್ಫೋಟದಿಂದ ಭೂ ಕುಸಿತವಾದ 2ನೇ ಮೊಣ್ಣಂಗೇರಿಯ ನಿಶಾನಿ ಬೆಟ್ಟದಲ್ಲಿ ಭಾರೀ ಬಿರುಕುಗಳು ಕಾಣಿಸಿಕೊಂಡಿದ್ದು, ಬೆಟ್ಟ ಕುಸಿದರೆ ಕೆಳ ಭಾಗದಲ್ಲಿರುವ ಗ್ರಾಮಗಳೇ ನೆಲಸಮವಾಗುವ ಆತಂಕ ಎದುರಾಗಿದೆ. ಜಲಸ್ಫೋಟವಾದ ಮೂಲ ಸ್ಥಳದ ಮೇಲ್ಭಾಗದಲ್ಲಿರುವ ಬೆಟ್ಟದಲ್ಲಿ ಕಿಲೋ ಮೀಟರ್ ಉದ್ದಕ್ಕೂ ಭಾರೀ ಬಿರುಕುಗಳು ಮೂಡಿದ್ದು ಮತ್ತಷ್ಟು ಆತಂಕ ಸೃಷ್ಟಿಸಿದೆ.

ಇದೇ ಜು.18ರ ರಾತ್ರಿ ಭೂ ಕುಸಿತದಿಂದ ಸಂತ್ರಸ್ತವಾದ ರಾಮನಕೊಲ್ಲಿಯಿಂದ ಸುಮಾರು 6 ಕಿಲೋ ಮೀಟರ್ ದೂರದ ಬೆಟ್ಟದಲ್ಲಿ ಇದೀಗ ಭಾರೀ ಬಿರುಕುಗಳು ಕಂಡು ಬಂದಿವೆ. ಬೆಟ್ಟದ ಮೇಲ್ಭಾಗದಲ್ಲಿ 6 ಇಂಚಿನಿಂದ ಸುಮಾರು 2 ಅಡಿಯಷ್ಟು ಅಗಲಕ್ಕೆ ಒಂದೂವರೆ ಕಿ.ಮೀ. ದೂರದವರೆಗೂ ಆಳವಾಗಿ ಭೂಮಿ ಬಾಯ್ತೆರೆದುಕೊಂಡಿದೆ. 2018ರಲ್ಲಿ ಈ ಭಾಗದಲ್ಲಿ ಸಂಭವಿಸಿದ ಭಾರೀ ಜಲಸ್ಫೋಟದ ಸಂದರ್ಭ ಇಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದು, ಇದೀಗ ಮತ್ತಷ್ಟು ದೊಡ್ಡದಾಗಿ ಕಂಡು ಬಂದಿದೆ. ಮಾತ್ರವಲ್ಲದೇ ಬಿರುಕು ಮೂಡಿರುವ ಪ್ರದೇಶ ಅಂದಾಜು 1 ಅಡಿಗಳಷ್ಟು ತಗ್ಗಲ್ಪಟ್ಟಿರುವುದು ಮಹಾ ಅಪಾಯದ ಮುನ್ಸೂಚನೆ ನೀಡುತ್ತಿದೆ.

ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಬರುವ ನಿಶಾನಿ ಬೆಟ್ಟ ಸಮುದ್ರ ಮಟ್ಟದಿಂದ 4 ಸಾವಿರ ಅಡಿಗಳಷ್ಟು ಎತ್ತರದಲ್ಲಿದೆ. ಈ ಬೆಟ್ಟದ ತುದಿಯಲ್ಲಿ ಬೃಹತ್ ಬಿರುಕುಗಳು ಕಾಣಿಸಿಕೊಂಡಿರುವುದರಿಂದ ಬೆಟ್ಟ ಕುಸಿದಲ್ಲಿ ಆಗಬಹುದಾದ ಅನಾಹುತದ ಪರಿಣಾಮವನ್ನು ಊಹಿಸಲೂ ಅಸಾಧ್ಯವಾಗಿದೆ. ಭೂ ಕುಸಿತವಾದಲ್ಲಿ ಬೆಟ್ಟದ ಕೆಳ ಭಾಗದಲ್ಲಿರುವ ಗ್ರಾಮಗಳ ನಕ್ಷೆಗಳೇ ಬದಲಾಗಿ ಹೋಗಲಿವೆ.

ಕಳೆದ ಕೆಲ ದಿನಗಳ ಹಿಂದೆ ಕೊಡಗಿನಾದ್ಯಂತ ಅಬ್ಬರಿಸಿದ್ದ ವರುಣ ಸದ್ಯಕ್ಕೆ ಶಾಂತನಾದಂತೆ ಕಂಡು ಬರುತ್ತಿದ್ದಾನೆ. ಹೀಗಾಗಿ ಇಲ್ಲಿ ಅನಾಹುತ ಘಟಿಸದಿದ್ದರೂ ಭವಿಷ್ಯದ ದಿನಗಳಲ್ಲಿ ಈ ಬೆಟ್ಟ ಸಾಲುಗಳು ಕುಸಿದು ಬೀಳುವುದು ಶತಸಿದ್ಧ ಎನ್ನುವ ಪರಿಸ್ಥಿತಿ ಇದೆ. ಬೆಟ್ಟದ





ಬಿರುಕು ಮೂಡಿರುವ ಸ್ಥಳದಿಂದ ಕಣ್ಣು ಹಾಯಿಸುವಷ್ಟು ದೂರದಲ್ಲಿ ನಿಶಾನಿ ಬೆಟ್ಟದ ತುತ್ತ ತುದಿಯಲ್ಲಿ ಹೊಸದಾಗಿ ಭಾರೀ ದೊಡ್ಡ ಭೂಕುಸಿತ ಉಂಟಾಗಿರುವುದು ಕಂಡು ಬರುತ್ತಿದೆ. ಹಸಿರನ್ನು ಹೊದ್ದುಕೊಂಡಿರುವ ಬೆಟ್ಟ ಸಾಲಿನಲ್ಲಿ ಭೂ ಕುಸಿತವಾಗಿದ್ದು, ಆ ಸ್ಥಳ ಕಣ್ಣಿಂದ ಗೋಚರಿಸುತ್ತಿದೆ ದುರ್ಗಮ ಮತ್ತು ಜನ ವಸತಿ ರಹಿತ ಪ್ರದೇಶದಲ್ಲಿ ಭೂ ಕುಸಿತವಾಗಿರುವ ಕಾರಣ ಆ ಘಟನೆ ಮುನ್ನೆಲೆಗೆ ಬಂದಿಲ್ಲ. ಆದರೆ ಭೂ ಕುಸಿತದ ಭೀಕರತೆ ಮುಂದಾಗಬಹುದಾದ ಅನಾಹುತಕ್ಕೆ ಎಚ್ಚರಿಕೆಯ ಸಂದೇಶ ನೀಡುತ್ತಿದೆ.

**ವೈಜ್ಞಾನಿಕ ಅಧ್ಯಯನ ಬೇಕು:** ಪಶ್ಚಿಮ ಘಟ್ಟ ಸಾಲುಗಳ ನಿಶಾನಿ ಬೆಟ್ಟದಲ್ಲಿ ಮೂಡಿರುವ ಕಿ.ಮೀ.ವರೆಗಿನ ಭಾರೀ ಬಿರುಕುಗಳ ಬಗ್ಗೆ ಈಗಲೇ ಸರ್ಕಾರ ಎಚ್ಚೆತ್ತುಕೊಳ್ಳಬೇಕಿದೆ. ಹಿರಿಯ ಭೂವಿಜ್ಞಾನಿಗಳು, ಭೂ ಗರ್ಭ ಶಾಸ್ತ್ರಜ್ಞರು, ಭೂ ಕುಸಿತದ ಅಧ್ಯಯನ ನಡೆಸುವ ವಿಜ್ಞಾನಿಗಳು ಈ ಭಾಗಕ್ಕೆ ಆಗಮಿಸಿ ಸಮಗ್ರ ಅಧ್ಯಯನ ನಡೆಸಬೇಕಿದೆ. ಭೂಮಿ ಬಿರುಕು ಬಿಟ್ಟ ಪ್ರದೇಶದಲ್ಲಿ ಯಾವುದೇ ಜನ ವಸತಿ, ರೆಸಾರ್ಟ್, ಹೋಂ ಸ್ಟೇ, ಕೆರೆ, ರಸ್ತೆ, ಮಾತ್ರವಲ್ಲದೇ, ಮಾನವನ ಹಸ್ತಕ್ಷೇಪವೇ ಇಲ್ಲದ ಪ್ರದೇಶವಾಗಿದೆ.

ಬಿರುಕು ಮೂಡಿರುವ ಪ್ರದೇಶದಲ್ಲಿ ದಟ್ಟ ಹಚ್ಚ ಹಸುರಿನ ಕಾಡುಗಳಿದ್ದು, ಒಂದು ರೀತಿಯ ಹುಲ್ಲುಗಾವಲಿನಿಂದ ಕೂಡಿದೆ. ಮಾನವನ ನೆರಳು ಕೂಡ ಬೀಳದ ಜಾಗದಲ್ಲಿ ಬಿರುಕು ಬಿಟ್ಟಿರುವ ಕಾರಣ ಪಶ್ಚಿಮ ಘಟ್ಟಗಳಲ್ಲಾಗುತ್ತಿರುವ ಪ್ರಾಕೃತಿಕ ಬದಲಾವಣೆಗಳ ಬಗ್ಗೆ ಸಮಗ್ರವಾದ ವೈಜ್ಞಾನಿಕ ಅಧ್ಯಯನ ನಡೆಸಬೇಕಿದೆ ಎಂದು ರಾಮನಕೊಲ್ಲಿಯ ಗ್ರಾಮಸ್ಥರು ಆಗ್ರಹಿಸಿದ್ದಾರೆ.

2018ರಲ್ಲಿ ಸುರಿದ ಮಹಾ ಮಳೆಯಿಂದಾಗಿ ಇದೇ ನಿಶಾನಿ ಬೆಟ್ಟದಲ್ಲಿ ದೊಡ್ಡ ಪ್ರಮಾಣದ ಜಲಸ್ಫೋಟವಾಗಿ ಭೂಕುಸಿತ ಸಂಭವಿಸಿ ಮಾನವ ಪ್ರಾಣ ಹಾನಿಯೂ ನಡೆದಿತ್ತು. ಆ ವೇಳೆ ರಾಮಕೊಲ್ಲಿಯಲ್ಲಿದ್ದ ಹಳೆಯ ಸೇತುವೆ ಸಂಪೂರ್ಣ ಕೊಚ್ಚಿ ಹೋಗಿತ್ತಲ್ಲದೇ, ಮಂಗಳೂರು–ಮಡಿಕೇರಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲೇ ಹರಿಯುತ್ತಿರುವ ಪಯಸ್ವಿನಿ ನದಿ ಒಡಲಲ್ಲಿ ಬೃಹತ್ ಮರದ ದಿಮ್ಮಿಗಳು, ಬಂಡೆಗಳು ಭಾರೀ ಮಣ್ಣು ಶೇಖರಣೆಯಾಗಿ ನದಿ ತನ್ನ ಪಥವನ್ನೇ ಬದಲಿಸಿ ಹರಿದಿತ್ತು. ಈ ದುರಂತದ ಸಂದರ್ಭ ಇಡೀ ಗ್ರಾಮಕ್ಕೆ ಗ್ರಾಮವೇ ಅಲ್ಲಿಂದ ಸ್ಥಳಾಂತರಗೊಂಡಿತ್ತು.

**'ಆಶ್ಲೇಷ' ಆತಂಕ:** ಜುಲೈ ತಿಂಗಳಲ್ಲಿ 'ಆರಿದ್ರಾ' ಮಳೆ ಅಬ್ಬರ ಕಂಡು ಬಂದ ಹಿನ್ನೆಲೆಯಲ್ಲಿ ಅಲ್ಪ ಪ್ರಮಾಣದ ಭೂ ಕುಸಿತ, ನದಿ ಪ್ರವಾಹ ಉಂಟಾಗಿತ್ತು. ಇದೀಗ ಮಳೆ ಇಳಿಮುಖ ಕಂಡಿದ್ದು, ಜನರಿಗೆ ತುಸು ನೆಮ್ಮದಿ ಮೂಡಿದೆ. ಆದರೆ ಆಗಸ್ಟ್ ತಿಂಗಳಲ್ಲಿ ಸುರಿಯುವ 'ಆಶ್ಲೇಷ' ಮಳೆ ಏನು ಮಾಡಲಿದೆಯೋ ಎನ್ನುವ ಆತಂಕ ಜನರಲ್ಲಿದೆ.

2018ರಲ್ಲಿ ಮಡಿಕೇರಿ ತಾಲೂಕಿನ ಮೇಘತ್ತಾಳು, ಹೆಮ್ಮೆತ್ತಾಳು, ಮುಕ್ಕೋಡ್ಲು, ತಂತಿಪಾಲ, ದೇವಸ್ತೂರು, ಕಾಲೂರು, ಮದೆನಾಡು, ಮೊಣ್ಣಂಗೇರಿ, ಸಂಪಾಜೆ ಮತ್ತಿತರ ಕಡೆಗಳಲ್ಲಿ ಆಗಸ್ಟ್ ತಿಂಗಳಲ್ಲಿ ಸುರಿದ ಆಶ್ಲೇಷ ಮಳೆ ಹಿಂದೆಂದೂ ಕಂಡು ಕೇಳರಿಯದ ಪ್ರಾಕೃತಿಕ ವಿಕೋಪ ಸೃಷ್ಟಿಸಿತ್ತು. 2019ರಲ್ಲಿ ವಿರಾಜಪೇಟೆ ಕೆದಮಳ್ಳೂರು ತೋರಾ ಗ್ರಾಮದಲ್ಲಿ ಭಾರೀ ಭೂ ಕುಸಿತ ಮತ್ತು 2020ರಲ್ಲಿ ತಲಕಾವೇರಿ ಗಜಗಿರಿ ಬೆಟ್ಟ ಕುಸಿತಕ್ಕೂ ಆಶ್ಲೇಷ ಮಳೆಯ ಆರ್ಭಟ ಕಾರಣವಾಗಿತ್ತಲ್ಲದೇ, ಜೀವ ಹಾನಿಯೂ ಸಂಭವಿಸಿತ್ತು.

## ವಿರಾಜಪೇಟೆಯಲ್ಲಿ ಮೂವರು ಗಾಂಜಾ ಮಾರಾಟಗಾರರ ಬಂಧನ

### ಗಾಂಜಾ, ಎರಡು ಕಾರು, ಮೊಬೈಲ್‌ಗಳು, ನಗದು ವಶ



ವಿರಾಜಪೇಟೆ, ಜು.21– ಗಾಂಜಾ ಮಾರಾಟ ಮಾಡುತ್ತಿದ್ದ ಮೂವರನ್ನು ವಿರಾಜಪೇಟೆ ಪೊಲೀಸರು ಬಂಧಿಸಿ, ಗಾಂಜಾ, ಎರಡು ಕಾರು, ಮೊಬೈಲ್‌ಗಳು ಮತ್ತು ನಗದನ್ನು ವಶಪಡಿಸಿಕೊಂಡಿದ್ದಾರೆ.

ವಿರಾಜಪೇಟೆ ತಾಲೂಕು ಅಂಬಟ್ಟಿ ಗ್ರಾಮದ ವಾಸಿ ಕೆ.ಹೆಚ್. ನಿಜಾಮುದ್ದೀನ್ (31), ಬಿಟ್ಟಂಗಾಲ ಗ್ರಾಮದವರಾದ ಪಿ.ಡಿ. ಸೋಮಯ್ಯ (25) ಮತ್ತು ಪಿ.ಸಿ. ಕವನ್. ಮಾದಯ್ಯ (22) ಎಂಬವರೇ ಬಂಧಿತ ಗಾಂಜಾ ಮಾರಾಟಗಾರರು.

ಈ ಮೂವರು ಬುಧವಾರ (ಜು.21) ಸಂಜೆ 6.45 ರಲ್ಲಿ ವಿರಾಜಪೇಟೆಯ ಪಂಜರುಪೇಟೆ ಗಣಪತಿ ಬೀದಿ ಕಡೆಯಿಂದ ನಿಸರ್ಗ ಲೇಔಟ್ ಕಡೆಗೆ ತೆರಳುವ ರಸ್ತೆಯಲ್ಲಿ (ಪಾಪಣ್ಣನವರ ಮರದ ಮಿಲ್ ಹತ್ತಿರ) ಗಾಂಜಾ ಮಾರಾಟ ಮಾಡುತ್ತಿದ್ದರು. ವಿಷಯ ತಿಳಿದ ಪೊಲೀಸರು ದಾಳಿ ನಡೆಸಿ ಆರೋಪಿಗಳಿಂದ 1 ಕೆಜಿ, 650 ಗ್ರಾಂ ಗಾಂಜಾ, 1000 ರೂ. ನಗದು, ಮೂರು ಮೊಬೈಲ್‌ಗಳು, ಮಾರುತಿ–800 (ಕೆಎ–25, ಎಂ–5852) ಮತ್ತು ಎಸ್ಟೀಮ್ ಕಾರು (ಕೆಎ–03, ಎಂಎ–4375)ಗಳನ್ನು ವಶಪಡಿಸಿಕೊಂಡಿದ್ದಾರೆ. ಪೊಲೀಸ್ ಅಧೀಕ್ಷಕರು, ವಿರಾಜಪೇಟೆ ಉಪ ಅಧೀಕ್ಷಕರ ಮಾರ್ಗದರ್ಶನದಲ್ಲಿ ವಿರಾಜಪೇಟೆ ಸರ್ಕಲ್ ಇನ್‌ಸ್ಪೆಕ್ಟರ್ ಶಿವರುದ್ರ ಅವರ ಮೇಲ್ವಿಚಾರಣೆಯಲ್ಲಿ ನಗರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಸಿ.ವಿ. ಶ್ರೀಧರ್ ಮತ್ತು ಸಿಬ್ಬಂದಿಗಳಾದ ಗಿರೀಶ್, ಮುಸ್ತಾಫ್, ಧರ್ಮ, ರಜನ್, ಸುಬ್ರಮಣಿ, ಮಧು, ಸತೀಶ್, ಸಾಗರ್, ಶೆಟ್ಟಪ್ಪ ಅವರುಗಳು ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

## ರಾಜ್ಯ ಹೈಕೋರ್ಟ್ ಮೆಟ್ಟಿಲೇರಿದ ವಿರಾಜಪೇಟೆ ಪುರಸಭೆ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ

### ಜಿಲ್ಲಾಧಿಕಾರಿ, ಪುರಸಭಾ ಮುಖ್ಯಾಧಿಕಾರಿಗೆ ನೋಟೀಸ್ ಜಾರಿ

ವಿರಾಜಪೇಟೆ, ಜು.21– ಕಳೆದ 6 ತಿಂಗಳುಗಳಿಂದ ಖಾಲಿಯಿರುವ ವಿರಾಜಪೇಟೆ ಪುರಸಭೆಯ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆಗೆ ಅವಕಾಶ ಮಾಡಿಕೊಡುವಂತೆ ಕಾಂಗ್ರೆಸ್ ಮುಖಂಡರು ರಾಜ್ಯ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ನ್ಯಾಯಾಲಯ ಕೊಡಗು ಜಿಲ್ಲಾಧಿಕಾರಿಗೆ ಹಾಗೂ ವಿರಾಜಪೇಟೆ ಪುರಸಭಾ ಮುಖ್ಯಾಧಿಕಾರಿಗೆ ನೋಟೀಸ್ ಜಾರಿ ಮಾಡಿದೆ.


ವಿರಾಜಪೇಟೆ ಪುರಸಭೆಯಲ್ಲಿ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಆಡಳಿತ ರೂಢ ಬಿಜೆಪಿ ಅವಕಾಶ ನೀಡದೆ ಸತಾಯಿಸಿಕೊಂಡು ಬರುತ್ತಿತ್ತು 6 ತಿಂಗಳಿನಿಂದ ಖಾಲಿ ಬಿದ್ದಿರುವ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆಗೆ ಅವಕಾಶ ಮಾಡಿಕೊಡುವಂತೆ ಪುರಸಭಾ ಸದಸ್ಯರೂ ಮತ್ತು ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರೂ ಆದ ಪಟ್ಟಡ ರಂಜಿ ಪೂಣಚ್ಚ ಹಾಗೂ 8 ಮಂದಿ ಸದಸ್ಯರು ರಾಜ್ಯ ಹೈಕೋರ್ಟ್ ಮೊರೆ ಹೋಗಿದ್ದರು.

ಈ ಹಿಂದೆ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಬಿಜೆಪಿಯ ಜೂನ (ಸುನಿತಾ) ಕಾರ್ಯ ನಿರ್ವಹಿಸಿದ್ದರು. ಅವರ ಅಧಿಕಾರದ ಅವಧಿ ಮುಗಿದ ಬಳಿಕ ನೂತನ ಅಧ್ಯಕ್ಷರ ಆಯ್ಕೆಗೆ ಸಭೆಯನ್ನು ಕರೆಯಲಾಗಿತ್ತು. ಆದರೆ ಈ ಸಭೆಗೆ ಆಡಳಿತರೂಢ ಬಿಜೆಪಿ ಸದಸ್ಯರು ಬರದೆ ಗೈರಾದ ಕಾರಣ ಸಭೆ ಮುಂದೂಡಲಾಗಿತ್ತು. ಬಳಿಕ ನಡೆದ ಸಭೆಗಳಲ್ಲಿ ಈ ವಿಚಾರದ ಅಜೆಂಡವೇ ಇರಲಿಲ್ಲ, ಆಗ ಕಾಂಗ್ರೆಸ್ ಸದಸ್ಯರು ಸಭೆಯಲ್ಲಿ ಈ ಕುರಿತು ಗದ್ದಲ ಎಬ್ಬಿಸಿ ತಮಗೆ ಬಹುಮತವಿದ್ದು ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ ನೀಡುವಂತೆ ಒತ್ತಾಯಿಸಿದ್ದರು. ಆದರೂ ಈ ಆಯ್ಕೆಯನ್ನು ಬಿಜೆಪಿ ಮುಂದೂಡುತ್ತಾ ಬಂದಿತ್ತು.

ಇಲ್ಲಿ ಬಿಜೆಪಿಗೆ ಬಹುಮತ ಇಲ್ಲವಾದರೂ ಮತ್ತೆ ತನ್ನದೆ ಪಕ್ಷದ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಹಿಂಬಾಗಲಿನಿಂದ ಪ್ರಯತ್ನ ನಡೆಸುತ್ತಿರುವುದಾಗಿ ಪ್ರತಿಪಕ್ಷದವರು ಆರೋಪಿಸಿ ಕೋರ್ಟ್ ಮೊರೆ ಹೋಗಿದ್ದಾರೆ.

ಈ ನಡುವೆ ಇದೇ ವಿಚಾರವಾಗಿ ಕಾಂಗ್ರೆಸ್ ಸದಸ್ಯರು ಪುರಸಭೆ ಎದುರು ಪ್ರತಿಭಟನೆ ನಡೆಸಿದ್ದರು. ಇದೀಗ ಈ ವಿಚಾರದಲ್ಲಿ ಪ್ರತಿಪಕ್ಷದ ಸದಸ್ಯರು ರಾಜ್ಯ ಉಚ್ಚ ನ್ಯಾಯಾಲಯದ ಕದ ತಟ್ಟಿದ್ದು ಅಲ್ಲಿ ಯಾವ ಆದೇಶ ಬರಲಿದೆ ಎಂದು ಕಾದು ನೋಡಬೇಕಿದೆ.

## ಮಳೆ ಹಾನಿ ಪ್ರದೇಶಗಳಿಗೆ ಜು.24ರಂದು ಉಸ್ತುವಾರಿ ಸಚಿವ ನಾಗೇಶ್ ಭೇಟಿ



ಮಡಿಕೇರಿ ಜು.21– ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಸಿ.ನಾಗೇಶ್ ಅವರು ಜುಲೈ 24 ರಂದು ಕೊಡಗು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಗ್ಗೆ 9 ಗಂಟೆಗೆ ಕೊಡಗು ಜಿಲ್ಲೆಯ ಮಳೆ ಹಾನಿ ಪ್ರದೇಶಗಳ ವೀಕ್ಷಣೆ ಮಾಡಲಿದ್ದಾರೆ. ನಂತರ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಅವರು ತಿಳಿಸಿದ್ದಾರೆ. ಈ ವೇಳೆ ಶಾಸಕರುಗಳಾದ ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ ಸೇರಿದಂತೆ ಇನ್ನಿತರ ಜನಪ್ರತಿನಿಧಿಗಳು ಭಾಗವಹಿಸುವರು.

## ಟಿಪ್ಪುವಿನಿಂದ ಹತರಾದ ಕೊಡವ ಪೂರ್ವಜರಿಗೆ ದೇವಟ್ ಪರಂಬ್‌ನಲ್ಲಿ ಸಿಎನ್‌ಸಿ ಶ್ರದ್ಧಾಂಜಲಿ



ಮಡಿಕೇರಿ,ಜು.21– ಟಿಪ್ಪುವಿನಿಂದ ಹತರಾದ ಕೊಡವ ಪೂರ್ವಜರಿಗೆ ಕೊಡವ ನ್ಯಾಷನಲ್ ಕೌನ್ಸಿಲ್(ಸಿಎನ್‌ಸಿ) ಸಂಘಟನೆ ದೇವಟ್ ಪರಂಬ್‌ನಲ್ಲಿ ಶ್ರದ್ಧಾಂಜಲಿ ಸಲ್ಲಿಸಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದಲ್ಲಿ ಮಾಸಿಕ ಶ್ರದ್ಧಾಂಜಲಿ ಆಚರಣೆಯಂತೆ ಪುಷ್ಪ ನಮನ ಸಲ್ಲಿಸಲಾಯಿತು.

ಈ ಸಂದರ್ಭ ಮಾತನಾಡಿದ ನಾಚಪ್ಪ, ಕೊಡವ ಬುಡಕಟ್ಟು ಜನಾಂಗದವರಿಗೆ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಮತ್ತು ಎಸ್‌ಟಿ ಟ್ಯಾಗ್‌ನ್ನು ಪಡೆಯಲು ಕೊಡವ ಬುಡಕಟ್ಟು ಜನಾಂಗದ ಸಮಗ್ರ ಸಬಲೀಕರಣಕ್ಕಾಗಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸಂವಿಧಾನದ 25 ಮತ್ತು 26ನೇ ವಿಧಿಯ ಅಡಿಯಲ್ಲಿ ಕೊಡವ ಬುಡಕಟ್ಟು ಜನಾಂಗಕ್ಕೆ ಕೋವಿ ಹಕ್ಕಿಗೆ ಖಾತರಿ ನೀಡಬೇಕು. ಕೊಡವ ಥಕ್ ಅನ್ನು ಸಂವಿಧಾನದಲ್ಲಿ ಸೇರಿಸಬೇಕು ಮತ್ತು ವಿಶೇಷ ಜನಾಂಗೀಯ ಅಲ್ಪಸಂಖ್ಯಾತ ಗುರುತಿನ ಸ್ಥಾನಮಾನವನ್ನು ನೀಡಬೇಕು ಮತ್ತು ದೇವಟ್ ಪರಂಬ್‌ನಲ್ಲಿ ಹುತಾತ್ಮರ ಸ್ಮರಣೆಗಾಗಿ ಸ್ಮಾರಕವನ್ನು ನಿರ್ಮಿಸಬೇಕೆಂದು ನಾಚಪ್ಪ ಆಗ್ರಹಿಸಿದರು. ಸಿಎನ್‌ಸಿ ಪ್ರಮುಖರಾದ ಕಲಿಯಂಡ ಪ್ರಕಾಶ್, ಪಟ್ಟಮಾಡ ಕುಶ, ಅರೆಯಡ ಗಿರೀಶ್, ಮಂದಪಂಡ ಮನೋಜ್, ಚೇಯಬೆರ ಸತೀಶ್ ಮತ್ತಿತರರು ಹಾಜರಿದ್ದು ಪುಷ್ಪ ನಮನ ಸಲ್ಲಿಸಿದರು.

## ಕಾನೂನು ಬದ್ಧ ವ್ಯಾಪಾರ ಮಾಡಿದರೆ ಕಾನೂನು ರಕ್ಷಿಸುತ್ತದೆ

### ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ ಕರೆ



ಚಾಮರಾಜನಗರ, ಜು.21– ಬೀದಿಬದಿ ವ್ಯಾಪಾರಿಗಳು ಕಾನೂನು ಬದ್ಧವಾಗಿ ವ್ಯಾಪಾರ ಮಾಡಿದರೆ ಕಾನೂನು ಸಹ ನಿಮ್ಮನ್ನು ರಕ್ಷಿಸುತ್ತದೆ ಎಂದು ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಶ್ರೀಧರ್ ಸಲಹೆ ನೀಡಿದ್ದಾರೆ.

ನಗರದ ವರ್ತಕರ ಭವನದಲ್ಲಿಂದು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ಹಮ್ಮಿಕೊಂಡಿದ್ದ ಎರಡು ದಿನಗಳ ಸಾಮಾರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರವು ಬೀದಿಬದಿ ವ್ಯಾಪಾರಿಗಳಿಗೆ ನೀಡುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ತಮಗೆ ನೀಡುವ ವ್ಯಾಪಾರ ಪರವಾನಗಿಯನ್ನು ಮತ್ತೊಬ್ಬರಿಗೆ ನೀಡಿ ವ್ಯಾಪಾರ ಮಾಡಲು ಅನುವು ಮಾಡಿಕೊಡಬಾರದು. ಈ ನಿಟ್ಟಿನಲ್ಲಿ ನಿಮ್ಮ ವ್ಯಾಪಾರ ಕಾನೂನು ಬದ್ಧವಾಗಿರಬೇಕು. ವ್ಯಾಪಾರದ ಜೊತೆಗೆ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವಲ್ಲಿ ಸಹಕರಿಸಬೇಕು ಎಂದರು.

ಮಧ್ಯಮ ವರ್ಗದ ಜನರು ಬೀದಿಬದಿ ವ್ಯಾಪಾರಿಗಳನ್ನೇ ಹೆಚ್ಚು ಅವಲಂಬಿಸಿರುತ್ತಾರೆ. ಬಹುತೇಕ ವ್ಯಾಪಾರಿಗಳು ಸಾಲಕ್ಕೆ ಸಿಲುಕಿರುತ್ತಾರೆ. ಈ ನಿಟ್ಟಿನಲ್ಲಿ ಸರ್ಕಾರವು ಕಡಿಮೆ ಬಡ್ಡಿದರದಲ್ಲಿ ಕಿರುಸಾಲ ಯೋಜನೆ ಸೌಲಭ್ಯಗಳನ್ನು ತಂದಿದೆ. ವ್ಯಾಪಾರಿಗಳು ಕಾರ್ಯಾಗಾರದಲ್ಲಿ ಕಾನೂನು, ಬ್ಯಾಂಕ್ ವ್ಯವಹಾರಗಳ ಅರಿವನ್ನು ಪಡೆದು ಸದುಪಯೋಗಪಡೆದುಕೊಳ್ಳಬೇಕು ಎಂದು ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಶ್ರೀಧರ್ ಅವರು ಸಲಹೆ ಮಾಡಿದರು.

ಕೌಶಲ್ಯಾಭಿವೃದ್ಧಿ ಅಧಿಕಾರಿ ಮಹಮ್ಮದ್ ಅಕ್ಬರ್ ಅವರು ಮಾತನಾಡಿ, ಬೀದಿಬದಿ ವ್ಯಾಪಾರಿಗಳಿಗೆ ಈಗಾಗಲೇ ಮೊದಲನೇ ಹಂತದಲ್ಲಿ 10 ಸಾವಿರ ರೂ.ಗಳನ್ನು ಕಿರುಸಾಲ ಸೌಲಭ್ಯ ಯೋಜನೆಯಡಿ ನೀಡಲಾಗಿದೆ. ಅದನ್ನು ಮರುಪಾವತಿ ಮಾಡಿದವರು ಎರಡನೇ ಹಂತದಲ್ಲಿ 20 ಸಾವಿರ ರೂ.ಗಳನ್ನು ಪಡೆಯಬಹುದು. ವ್ಯಾಪಾರಿಗಳು ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿ ಮತ್ತಷ್ಟು ಸಾಲ ಪಡೆಯಲು ಅರ್ಹರಾಗಿ ಎಂದರು.

ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಕೆ.ಸುರೇಶ್ ಅವರು ಮಾತನಾಡಿ, ಬೀದಿಬದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ನೀಡುವಲ್ಲಿ ರಾಜ್ಯದಲ್ಲಿ ಚಾಮರಾಜನಗರ ಜಿಲ್ಲೆಯು ಎರಡನೇ ಸ್ಥಾನದಲ್ಲಿದೆ. ಸ್ವಸಹಾಯ ಸಂಘಗಳಿಗೆ ಸಾಲ ಒದಗಿಸುವುದರಲ್ಲಿಯೂ ಮೂರನೇ ಸ್ಥಾನದಲ್ಲಿದೆ. ಆರ್ಥಿಕ ನೆರವು ನೀಡುವಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಮತ್ತಷ್ಟು ಶ್ರಮ ವಹಿಸಿ ಮೊದಲನೇ ಸ್ಥಾನ ಪಡೆಯಲು ಮುಂದಾಗಲಿವೆ ಎಂದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಉಪನ್ಯಾಸನೀಡಿದವಕೀಲ ಎಸ್. ಮಂಜುನಾಥ್ ಮಾತನಾಡಿ, ಬೀದಿಬದಿ ವ್ಯಾಪಾರಿಗಳಿಗೆ ಸರ್ಕಾರ ಕಲ್ಪಿಸಿರುವ ವಿವಿಧ ಯೋಜನೆ ಸೌಲಭ್ಯ ಪಡೆಯಲು ಮಧ್ಯವರ್ತಿಗಳ ಮೊರೆ ಹೋಗಬಾರದು. ನೇರವಾಗಿ ಅಧಿಕಾರಿಗಳನ್ನೇ ಭೇಟಿ ಮಾಡಿ ಮಾಹಿತಿ ಪಡೆದುಕೊಳ್ಳಬೇಕು. ಮಧ್ಯವರ್ತಿಗಳ ಮೊರೆ ಹೋಗಿ ಹಣ ಕಳೆದುಕೊಳ್ಳಬೇಡಿ ಎಂದರು.

ಲೀಡ್ ಬ್ಯಾಂಕ್ ವ್ಯವಸ್ಥಾಪಕ ಸುರೇಖಾ, ನಗರಸಭೆ ಪೌರಾಯುಕ್ತ ಸಿ.ಎಂ. ನಟರಾಜು, ಸಮುದಾಯ ಸಂಘಟನಾಧಿಕಾರಿ ವೆಂಕಟನಾಯಕ್, ಕೌಶಲ್ಯಾಭಿವೃದ್ಧಿ ಇಲಾಖೆ ವ್ಯವಸ್ಥಾಪಕರು ಹಮ್ಜತ್ ಪಾಷ, ಪುಟ್ಟಸ್ವಾಮಿ, ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಜಿಎಸ್‌ಟಿ ವಿರೋಧಿಸಿ ರೈತರ ಪ್ರತಿಭಟನೆ



ಚಾಮರಾಜನಗರ.ಜು.21– ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ವಿಧಿಸಿರುವುದನ್ನು ವಿರೋಧಿಸಿ ರಾಜ್ಯ ರೈತ ಸಂಘದ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರು ಪ್ರತಿದಿನ ಬಳಕೆ ಮಾಡುವಂತಹ ಉಪಕರಣಗಳು, ರಸಗೊಬ್ಬರ, ಕ್ರಿಮಿನಾಶಕ, ಬಿತ್ತನೆ ಬೀಜಗಳು, ಆಹಾರ ಪದಾರ್ಥಗಳ ಮೇಲೆ ಅತ್ಯಧಿಕ ಪ್ರಮಾಣದ ಜಿಎಸ್ಟಿಯನ್ನು ವಿಧಿಸಿದ್ದು, ಇದರಿಂದಾಗಿ ರೈತರು ಹಾಗೂ ಸಾರ್ವಜನಿಕರಿಗೆ ಜೀವನ ನಡೆಸಲು ತೊಂದರೆಯಾಗುತ್ತದೆ ಎಂದರು.

ಖಾಸಗಿ ಫೈನಾನ್ಸ್‌ಗಳು ಮಹಿಳೆಯರಿಗೆ ನೀಡುವ ಸಾಲ ಸೌಲಭ್ಯವನ್ನು ಹೆಚ್ಚಿನ ಬಡ್ಡಿದರದಲ್ಲಿ ನೀಡುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ರೈತರ ಸಭೆಯನ್ನು ಕರೆಯುತ್ತಿಲ್ಲ ಎಂದು ಕಿಡಿಕಾರಿದರು. ಜನರ ಜೀವನ ಸುಧಾರಿಸಲು ಈ ಮೇಲಿನ ಎಲ್ಲ ವಸ್ತುಗಳ ಮೇಲೆ ವಿಧಿಸಿರುವ ಜಿಎಸ್ಟಿಯನ್ನು ರದ್ದುಪಡಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಗೂ ಮೊದಲು ಇತ್ತೀಚೆಗೆ ನಿಧನರಾದ ರೈತ ಚೆನ್ನಬಸಪ್ಪ ಹಾಗೂ ರೈತ ಹುತಾತ್ಮರ ದಿನಾಚರಣೆ ಅಂಗವಾಗಿ ಒಂದು ನಿಮಿಷಗಳ ಕಾಲ ಮೌನಾಚರಣೆಯನ್ನು ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ರೈತ ಸಂಘದ ಮುಖಂಡರಾದ ಮಾಡ್ರಹಳ್ಳಿ ಮಹದೇವಪ್ಪ, ಮಂಜುನಾಥ್, ವಿಜಿ ಹೆಗ್ಗೋಠಾರ, ಚಂಗಡಿ ಕರಿಯಪ್ಪ, ಮಹೇಶ್, ಮಹದೇವಸ್ವಾಮಿ, ಕುಮಾರ್, ಬೋರಮ್ಮ, ಚಿಕ್ಕೇಣಮ್ಮ, ಪಾರ್ವತಮ್ಮ, ಚಿಕ್ಕಮಾದಮ್ಮ, ಬಸಲಿಂಗಮ್ಮ, ಚೆನ್ನಮಲ್ಲಪ್ಪ, ಪುಟ್ಟರಾಜು, ಪೃಥ್ವಿ ಸೇರಿದಂತೆ ಇತರರು ಭಾಗವಹಿಸಿದ್ದರು.

## ಸರ್ಕಲ್ ಇನ್‌ಸ್ಪೆಕ್ಟರ್ ವರ್ಗಾವಣೆ ರದ್ದಿಗೆ ಆಗ್ರಹಿಸಿ ಇಂದು ಪ್ರತಿಭಟನೆ



ಕೊಳ್ಳೇಗಾಲ, ಜು.21– ಚಾಮರಾಜನಗರ ಗ್ರಾಮಾಂತರ ಠಾಣೆಯ ವೃತ್ತ ನಿರೀಕ್ಷಕ ಪುಟ್ಟಸ್ವಾಮಿ ಅವರ ವರ್ಗಾವಣೆಯನ್ನು ರದ್ದುಗೊಳಿಸಿ ಅವರನ್ನು ಅದೇ ಸ್ಥಳ ಇಲ್ಲವೇ ಜಿಲ್ಲೆಯ ಯಾವುದೇ ಭಾಗಕ್ಕಾದರೂ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿ ಪುಟ್ಟಸ್ವಾಮಿ ಅಭಿಮಾನಿ ಬಳಗ ಜು.22ರಂದು ಉಪವಿಭಾಗಾಧಿಕಾರಿಗಳ ಕಚೇರಿ ಮುಂಭಾಗ ಸಾಂಕೇತಿಕ ಧರಣಿ ನಡೆಸ ಲಿದೆ ಎಂದು ರೈತ ಹೋರಾಟಗಾರ ಅಣಗಳ್ಳಿ ಬಸವರಾಜು ತಿಳಿಸಿದ್ದಾರೆ.

ಪತ್ರಕರ್ತರ ಸಂಘದಲ್ಲಿ ಪುಟ್ಟಸ್ವಾಮಿ ಅಭಿಮಾನಿ ಬಳಗ ಕರೆಯಲಾಗಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪುಟ್ಟಸ್ವಾಮಿ ಅವರು ಉತ್ತಮ, ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿ. ಜಿಲ್ಲೆಯಲ್ಲಿ ಅವರ ಸೇವೆಯ ಅವಶ್ಯಕತೆ ಇದೆ. ಹಾಗಾಗಿ ಅವರನ್ನು ಸರ್ಕಾರ ಮುಂದುವರೆಸಬೇಕು, ಇವರ ವರ್ಗಾವಣೆಯಲ್ಲಿ ರಾಜಕೀಯ ಒತ್ತಡ ಇದ್ದರೆ ಅದರ ಪರಿಣಾಮವನ್ನು ಮಾಡಿಸಿದಂತಹವರು ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಪುಟ್ಟಸ್ವಾಮಿ ಅವರು ಕೋವಿಡ್ ವೇಳೆ ಜನರಿಗೆ ಮಾಡಿದ ಸೇವೆ ಅವಿಸ್ಮರಣೀಯ, ಸತತವಾಗಿ ಆಹಾರ ಕಿಟ್, ಆಂಬುಲೆನ್ಸ್, ಬಡವರಿಗೆ ನೆರವು, ಆರ್ಥಿಕ ಸಹಾಯ ಸೇರಿದಂತೆ ಅನೇಕ ಸಮಾಜ ಸೇವಾ ಕಾರ್ಯಕ್ರಮ ನಡೆಸಿದ್ದರು.

ಇವರ ಸೇವೆ ಕಂಡು ಅವರ ಅಭಿಮಾನಿ ಬಳಗ ಜಿಲ್ಲೆಯಲ್ಲಿ ಹುಟ್ಟಿಕೊಂಡಿದೆ. ಹಾಗಾಗಿ ನಾವು ಅಭಿಮಾನಿ ಬಳಗದ ಪರವಾಗಿ ಈ ಪ್ರತಿಭಟನೆ ನಡೆಸುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಮುಳ್ಳೂರು ಗ್ರಾಪಂ ಅಧ್ಯಕ್ಷೆ ರುಕ್ಕಮ್ಮ, ಉತ್ತಂಬಳ್ಳಿ ಲಿಂಗಣ್ಣ, ಕಾರು ಚಾಲಕರ ಸಂಘದ ಅಧ್ಯಕ್ಷ ಮನು, ಬಿಜೆಪಿ ಹಿರಿಯ ನಾಯಕಿ ಉಷಾರಾಣಿ ಇನ್ನಿತರರು ಉಪಸ್ಥಿತರಿದ್ದರು.

## ಜು.26ರಂದು ನಗರದಲ್ಲಿ ಮಿನಿ ಉದ್ಯೋಗ ಮೇಳ

ಚಾಮರಾಜನಗರ, ಜು.21– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮಿನಿ ಉದ್ಯೋಗ ಮೇಳವನ್ನು ಜುಲೈ 26 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಯೋಜಿಸಲಾಗಿದೆ.

ಎಸ್.ಎಸ್.ಎಲ್.ಸಿ ಉತ್ತೀರ್ಣ ಹಾಗೂ ಅನುತ್ತೀರ್ಣರಾದವರು, ಪಿಯುಸಿ, ಯಾವುದೇ ಪದವಿ, ಐಟಿಐ, ಡಿಪ್ಲೊಮೊ ವಿದ್ಯಾರ್ಹತೆ ಹೊಂದಿರುವ 18 ರಿಂದ 30ರ ವಯೋಮಿತಿಯ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು.

ಅಭ್ಯರ್ಥಿಗಳು ಸ್ವವಿವರ (ಬಯೋಡೇಟಾ), ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು. ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಜಿಲ್ಲಾ ಉದ್ಯೋಗ ಅಧಿಕಾರಿಯವರನ್ನು ಸಂಪರ್ಕಿಸಬಹುದು. ಅಲ್ಲದೇ ದೂ.ಸಂ.08226–224430, ಮೊ.ಸಂ.8884865299 ಸಂಪರ್ಕಿಸಿ ಕೂಡ ವಿವರ ಪಡೆಯಬಹುದೆಂದು ಜಿಲ್ಲಾ ಉದ್ಯೋಗಾಧಿಕಾರಿ ಎ.ಮಹಮ್ಮದ್ ಅಕ್ಬರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಾಮುಲ್‌ನಿಂದ ಫಲಾನುಭವಿಗಳಿಗೆ ಸವಲತ್ತು ವಿತರಣೆ



ಗುಂಡ್ಲುಪೇಟೆ, ಜು.21– ಚಾಮುಲ್ ರೈತರ ಏಳಿಗೆಗೆ ಅವಿರತವಾಗಿ ಶ್ರಮಿಸುತ್ತಿದ್ದು, ಒಕ್ಕೂಟ ನೀಡುವ ಸವಲತ್ತನ್ನು ಸದುಪ ಯೋಗಪಡಿಸಿಕೊಳ್ಳುವಂತೆ ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡಪ್ರಸಾದ್ ತಿಳಿಸಿದ್ದಾರೆ.

ಪಟ್ಟಣದ ಚಾಮುಲ್ ಉಪಕಚೇರಿಯಲ್ಲಿ ಏರ್ಪಡಿಸಲಾಗಿದ್ದ ಸವಲತ್ತು ವಿತರಣಾ ಕಾರ್ಯಕ್ರಮದಲ್ಲಿ ಅರ್ಹ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಿ ಮಾತನಾಡಿದರು.

ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟವು ತಾಲೂಕಿನ ಹಾಲು ಉತ್ಪಾದಕರ ಸಂಘಗಳ ಫಲಾನುಭವಿಗಳಿಗೆ ಶೇಕಡ 50 ರಷ್ಟು ಅನುದಾನದಲ್ಲಿ 1180 ರಬ್ಬರ್ ಮ್ಯಾಟ್ ಹಾಗೂ 55 ಮೇವು ತುಂಡರಿಸುವ ಯಂತ್ರಗಳನ್ನು ವಿತರಿಸುತ್ತಿದೆ ಎಂದರು.

ಈ ವೇಳೆ ಚಾಮುಲ್ ನಿರ್ದೇಶಕ ಮೂಡುಗೂರು ಎಂ.ಪಿ.ಸುನಿಲ್, ಸಹಾಯಕ ವ್ಯವಸ್ಥಾಪಕ ಜಿ.ಪ್ರಭು, ವಿಸ್ತರಣಾಧಿಕಾರಿಗಳಾದ ಹೆಚ್.ಪ್ರಕಾಶ್, ಸಿದ್ದಲಿಂಗೇಶ್, ರಂಜಿತಾ, ಕಾರ್ಯದರ್ಶಿಗಳಾದ ಮೃತ್ಯುಂಜಯ, ಮಹೇಂದ್ರ ಪಡಗೂರು ನಾಗೇಶ್, ಗುರುವಿನಪುರ ನಾಗೇಶ್, ಫಲಾನುಭವಿಗಳಾದ ಶಂಕರ ನಾರಾಯಣ ಜೋಯಿಸ್, ಹೆಚ್.ಎಂ. ರಮೇಶ್‌ಕುಮಾರ್ ಸೇರಿದಂತೆ ಸಮಾಲೋಚಕರು, ಸಂಘಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

## ಸಾಧನ ಸಲಕರಣೆ ಸೌಲಭ್ಯಕ್ಕಾಗಿ ತಪಾಸಣಾ ಶಿಬಿರ

ಚಾಮರಾಜನಗರ, ಜು.21– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಭಾರತ ಸರ್ಕಾರದ ಆಲಿಂಕೋ ಸಂಸ್ಥೆಯ ಸಹಯೋಗದೊಂದಿಗೆ ಚಾಮರಾಜನಗರ ತಾಲೂಕು ವ್ಯಾಪ್ತಿಯ ವಿಕಲಚೇತನರಿಗೆ ಮತ್ತು 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಅಗತ್ಯವಿರುವ 32 ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ವಿತರಿಸುವ ಸಂಬಂಧ ಜುಲೈ 22ರಂದು ಬೆಳಿಗ್ಗೆ 9.30 ಗಂಟೆಯಿಂದ ಸಂಜೆಯವರೆಗೆ ನಗರದ ಪ್ರವಾಸಿ ಮಂದಿರ ಮುಂಭಾಗ ಇರುವ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ.

ಸಾಧನ ಸಲಕರಣೆಗಳು ಅಗತ್ಯವಿರುವ ವಿಕಲಚೇತನರು ಮತ್ತು ಹಿರಿಯ ನಾಗರಿಕರು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಇತ್ತೀಚಿನ ಭಾವಚಿತ್ರ ಮತ್ತು ವಿಕಲಚೇತನರ ಪ್ರಮಾಣ ಪತ್ರ (ಯುಡಿಐಡಿ ಕಾರ್ಡ್)ಗಳೊಡನೆ ಶಿಬಿರದಲ್ಲಿ ಭಾಗವಹಿಸುವಂತೆ ಚಾಮರಾಜನಗರ ತಾಲೂಕು ತಹಶೀಲ್ದಾರ್ ಹಾಗೂ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಇಂದು ಜಿಲ್ಲಾ ಪಂಚಾಯತ್ ಮಾಸಿಕ ಕೆಡಿಪಿ ಸಭೆ

ಚಾಮರಾಜನಗರ, ಜು.21– ಜಿಲ್ಲಾ ಪಂಚಾಯತ್ ಮಾಸಿಕ ಕೆಡಿಪಿ ಸಭೆಯು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮತ್ತು ಜಿಲ್ಲಾ ಪಂಚಾಯತ್ ಆಡಳಿತ ಅಧಿಕಾರಿಗಳಾದ ಬಿ.ಬಿ. ಕಾವೇರಿ ಅವರ ಅಧ್ಯಕ್ಷತೆಯಲ್ಲಿ ಜು.22 ರಂದು ಬೆಳಗ್ಗೆ 11.30 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಲ್ಲಿಗಮ್ಮ ನಿಧನ



ಚಾಮರಾಜನಗರ, ಜು.21 – ನಗರದ ರಾಮಸಮುದ್ರದ ಹಳ್ಳದ ಬೀದಿ ನಿವಾಸಿ ಲೇಟ್ ಬಸವಲಿಂಗಪ್ಪ ಉರುಫ್ ಪುಟ್ಟಣ್ಣ ಅವರ ಪತ್ನಿ ಮಲ್ಲಿಗಮ್ಮ (64) ಅವರು ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಪುತ್ರ ಪತ್ರಕರ್ತ ಬಾಬು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಗುರುವಾರ ಸಂಜೆ ರಾಮಸಮುದ್ರದ ವೀರಶೈವ–ಲಿಂಗಾಯಿತ ರುದ್ರಭೂಮಿಯಲ್ಲಿ ನಡೆಯಿತು.

ಒಂದನೇ ಪುಟದಿಂದ

## ದ್ರೌಪದಿ ಮುರ್ಮು

ಅಸ್ಸಾಂನಲ್ಲಿ 22, ಜಾರ್ಖಂಡ್ ನಲ್ಲಿ 10, ಮಹಾರಾಷ್ಟ್ರದಲ್ಲಿ 16, ಮಧ್ಯಪ್ರದೇಶದಲ್ಲಿ 19, ಗುಜರಾತ್‌ನಲ್ಲಿ 10 ಶಾಸಕರು ಸೇರಿದಂತೆ ಒಟ್ಟು 12 ರಾಜ್ಯಗಳಿಂದ 17 ಸಂಸದರು ಹಾಗೂ 104 ಶಾಸಕರು ಅಡ್ಡ ಮತ ದಾನ ಮಾಡಿದ್ದು, ಮುರ್ಮು ಅವರ ಗೆಲುವಿನ ಅಂತರ ಹೆಚ್ಚಾಗಲು ಕಾರಣವಾಗಿದೆ. ಫಲಿತಾಂಶ ಘೋಷಣೆಯಾಗುತ್ತಿದ್ದಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರು ದ್ರೌಪದಿ ಮುರ್ಮು ಅವರನ್ನು ಅಭಿನಂದನೆ ಸಲ್ಲಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, ದ್ರೌಪದಿ ಮುರ್ಮು ಅವರ ಜೀವನ, ಅವರ ಆರಂಭಿಕ ಹೋರಾಟಗಳು, ಅವರ ಶ್ರೀಮಂತ ಸೇವೆ ಮತ್ತು ಅವರ ಅನು ಕರಣೀಯ ಯಶಸ್ಸು ಪ್ರತಿಯೊಬ್ಬ ಭಾರತೀಯರಿಗೆ ಸ್ಫೂರ್ತಿ ನೀಡುತ್ತದೆ. ಅವರು ನಮ್ಮ ನಾಗರಿಕರಿಗೆ, ವಿಶೇಷವಾಗಿ ಬಡವರು, ಕೆಳವರ್ಗದಲ್ಲಿರುವವರು ಮತ್ತು ದೀನದಲಿತರಿಗೆ ಭರವಸೆಯ ದಾರಿ ದೀಪವಾಗಿ ಹೊರಹೊಮ್ಮಿದ್ದಾರೆ. ದ್ರೌಪದಿ ಮುರ್ಮು ಅವರು ಅತ್ಯುತ್ತಮ ಶಾಸಕರು ಮತ್ತು ಸಚಿವರಾಗಿದ್ದರು. ಜಾರ್ಖಂಡ್‌ನ ರಾಜ್ಯಪಾಲರಾಗಿದ್ದ ಅವರ ಅವಧಿ ಅದ್ಭುತವಾಗಿತ್ತು. ಅವರು ಭಾರತದ ಅಭಿವೃದ್ಧಿ ಪಯಣವನ್ನು ಬಲಪಡಿ ಸುವ ಅತ್ಯುತ್ತಮ ರಾಷ್ಟ್ರಪತಿಯಾಗುತ್ತಾರೆ ಎಂದು ನನಗೆ ಖಾತ್ರಿಯಿದೆ. ಪಕ್ಷಾತೀತವಾಗಿ ದ್ರೌಪದಿ ಮುರ್ಮು ಅವರ ಉಮೇದು ವಾರಿಕೆಯನ್ನು ಬೆಂಬಲಿಸಿದ ಎಲ್ಲ ಸಂಸದರು ಮತ್ತು ಶಾಸಕರಿಗೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ಅವರ ದಾಖಲೆಯ ಗೆಲುವು ನಮ್ಮ ಪ್ರಜಾ ಪ್ರಭುತ್ವಕ್ಕೆ ಶುಭವನ್ನು ಸೂಚಿಸುತ್ತದೆ ಎಂದು ಪ್ರಧಾನಿ ಮೋದಿ ತಿಳಿಸಿ ದ್ದಾರೆ. ದ್ರೌಪದಿ ಮುರ್ಮು ಗೆಲುವು ಸಾಧಿಸುತ್ತಿದ್ದಂತೆಯೇ ದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಅವರನ್ನು ಅಭಿನಂದಿಸಲಾಯಿತು.

## ಪ್ರಾಮಾಣಿಕತೆಯ ಪ್ರತಿರೂಪ

ಧ್ಯಾನ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಶ್ಯಾಮ್ ಚರಣ್ ಮುರ್ಮು ಎಂಬ ಬ್ಯಾಂಕ್ ಉದ್ಯೋಗಿಯನ್ನು ವಿವಾಹವಾಗಿದ್ದು, 2014ರಲ್ಲಿ ಅವರು ಹೃದಯಾಘಾತದಿಂದ ನಿಧನ ಹೊಂದಿದ್ದರು. ಮುರ್ಮು ಅವರ ಓರ್ವ ಮಗ ನಿಗೂಢ ರೀತಿಯಲ್ಲಿ ಮೃತಪಟ್ಟಿದ್ದರೆ, ಮತ್ತೋರ್ವ ಮಗ ರಸ್ತೆ ಅಪಘಾತದಲ್ಲಿ ಮೃತಪಟ್ಟರು. ಮುರ್ಮು ಅವರ ಪುತ್ರಿ ಇತಶ್ರೀ ರಗ್ಬಿ ಆಟಗಾರ ಗಣೇಶ್ ಹೆಂಬ್ರಮ್ ಅವರನ್ನು ವಿವಾಹವಾಗಿ ಭುವನೇಶ್ವರದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ವೊಂದರ ಉದ್ಯೋಗಿಯಾಗಿದ್ದಾರೆ.

**ಮುರ್ಮು ಅಭಿನಂದಿಸಿದ ಯಶವಂತ್ ಸಿನ್ಹಾ:** ದ್ರೌಪದಿ ಮುರ್ಮು ಅವರನ್ನು ಯಶವಂತ್ ಸಿನ್ಹಾ ಅಭಿನಂದನೆ ಸಲ್ಲಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಸಿನ್ಹಾ, 2022ರ ರಾಷ್ಟ್ರಪತಿ ಚುನಾವಣೆಯಲ್ಲಿ ದ್ರೌಪದಿ ಮುರ್ಮು ಅವರ ಗೆಲುವಿಗೆ ಅಭಿನಂದಿಸುತ್ತೇನೆ. ಅವರ ಗೆಲುವಿನ ಸಂಭ್ರಮಾಚರಣೆಯಲ್ಲಿ ದೇಶದ ನಾಗರಿಕರೊಂದಿಗೆ ನಾನೂ ಸೇರಿದ್ದೇನೆ. 15 ನೇ ರಾಷ್ಟ್ರಪತಿಯಾಗಿ ಅವರು ಯಾವುದೇ ಭಯ ಅಥವಾ ಪಕ್ಷಪಾತವಿಲ್ಲದೆ ಸಂವಿಧಾನದ ಪಾಲಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಭಾರತ ಭಾವಿಸುತ್ತದೆ ಎಂದು ತಿಳಿಸಿದ್ದಾರೆ.

## ದಸರಾ ಬಹಿಷ್ಕಾರ

ಮಾತ್ರ ನೀಡಲಾಗುತ್ತದೆ. ಆದರೆ ಅಂಬಾರಿ ಕಟ್ಟಲು ಬರುವ ತಂಡದವರ ಐದಾರು ದಿನಗಳ ಕೆಲಸಕ್ಕೆ 10 ಸಾವಿರ ರೂ. ನೀಡುವ ಮೂಲಕ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ ಎಂದು ಆಪಾದಿಸಿರುವ ಮಾವುತರು ಮತ್ತು ಕಾವಾಡಿಗರು ದಸರಾ ಮಹೋತ್ಸವದಲ್ಲಿ ಭಾಗವಹಿಸುವ ನಮಗೆ ಹೆಚ್ಚುವರಿಯಾಗಿ ನೀಡುವ ಹಣವನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿದರು. ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಮಾವುತರು, ಕಾವಾಡಿಗರಿಗೆ ಬೆಲೆ ಇರುತ್ತದೆ, ಚೆನ್ನಾಗಿ ನೋಡಿಕೊಳ್ಳುತ್ತಾರೆ. ನಂತರ ನಮ್ಮನ್ನು ಕಡೆಗಣಿಸಲಾಗುತ್ತಿದೆ ಎಂದು ದೂರಿದರು.

ನಮ್ಮ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವವರೆಗೂ ನಾವು ದಸರಾ ಮಹೋತ್ಸವದಲ್ಲಿ ಭಾಗವಹಿಸುವುದಿಲ್ಲ ಎಂದು ದುಬಾರೆ ಸಾಕಾನೆ ಶಿಬಿರದ ಅಧ್ಯಕ್ಷ ಮತ್ತು ಕರ್ನಾಟಕ ಮಾವುತರು ಮತ್ತು ಕಾವಾಡಿಗಳ ಸಂಘದ ರಾಜ್ಯ ಉಪಾಧ್ಯಕ್ಷರೂ ಆದ ಕಾವೇರಿ ಆನೆಯ ಮಾವುತ ಜೆ.ಕೆ.ಡೋಬಿ, ಮತ್ತೀಗೋಡು ಸಾಕಾನೆ ಶಿಬಿರದ ಅಧ್ಯಕ್ಷರು ಮತ್ತು ಅಭಿಮನ್ಯು ಆನೆಯ ಮಾವುತ ವಸಂತ ತಿಳಿಸಿದ್ದಾರೆ.

## ಮನೆ ನಿರ್ಮಾಣಕ್ಕೆ ನಾಳೆ ಶಂಕುಸ್ಥಾಪನೆ

**ಜು.23 ರಂದು ಶಂಕುಸ್ಥಾಪನೆ:** ಮಂಡಕಳ್ಳಿ ವಿಮಾನ ನಿಲ್ದಾಣದ ಹಿಂಭಾಗ ದಡದಹಳ್ಳಿ ರಸ್ತೆಯಲ್ಲಿ ಖರೀದಿಸಲಾಗಿರುವ ಭೂಮಿಯಲ್ಲಿ ಜು.23ರಂದು ಸಂಜೆ 4 ಗಂಟೆಗೆ 2446 ಮನೆಗಳ ನಿರ್ಮಾಣಕ್ಕೆ ವಸತಿ ಸಚಿವ ವಿ.ಸೋಮಣ್ಣ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಸಂಸದರಾದ ಸುಮಲತಾ ಅಂಬರೀಷ್, ವಿ.ಶ್ರೀನಿವಾಸ ಪ್ರಸಾದ್, ಮೇಯರ್ ಸುನಂದಾ ಪಾಲನೇತ್ರ, ಶಾಸಕರು, ವಿಧಾನಪರಿಷತ್ ಸದಸ್ಯರು, ಪಾಲಿಕೆ ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದರು. ಗುಣಮಟ್ಟ ಕಾಯ್ದುಕೊಂಡು ಮನೆ ನಿರ್ಮಾಣ ಕಾಮಗಾರಿಯನ್ನು ಒಂದೂವರೆ ವರ್ಷದೊಳಗೆ ಪೂರ್ಣಗೊಳಿಸಿ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು. ಅಲ್ಲದೇ, ನೂತನವಾಗಿ ಕಟ್ಟಲಾದ ಮನೆಗಳಿಗೆ ಮೂಲಭೂತ ಸೌಲಭ್ಯವನ್ನೂ ಕಲ್ಪಿಸುವುದರಿಂದ ಫಲಾನುಭವಿಗಳು ಹೊಸ ಮನೆಯಲ್ಲಿ ಜೀವನ ಸಾಗಿಸಲು ಸಹಕಾರಿಯಾಗಲಿದೆ. ಯಾವುದೇ ಕೊರತೆ ಉಂಟಾಗದಂತೆ ನೋಡಿಕೊಳ್ಳಲಾಗುವುದು. ಫಲಾನುಭವಿಗಳು ಸರ್ಕಾರ ನಿಗದಿಪಡಿಸಿದ ಹಣವನ್ನು ಹೊರತುಪಡಿಸಿ ಹೆಚ್ಚುವರಿ ಮೊತ್ತವನ್ನು ಫಲಾನುಭವಿಗಳು ಯಾರಿಗೂ ನೀಡಬಾರದು. ಕೆಲವರು ಮನೆ ಕೊಡಿಸುವ ಭರವಸೆ ನೀಡಿ ಜನರಿಂದ ಹಣ ವಸೂಲಾತಿ ಮಾಡುತ್ತಿದ್ದು, ಯಾರು ಸಹ ಆಮಿಷಗಳಿಗೆ ಒಳಗಾಗಿ ಹಣ ನೀಡಬೇಡಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ ಹಾಗೂ ಪಾಲಿಕೆ ಸದಸ್ಯರು ಇದ್ದರು.

## ಕ್ರಮಕ್ಕೆ ಜಿಟಿಡಿ ಸೂಚನೆ

ಮನೆಗಳಲ್ಲಿ ವಾಸ ಮಾಡುತ್ತಿರಲಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡ ಕೆಲವರು ಅದೇ ಹೆಸರಿನ ಬೇರೊಬ್ಬರಿಗೆ ಮನೆಯನ್ನು ಖಾತೆ ಮಾಡಿಕೊಟ್ಟಿರುವುದು ಬೆಳಕಿಗೆ ಬಂದಿದೆ. ನಗರದಲ್ಲಿ ವಿವಿಧ ಆಶ್ರಯ ಬಡಾವಣೆಗಳಲ್ಲಿ ಈ ರೀತಿ ಸಾಕಷ್ಟು ಪ್ರಕರಣಗಳು ನಡೆದಿರುವ ಸಾಧ್ಯತೆ ಇದೆ. ಹಾಗಾಗಿ ತನಿಖೆ ನಡೆಸುವಂತೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು. ನೈಜ ಫಲಾನುಭವಿಯ ಹೆಸರು, ನಕಲಿ ಫಲಾನುಭವಿಯ ಹೆಸರು ಒಂದೇ ರೀತಿ ಇರುವ ಹಿನ್ನೆಲೆಯಲ್ಲಿ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಸುಲಭವಾಗಿ ನಕಲಿ ವ್ಯಕ್ತಿಗೆ ಖಾತೆ ಮಾಡಿಕೊಡಲಾಗುತ್ತಿದೆ ಎಂದರು. ರಾಜರಾಜೇಶ್ವರಿ ಆಶ್ರಯ ಬಡಾವಣೆಯಲ್ಲಿ 20X30 ನಿವೇಶನದ ಬೆಲೆ 25 ಲಕ್ಷ ರೂ.ವರೆಗೆ ಇದೆ. ಹೀಗಾಗಿ ಕೆಲವು ಫಲಾನುಭವಿಗಳಿಗೆ ಬೆದರಿಕೆಯೊಡ್ಡಿ ಅವರನ್ನು ಆಶ್ರಯ ಮನೆಯಿಂದ ಖಾಲಿ ಮಾಡಿಸಿ, ನಕಲಿ ಫಲಾನುಭವಿಗಳ ಹೆಸರಿಗೆ ಖಾತೆ ಮಾಡಿಕೊಡಲಾಗುತ್ತಿದೆ. ಈ ಕುರಿತು ತನಿಖೆ ನಡೆಸಿ ನೈಜ ಫಲಾನುಭವಿಗಳಿಗೆ ಮನೆ ದೊರೆಯುವಂತೆ ಮಾಡಬೇಕು ಎಂದರು.

## ಪರೀಕ್ಷಾರ್ಥ ಸ್ಫೋಟ

ಅಂಡ್ ಫ್ಯೂಯೆಲ್ ರೀಸರ್ಚ್ (CIMFR) ಸಂಸ್ಥೆಗಳ ವಿಜ್ಞಾನಿ ಗಳ ತಂಡವು ಜುಲೈ 25ರಿಂದ 31ರವರೆಗೆ ಕೆಆರ್‌ಎಸ್ ಅಣೆಕಟ್ಟೆ ಸಮೀಪದ ಕಲ್ಲು ಗಣಿ ಪ್ರದೇಶಗಳಲ್ಲಿ ಪರೀಕ್ಷಾರ್ಥ ಸ್ಫೋಟ ನಡೆಸುತ್ತಿರುವುದನ್ನು ಮಂಡ್ಯ ಡಿಸಿ ಅಶ್ವತಿ ದೃಢಪಡಿಸಿದ್ದಾರೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಪರೀಕ್ಷಾರ್ಥ ಸ್ಫೋಟ ಪ್ರಕ್ರಿಯೆಗೆ ಅಗತ್ಯ ನೆರವು ನೀಡುತ್ತಿದ್ದು, ಸಕಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಇಲಾಖೆ ಹಿರಿಯ ಭೂ ವಿಜ್ಞಾನಿ ಪದ್ಮಜ ಅವರು ತಿಳಿಸಿದ್ದಾರೆ.

## ಬೆಂಗಳೂರಲ್ಲಿ ಕಾಂಗ್ರೆಸ್ ಪ್ರತಿಭಟನೆ

ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿ, ರಾಜಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿ, ಬಂಧನಕ್ಕೆ ಒಳಗಾದರು. ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ವಿಪಕ್ಷ ನಾಯಕ ಸಿದ್ದರಾಮಯ್ಯ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಇಡಿ, ಐಟಿ ಸಂಸ್ಥೆಗಳು ದುರ್ಬಳಕೆಯಾಗದಂತೆ ಕಾನೂನು ತಿದ್ದುಪಡಿ ತರಲಾಗುವುದು ಎಂದರು. ಕೇಂದ್ರ ಸರ್ಕಾರ ಈ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಮೋದಿ ಅವರನ್ನು ಪ್ರಧಾನಿಯಾಗಿ ಮುಂದುವರೆಯಲು ಬಿಟ್ಟರೆ ಮುಂದೊಂದು ದಿನ ಶ್ರೀಲಂಕಾ ಎದುರಿಸುತ್ತಿರುವಂತಹ ಸಮಸ್ಯೆ ನಮ್ಮ ದೇಶಕ್ಕೂ ಬರಲಿದೆ ಎಂದು ಎಚ್ಚರಿಕೆ ನೀಡಿದರಲ್ಲದೇ, ತ್ಯಾಗ ಮಾಡುವುದು ಸುಲಭವಲ್ಲ. ಬೇಕಾದರೆ ಭಾಷಣ ಮಾಡಬಹುದಷ್ಟೇ. ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ತ್ಯಾಗ ಮಾಡಿದ್ದಾರೆ. ನರೇಂದ್ರ ಮೋದಿ ಯಾವತ್ತಾದರೂ ತ್ಯಾಗ ಮಾಡಿದ್ದಾರಾ ಎಂದು ಪ್ರಶ್ನಿಸಿದರು.


ಸೋನಿಯಾ, ರಾಹುಲ್, ಖರ್ಗೆ ವಿರುದ್ಧ ಯಾವುದೇ ಪ್ರಕರಣಗಳಿಲ್ಲ. ಅಕ್ರಮ ಹಣ ವರ್ಗಾವಣೆಯಾಗಿಲ್ಲ. ಆ ಸಂಬಂಧ ಎಫ್‌ಐಆರ್ ಕೂಡ ಆಗಿಲ್ಲ. ಆದರೆ ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ. ನಮ್ಮನ್ನು ಕುಗ್ಗಿಸುವ ಸಲುವಾಗಿ ಇಡಿ, ಐಟಿ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಕಿರುಕುಳ ನೀಡುತ್ತಿದ್ದಾರೆ. ಆದರೆ ಅದರಿಂದ ಕಾಂಗ್ರೆಸ್ಸಿಗರನ್ನು ಏನೂ ಮಾಡಲು ಸಾಧ್ಯವಿಲ್ಲ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಇಡಿ, ಐಟಿ, ಸಿಬಿಐ ಯಾವುದೇ ಬರಲಿ ನಮ್ಮ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯನ್ನು ಮುಟ್ಟಲು ಸಾಧ್ಯವಿಲ್ಲ. ಇಡಿ ವಿಚಾರಣೆ ನಂತರವೂ ರಾಹುಲ್ ಗಾಂಧಿ ಕುಗ್ಗಿಲ್ಲ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ. ಪಕ್ಷಕ್ಕೆ ಕಾರ್ಯಕರ್ತರು ನೀಡಿದ ಹಣವನ್ನು ದೆಹಲಿಗೆ ಕಳುಹಿಸುತ್ತೇವೆ. ಅದೇ ರೀತಿ ನ್ಯಾಷನಲ್ ಹೆರಾಲ್ಡ್ ಸಂಸ್ಥೆ ಉಳಿಸಲು ಅಲ್ಲಿ ಕೆಲಸ ಮಾಡುತ್ತಿದ್ದವರಿಗೆ ವೇತನ ನೀಡಲು ಕಾಂಗ್ರೆಸ್ಸಿಗರೆಲ್ಲಾ ಸೇರಿ ದೇಣಿಗೆ ರೂಪದಲ್ಲಿ ಹಣ ನೀಡಿದ್ದೇವೆ. ಆಗ ಸುಬ್ರಮಣಿಯನ್ ಸ್ವಾಮಿ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದರು. ಆಯೋಗವು ಇದರಲ್ಲಿ ಏನೂ ತಪ್ಪಿಲ್ಲ ಎಂದು ತಿಳಿಸಿತ್ತು. ಆದಾಯ ತೆರಿಗೆ ಇಲಾಖೆಯೂ ಕೂಡ ತಪ್ಪು ನಡೆದಿಲ್ಲ ಎಂದಿತ್ತು. ಸಂಸತ್‌ನಲ್ಲಿ ಅರುಣ್ ಜೇಟ್ಲಿ ಅವರು ನ್ಯಾಷನಲ್ ಹೆರಾಲ್ಡ್ ಹಗರಣದಲ್ಲಿ ಅಕ್ರಮವಾಗಿಲ್ಲ ಎಂದು ತಿಳಿಸಿದ್ದರು. ಆದರೂ ಕಾಂಗ್ರೆಸ್ ಮುಖಂಡರನ್ನು ಕುಗ್ಗಿಸಲು ಬಿಜೆಪಿ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ ವತಿಯಿಂದ

# ನಾಳೆಯಿಂದ ಎರಡು ದಿನಗಳ 'ಮೈಸೂರು ಸಾಹಿತ್ಯ ಸಂಭ್ರಮ'








ಪ್ರಮೋದಾ ದೇವಿ, ಗೀತಾಂಜಲಿ, ರಾಜದೀಪ್, ಚಾರು ಶರ್ಮ, ರಿಕ್ಕಿ ಖೇಜ್, ಶ್ರೀಕಾಂತ್, ಸಾಗರಿಕ, ಸುಗತ ಶ್ರೀನಿವಾಸ, ಡಾ.ಸಂಜಯ್ ಗುಬ್ಬಿ, ಮೈಥಿಲಿ ರಾವ್, ಡಾ.ಬಾಲಸುಬ್ರಹ್ಮಣ್ಯಂ, ಎಸ್ತರ್, ಅಕ್ಕೈ ಪದ್ಮಶಾಲಿ, ಡಾ.ಗುರುಪ್ರಸಾದ್, ಸಿ.ನಾಗಣ್ಣ, ಯಾಮಿನಿ ಮುತ್ತಣ್ಣ


ಮೈಸೂರು, ಜು.21(ಆರ್‌ಕೆಬಿ)– ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ ವತಿಯಿಂದ ಜು.23ರಂದು ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ 'ಮೈಸೂರು ಸಾಹಿತ್ಯ ಸಂಭ್ರಮ'ದ 6ನೇ ಕಾರ್ಯಕ್ರಮ ವನ್ನು ಏರ್ಪಡಿಸಲಾಗಿದೆ ಎಂದು ಸ್ಥಾಪಕ ಟ್ರಸ್ಟಿ ಹಾಗೂ ಛೇರ್‌ಪರ್ಸನ್ ಶುಭಾ ಸಂಜಯ್ ಅರಸ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ದಿನಗಳ ಕಾರ್ಯಕ್ರಮವನ್ನು ಜು.23ರಂದು ಮಧ್ಯಾಹ್ನ 1 ಗಂಟೆಗೆ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಉದ್ಘಾಟಿಸಲಿದ್ದಾರೆ. ಅಂತಾರಾಷ್ಟ್ರೀಯ ಬುಕರ್ ಪ್ರೈಜ್ ವಿಜೇತೆ ಗೀತಾಂಜಲಿ ಶ್ರೀ, ಗ್ರಾಮ್ಮಿ ಅವಾರ್ಡ್ ವಿಜೇತ ರಿಕ್ಕಿ ಖೇಜ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಇದೇ ವೇಳೆ 'ದಿ ಬುಕ್ ಲೀಫ್' ಸುದ್ದಿ ಪತ್ರಿಕೆಯನ್ನು ಉದ್ಯಮಿ ಅರುಣ್ ರಾಮನ್ ಬಿಡುಗಡೆ ಮಾಡಲಿದ್ದಾರೆ ಎಂದು ಹೇಳಿದರು.

ಸಾಹಿತ್ಯ ಸಂಭ್ರಮದಲ್ಲಿ ಸಾಹಿತ್ಯ, ಸಿನಿಮಾ, ಯಕ್ಷಗಾನ, ಪತ್ರಿಕೋದ್ಯಮ, ಕ್ರಿಕೆಟ್, ನಾಟಕ, ಅಧಿಕಾರ ವರ್ಗ, ವನ್ಯಜೀವಿ, ಜೀವನಕಲೆ ಮತ್ತು ಸಮುದಾಯಕ್ಕಾಗಿ ಸಾಮರ್ಥ್ಯದ ಬೆಳವಣಿಗೆ ಇತ್ಯಾದಿ ವಿವಿಧ ಕ್ಷೇತ್ರಗಳ ಸಾಧಕರು ಪಾಲ್ಗೊಳ್ಳಲಿದ್ದಾರೆ. ಅಭಿಜ್ಞಾ ಹೆಗಡೆ ತಂಡದಿಂದ 'ಹರಿಣಾಭಿಸರಣ' ಯಕ್ಷಗಾನ ಪ್ರಸಂಗದೊಂದಿಗೆ ಸಾಹಿತ್ಯ ಸಂಭ್ರಮ ಆರಂಭಗೊಳ್ಳಲಿದೆ ಎಂದರು.

ಧರ್ಮೇಂದ್ರಕುಮಾರ್, ರಜನಿ ರಾಘವನ್, ಡಾ.ಅಕ್ಕೈ ಪದ್ಮಶಾಲಿ, ಮೊಹುವಾ ಚಿನ್ನಪ್ಪ, ಡಾ.ಡಿ.ವಿ.ಗುರುಪ್ರಸಾದ್, ಗಜಾನನ ಶರ್ಮಾ, ಗುರುರಾಜ್ ಕರ್ಜಗಿ ಇನ್ನಿತರೆ ಲೇಖಕರು, ಕಲಾವಿದರು, ಭಾಷಣಕಾರರು ಚರ್ಚೆ ಮತ್ತು ಸಂವಹನ ನಡೆಸಿಕೊಡಲಿದ್ದಾರೆ. ಯು.ಆರ್.ಅನಂತಮೂರ್ತಿ ಅವರನ್ನು ಕುರಿತ 'ನೆನಪು ಅನಂತ' ಪುಸ್ತಕವನ್ನು ಪತ್ನಿ ಎಸ್ತರ್ ಅನಂತಮೂರ್ತಿ ಬಿಡುಗಡೆ ಮಾಡಲಿದ್ದಾರೆ ಎಂದು ತಿಳಿಸಿದರು.

ಈ ಬಾರಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ರಾಜದೀಪ್ ಸರ್ದೇಸಾಯಿ, ಚಾರು ಶರ್ಮ, ನಿಧಿನ್ ಓಲಿಕರ, ಕೃಷ್ಣಮಾಚಾರಿ ಶ್ರೀಕಾಂತ್, ಸಾಗರಿಕ ಘೋಶ್, ಸುಗತ ಶ್ರೀನಿವಾಸರಾಜು, ಡಾ.ಸಂಜಯ್ ಗುಬ್ಬಿ, ಪಮೇಲಾ ಗಾಲೆ ಮಲ್ಹೋತ್ರ, ರಿಂಕಿರಾಯ್ ಭಟ್ಟಾಚಾರ್ಯ, ಡಾ.ಕೃಷ್ಣರಾವ್, ಡಾ.ಎಚ್.ಎಸ್.ಚಂಪಾ, ಶಂಕರ್ ಬೆಳ್ಳೂರ್, ಪದ್ಮಾವತಿ ರಾವ್ ಮತ್ತು ಡಾ.ಆರ್.ಬಾಲ ಸುಬ್ರಹ್ಮಣ್ಯಂ ಇನ್ನಿತರೆ ಲೇಖಕರು ಮತ್ತು ಭಾಷಣಕಾರರು ಇರುತ್ತಾರೆ. ಯುವ ಲೇಖಕ ಅನಿರುಧ್ ಕನಿಶೆಟ್ಟಿ, ಮೈಸೂರಿನ ಮೈಥಿಲಿ ರಾವ್, ಡಾ.ಎನ್.ಎಸ್.ವಿಶ್ವನಾಥ್, ಸೀತಾ ಭಾಸ್ಕರ್,



ಸ್ನೇಕ್ ಶ್ಯಾಂ

ಡಾ.ಪ್ರಸನ್ನ ಸಂತೆಕಡೂರ್, ಡಾ.ಪೃಥ್ವಿದತ್ತ, ಸಿ.ನಾಗಣ್ಣ ಭಾಗವಹಿಸಲಿದ್ದಾರೆ ಎಂದರು.

ಮುಂದಿನ ಪೀಳಿಗೆಗೆ ಪುಸ್ತಕ ಓದುವುದನ್ನು ಅಭ್ಯಾಸ ಮಾಡಿಸುವುದು ನಮ್ಮ ಗುರಿಯಾಗಿದ್ದು, ಮಕ್ಕಳ ಗೋಷ್ಠಿ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಯೋಗ, ಪ್ರಕೃತಿ ಬಗ್ಗೆ ಪರಿಚಯ ಮಾಡಿಸುವುದು ಮತ್ತು ಕತೆಗಳನ್ನು ಹೇಳುವುದಕ್ಕಾಗಿ ರೂಪಾ ಪೈ, ಯಾಮಿನಿ ಮುತ್ತಣ್ಣ, ಮನಿಷಾ ದಾಸಪ್ಪ, ಸ್ನೇಕ್ ಶ್ಯಾಂ ಅವರನ್ನೊಳಗೊಂಡ ತಂಡ ಭಾಗವಹಿಸಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕಿಟ್ಟಿ ಮಂದಣ್ಣ, ಚೆರಿಯನ್ ಕುಂಬುಕಟ್ಟು, ಸಿ.ಆರ್.ಹನುವಂತ್, ಥಂಕಮ್ ಪಣಿಕಾಲ್ ಉಪಸ್ಥಿತರಿದ್ದರು.

ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿರುವ

# ಕಾಂಗ್ರೆಸ್ ನಾಯಕರ ವಿರುದ್ಧ ಬಿಜೆಪಿ ಮುಖಂಡರ ವಾಗ್ದಾಳಿ



ಮೈಸೂರು, ಜು.21(ಆರ್‌ಕೆಬಿ)– ಕಾಂಗ್ರೆಸ್ ಪಕ್ಷದ ನಾಯಕರ ಭ್ರಷ್ಟಾಚಾರವನ್ನು ತಮ್ಮೆದುರಲ್ಲೇ ಇಟ್ಟುಕೊಂಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿರುವುದನ್ನು ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಖಂಡಿಸಿದರು.

ಮೈಸೂರು ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಜನತೆ ಪ್ರತಿದಿನ ಕಾಂಗ್ರೆಸ್ ನಾಯಕರ ದೊಂಬರಾಟ ನೋಡುತ್ತಿದ್ದಾರೆ. ಖಾಲಿ ಇಲ್ಲದ ಮುಖ್ಯಮಂತ್ರಿ ಕುರ್ಚಿಗಾಗಿ ಪರಸ್ಪರ ಟೀಕೆ, ಟಿಪ್ಪಣಿ, ಆರೋಪ, ಪ್ರತ್ಯಾರೋಪದಲ್ಲಿ ತೊಡಗಿದ್ದಾರೆ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನೂ 8 ತಿಂಗಳು ಬಾಕಿ ಇದೆ. ಜನರಿಗೆ ತಮ್ಮ ಯೋಜನೆಗಳ ಬಗ್ಗೆ ವಿಚಾರಗಳನ್ನು ಮುಂದಿಡುವುದನ್ನು ಬಿಟ್ಟು, ಒಂದು ಕಡೆ ಸಿದ್ದರಾಮೋತ್ಸವ, ಇನ್ನೊಂದು ಕಡೆ ಡಿ.ಕೆ.ಶಿವಕುಮಾರ್ ಜಾತಿಯ ಬೆಂಬಲಕ್ಕಾಗಿ ನಡೆಸಿರುವುದನ್ನು ಕಾಣುತ್ತಿದ್ದೇವೆ. ಮನೆಯೊಂದು ಮೂರು ಬಾಗಿಲು ಎಂಬ ಸ್ಥಿತಿಯಲ್ಲಿರುವ ಕಾಂಗ್ರೆಸ್ ನಾಯಕರು ಬಿಜೆಪಿ ವಿರುದ್ಧ ಟೀಕಿಸುತ್ತಿರುವುದನ್ನು ನೋಡಿದರೆ ಹಾಸ್ಯಾಸ್ಪದವೆನಿಸಿದೆ ಎಂದರು.

ರಾಜ್ಯದಲ್ಲಿ ಮಳೆ, ಪ್ರವಾಹ ಪರಿಸ್ಥಿತಿಯಿಂದ ಜನತೆ ತೊಂದರೆಗೀಡಾಗಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ, ಮಂತ್ರಿಗಳು, ಶಾಸಕರು ಜನರ ಸಮಸ್ಯೆಗೆ ಸ್ಪಂದಿಸಿ ಕೆಲಸ ಮಾಡುತ್ತಿದ್ದಾರೆ. ಆದರೆ ಈ ವಿಚಾರದಲ್ಲಿ ಜವಾಬ್ದಾರಿ ಹೊತ್ತು ಜನರ ಕೆಲಸ ಮಾಡಬೇಕಾದ ವಿರೋಧ ಪಕ್ಷದವರು ಪರಸ್ಪರ ಕಿತ್ತಾಟದಲ್ಲಿ ತೊಡಗಿದ್ದಾರೆ. ಇದೆಲ್ಲವನ್ನೂ ರಾಜ್ಯದ ಜನತೆ ನೋಡುತ್ತಿದ್ದಾರೆ. ಅವರಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದರು.

ಜಿಲ್ಲಾ ಸಹ ವಕ್ತಾರ ಕೆ.ವಸಂತ್ ಕುಮಾರ್ ಮಾತನಾಡಿ, ಕಾಂಗ್ರೆಸ್‌ನ ಬೀದಿ ಜಗಳದಲ್ಲಿ ತೊಡಗಿದ್ದಾರೆ. ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಗಾಂಧಿಯವರೇ ಭ್ರಷ್ಟಾಚಾರಕ್ಕೆ ಪ್ರೇರಣೆ ನೀಡುತ್ತಿದ್ದಾರೆ. ಇವೆಲ್ಲವೂ ಗೊತ್ತಿದ್ದರೂ ಕಾಂಗ್ರೆಸ್ ನಾಯಕರು ರಾಜ್ಯ ಬಿಜೆಪಿ ವಿರುದ್ಧ ಭ್ರಷ್ಟಾಚಾರದ ಆರೋಪದಲ್ಲಿ ತೊಡಗಿ, ರಾಜ್ಯದ ಜನರ ಮುಂದೆ ನಗೆಪಾಟಲಿಗೀಡಾಗಿದ್ದಾರೆ. ಮನಮೋಹನ್‌ಸಿಂಗ್ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ 2ಜಿ, 3ಜಿ, ಕಲ್ಲಿದ್ದಲು ಇನ್ನಿತರೆ ಹಗರಣದಲ್ಲಿ ಭಾಗಿಯಾಗಿದ್ದನ್ನು ಜನರು ಮರೆತಿಲ್ಲ. ಎ.ರಾಜಾ, ಕನಿಮೋಳಿ, ಚಿದಂಬರಂ ಇನ್ನಿತರರು ಯಾವ ಕಾರಣಕ್ಕಾಗಿ ಜೈಲಿಗೆ ಹೋಗಿದ್ದರು ಎಂಬುದು ಜನರಿಗೆ ಗೊತ್ತಿದೆ. ಆದ್ದರಿಂದ ಬಿಜೆಪಿ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಲು ಕಾಂಗ್ರೆಸ್‌ನವರಿಗೆ ನೈತಿಕತೆ ಇಲ್ಲ ಎಂದು ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಕ್ತಾರ ಶ್ರೀನಿವಾಸ್‌ಗೌಡ, ಜಿಲ್ಲಾ ಮಾಧ್ಯಮ ಪ್ರಮುಖ ಎನ್.ರಾಜ್ ಕುಮಾರ್, ಕಾರ್ಯಾಲಯ ಕಾರ್ಯದರ್ಶಿ ಪಾಪಣ್ಣ ಉಪಸ್ಥಿತರಿದ್ದರು.

# ಆರೋಗ್ಯ ತಪಾಸಣೆ ಮೂಲಕ ವಿಕಲಚೇತನರಿಗೆ ಯುಡಿಐಡಿ ವಿತರಣೆ



ಮೈಸೂರು, ಜು.21(ಆರ್‌ಕೆ)–ಮೈಸೂರಿನ ತಿಲಕ್ ನಗರದಲ್ಲಿರುವ ಸರ್ಕಾರಿ ಅಂಧರ ಪಾಠಶಾಲೆಯಲ್ಲಿ ಆರೋಗ್ಯ ತಪಾಸಣೆ ನಡೆಸಿ ವಿಕಲಚೇತನರಿಗೆ ಯೂನಿಕ್ ಡಿಸೇಬಿಲಿಟಿ ಗುರುತಿನ ಚೀಟಿ (ಯುಡಿಐಡಿ)ಯನ್ನು ಇಂದು ನೀಡಲಾಯಿತು. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ, ಭಾರತೀಯ ರೆಡ್‌ಕ್ರಾಸ್ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ವೈದ್ಯಕೀಯ ತಪಾಸಣಾ ಶಿಬಿರವನ್ನು ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ಸದಸ್ಯ ಕಾರ್ಯದರ್ಶಿ ಎಸ್.ಎಸ್.ವೈದ್ಯನಾಥ ಹಾಗೂ ಅಂಧರ ಪಾಠಶಾಲೆ ಅಧೀಕ್ಷಕ ಸತೀಶ್ ಅವರು ಉದ್ಘಾಟಿಸಿದರು.

ಮೈಸೂರಿನ ಕೆ.ಆರ್.ಆಸ್ಪತ್ರೆ ಹಾಗೂ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (AIISH) ವೈದ್ಯರು ವಿಕಲಚೇತನರಿಗೆ ಮೂಳೆ ಮತ್ತು ಕೀಲು, ನೇತ್ರ, ಗಂಟಲು, ಕಿವಿ, ಮೂಗು, ಚರ್ಮ, ಮಾನಸಿಕ ರೋಗಗಳ ಸಂಬಂಧ ವೈದ್ಯಕೀಯ ತಪಾಸಣೆ ನಡೆಸಿದರು. ವೈದ್ಯರು ತಪಾಸಣೆ ನಡೆಸಿ ನೀಡಿದ ವರದಿ, ಶಿಫಾರಸ್ಸಿನನ್ವಯ ಅಂಗವೈಕಲ್ಯದ ಪ್ರಮಾಣಕ್ಕನುಗುಣವಾಗಿ ಯೂನಿಕ್ ಐಡಿ ಕಾರ್ಡ್‌ಗಳನ್ನು ಇಲಾಖೆ ಅಧಿಕಾರಿಗಳು ನೀಡಿದರು. ಮೈಸೂರಿನ ವಿವಿಧ ಸಂಸ್ಥೆಗಳು, ಸ್ವಯಂಸೇವಕರು ಶಿಬಿರದಲ್ಲಿ ಪಾಲ್ಗೊಂಡು ನೆರವು ನೀಡಿದರು. 500ಕ್ಕೂ ಹೆಚ್ಚು ವಿಕಲಚೇತನರು ವೈದ್ಯಕೀಯ ತಪಾಸಣೆ ಮಾಡಿಸಿಕೊಂಡು ಗುರುತಿನ ಚೀಟಿ ಪಡೆಯುವ ಮೂಲಕ ಸರ್ಕಾರಿ ಸೌಲಭ್ಯ ಪಡೆಯಲು ಹೆಸರು ನೋಂದಾಯಿಸಿಕೊಂಡರು.

# ವೃತ್ತಿಯಲ್ಲಿ ಪ್ರಾಮಾಣಿಕತೆ ಇದ್ದರೆ ಯಶಸ್ಸು ಸಾಧ್ಯ

ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಆಶೀರ್ವಚನ



ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಮಿತ್ರಮಂಡಳಿ ಹಾಗೂ ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿಯವರಿಗೆ ಅಭಿವಂದನೆ ಸಲ್ಲಿಸಲಾಯಿತು.

ಮೈಸೂರು, ಜು.21(ಎಂಕೆ)– ನಮ್ಮ ಜೀವನದ ಹಿಂದೆ ಭಗವಂತನ ಕೈವಾಡವಿದ್ದು, ವೃತ್ತಿಯಲ್ಲಿ ಪ್ರಾಮಾಣಿಕವಾಗಿದ್ದರೆ ಯಶಸ್ಸು ಸಾಧ್ಯ ಎಂದು ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಮಿತ್ರಮಂಡಳಿ ಹಾಗೂ ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಅಭಿವಂದನಾ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ನಾವು ಯೋಜನೆ ಮಾಡಿಕೊಂಡಂತೆ ಎಂದಿಗೂ ನಡೆದಿಲ್ಲ. ಭಗವಂತನ ಯೋಜನೆಯಂತೆ ನಮ್ಮ ಜೀವನ ಸಾಗುತ್ತಿದ್ದು, ನಮ್ಮ ಪ್ಲಾನ್ ಬದಿಗಿಟ್ಟು ದೇವರು ತೋರಿದ ದಾರಿಯಲ್ಲಿ ಸಾಗಬೇಕು ಎಂದರು.

ದೇವರು ನೀಡಿದ ವೃತ್ತಿಯನ್ನು ಪ್ರಾಮಾಣಿಕವಾಗಿ ಮಾಡಿದರೆ ತಾನಾಗಿಯೇ ಪ್ರಮೋಷನ್ ದೊರಕುತ್ತದೆ. ಅದರ ಬದಲು ನಾನು ಇನ್ನೂ ದೊಡ್ಡ ಹುದ್ದೆಗೆ ಹೋಗಬೇಕಾಗಿತ್ತು. ಆಗ್ಯಾಕೆ ಆಗಲಿಲ್ಲ– ಇಗ್ಯಾಕಾಯಿತು ಎಂದು ಚಿಂತಿಸುತ್ತಾ ಸಮಯ ವ್ಯರ್ಥ ಮಾಡಿದರೆ ಇನ್ನೂ ಕೆಳ ಸ್ಥಾನಕ್ಕೆ ಕುಸಿಯುತ್ತೇವೆ. ಆದ್ದರಿಂದ ಪಾಲಿಗೆ ಬಂದದ್ದು ಒಳಿತಿಗಾಗಿ ಎಂಬುದನ್ನರಿತು, ಆಗದಿರುವುದಕ್ಕೆ ಕೊರಗದೆ ಮುಂದೆ ಸಾಗುವಂತೆ ಭಕ್ತರಿಗೆ ಸಲಹೆ ನೀಡಿದರು.

ಇದಕ್ಕೂ ಮುನ್ನ ವಿದ್ವಾನ್ ಬಿ. ಗೋಪಾಲಚಾರ್ಯ ಮಾತನಾಡಿ, ಇಡೀ ವಿಶ್ವವೇ ಭಾರತದ ಶಾಂತಿ ಮಂತ್ರವನ್ನು ಅಪೇಕ್ಷಿಸುತ್ತಿದೆ. ಇದಕ್ಕೆ ಈ ನೆಲದ ಸಂಸ್ಕೃತಿ ಮುಖ್ಯ ಕಾರಣ. ಸಾವಿರ ಕಿಲೋ ಮೀಟರ್‌ಗೊಂದು ಕೃಷ್ಣ ಮಂದಿರ ಸ್ಥಾಪನೆಯಾಗಬೇಕು ಎಂಬ ಆಲೋಚನೆಯುಳ್ಳ ಹಾಗೂ ಕವಿತೆಗಳನ್ನು ಬರೆಯುವ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿಗಳು ನಮಗೆ ದಾರಿದೀಪವಾಗಿದ್ದಾರೆ ಎಂದು ಅಭಿವಂದನೆ ಸಲ್ಲಿಸಿದರು.

ಭಾರತೀಯ ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಶ್ರೀ ಪುತ್ತಿಗೆ ಮಠದಲ್ಲಿ ವೇದ–ಪುರಾಣಗಳ ಪಠಣೆ ನಡೆಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಉದ್ಯೋಗ ನೀಡಿ ನಮ್ಮ ನೆಲದ ಸಂಸ್ಕೃತಿಯನ್ನು ಉಳಿಸಿ–ಬೆಳೆಸುವ ಕಾರ್ಯದಲ್ಲಿ ಶ್ರೀಗಳು ನಿರತರಾಗಿದ್ದಾರೆ. ಭಗವದ್ಗೀತೆ ದೇಶದ ಮನೆ ಮನೆಗೂ ತಲುಪಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಿದ್ದಾರೆ ಎಂದರು.


**ಚಾಲನೆ:** ಇದೇ ವೇಳೆ ಕೋಟಿ ಗೀತಾ ಲೇಖನ ಯಜ್ಞದ ಅಭಿಯಾನಕ್ಕೆ ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಚಾಲನೆ ನೀಡಿದರು. ಇದಕ್ಕೂ ಮೊದಲು ಬೆಂಗಳೂರಿನ ವಿದ್ವಾನ್ ಕೀರ್ತನ್ ಹೊಳ್ಳ, ವಿದುಷಿ ಪೃಥ್ವಿ ಭಟ್ ದಾಸ ಪುಷ್ಪಾಂಜಲಿ ಕಾರ್ಯಕ್ರಮ ನಡೆಸಿಕೊಟ್ಟರು. ಸಾಹಿತಿ ಕಬ್ಬಿನಾಲೆ ವಸಂತ ಭಾರದ್ವಾಜ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ ಶ್ರೀ ಪುತ್ತಿಗೆ ಮಠಾಧೀಶರ ಚತುರ್ಥ ಪರ್ಯಾಯದ ಪ್ರಯುಕ್ತ

# ಕೋಟಿ ಗೀತಾಲೇಖನ ಯಜ್ಞ ಅಭಿಯಾನ

ಮೈಸೂರಲ್ಲಿ ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿ ಮಾಹಿತಿ

ಮೈಸೂರು, ಜು.21(ಆರ್‌ಕೆ)–2024 ರಿಂದ 2026ರವರೆಗೆ ನಡೆಯಲಿರುವ ಚತುರ್ಥ ಪರ್ಯಾಯದ ಅಂಗವಾಗಿ 'ಕೋಟಿ ಗೀತಾಲೇಖನ' ಎಂಬ 1 ಕೋಟಿ ಜನರಿಂದ ಭಗವದ್ಗೀತೆ ಬರೆಸುವ ಅಭಿಯಾನ ಆರಂಭವಾಗಿದೆ ಎಂದು ಉಡುಪಿ ಶ್ರೀ ಕೃಷ್ಣ ಮಠದ ಶ್ರೀ ಪುತ್ತಿಗೆ ಮಠಾಧೀಶ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದಂಗಳು ತಿಳಿಸಿದ್ದಾರೆ.



ಶ್ರೀ ಕೃಷ್ಣ ಮಿತ್ರ ಮಂಡಳಿ ಮತ್ತು ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಮೈಸೂರಿನ ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಷಷ್ಠ್ಯಬ್ಧ ಪೂರ್ತಿ ನಿಮಿತ್ತ ಏರ್ಪಡಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ, ವಿವಿಧ ಶ್ರೀ ಕೃಷ್ಣನ ಪೂಜಾ ಕೈಂಕರ್ಯ ನಡೆಸಿದ ಬಳಿಕ ಇಂದು ಸುದ್ದಿಗಾರರೊಂದಿಗೆ ಮಾತನಾಡಿದರು.

ನಾಡಿನ ಸ್ವಾಸ್ಥ್ಯ ಹಾಗೂ ಒತ್ತಡದ ಬದುಕಿನಲ್ಲಿ ಸರ್ವರಿಗೂ ಶಾಂತಿ–ನೆಮ್ಮದಿ ತರುವ ನಿಟ್ಟಿನಲ್ಲಿ ತಾವು ಶ್ರೀಮಠದಿಂದ ಕೋಟಿ ಗೀತಾಲೇಖನ ಯಜ್ಞ ಅಭಿಯಾನ ಆರಂಭಿಸಿದ್ದು, ಒಂದು ಕೋಟಿ ಜನರಿಂದ ಅವರವರ ಭಾಷೆಯಲ್ಲಿ ಭಗವದ್ಗೀತೆ ಬರೆಸುವ ಕಾರ್ಯಕ್ರಮ ಆಯೋಜಿಸಿದ್ದು, ಆ ಮೂಲಕ ಏಕತೆ, ಭಾವೈಕ್ಯತೆ ಮೂಡಿಸುವ ಪ್ರಯತ್ನ ಮಾಡುತ್ತಿರುವುದಾಗಿ ತಿಳಿಸಿದರು.

ಭಗವದ್ಗೀತೆ ಬರೆಯುವ ಭಕ್ತರಿಗೆ ದೀಕ್ಷಾಸೂತ್ರ ಕಟ್ಟಿ 200 ಪುಟಗಳ ನೋಟ್ ಬುಕ್ ಅನ್ನು ನೀಡಲಾಗುವುದು. ಅದರಲ್ಲಿ ಭಗವದ್ಗೀತೆ ಬರೆದು ಕಳುಹಿಸಿದಲ್ಲಿ ಚತುರ್ಥ ಪರ್ಯಾಯದಲ್ಲಿ ಅವುಗಳನ್ನು ಮುದ್ರಿಸಿಕೊಡಲಾಗುತ್ತದೆ. ಆ ಅವಧಿಯಲ್ಲಿ ಭಗವದ್ಗೀತೆಯ ಕಂಠಪಾಠ ತರಬೇತಿ, ವಿಮರ್ಶೆ, ಪ್ರವಚನ, ಗೀತಾ ಪಾರಾಯಣ, ಸಮ್ಮೇಳನ, ಗೀತಯಾಗದಂತಹ ಹಲವು ಕಾರ್ಯಕ್ರಮಗಳು ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ನಡೆಯಲಿವೆ ಎಂದು ಶ್ರೀ ಸುಗುಣೇಂದ್ರತೀರ್ಥ ಸ್ವಾಮಿಗಳು ನುಡಿದರು.

ಇದೀಗ ತಮ್ಮ ಭಾವೀ ಚತುರ್ಥ ಪರ್ಯಾಯದಲ್ಲಿ ಪಂಚ ಪ್ರಧಾನ ಯೋಜನೆಗಳನ್ನು ಹಮ್ಮಿಕೊಂಡಿದ್ದು, 1 ಕೋಟಿ ಜನರಿಂದ ಶ್ರೀಮದ್ ಭಗವದ್ಗೀತೆ ಬರೆಸುವ 'ಕೋಟಿ ಗೀತಾಲೇಖನ ಯಜ್ಞ' ಪ್ರಥಮವಾದರೆ, ಗೀತಾ ಮಂದಿರದಲ್ಲಿ ಎರಡು ವರ್ಷಗಳ ಕಾಲ ಶ್ರೀಮದ್ಭಗವದ್ಗೀತಾ ಮಹಾ ಯಾಗ ದ್ವಿತೀಯ ಯೋಜನೆಯಾಗಿದೆ. ಉಡುಪಿ ಕ್ಷೇತ್ರ ವಾಸ, 'ಸ್ವಾಗತಂ ಕೃಷ್ಣ' ಎಂಬ ಸ್ವಾಗತ ಗೋಪುರ ನಿರ್ಮಾಣ ಹಾಗೂ ರತ್ನಖಚಿತ ಪಾರ್ಥಸಾರಥಿ ರಥ, ಗೀತಾ ರಥ ಮತ್ತು ಕನಕನ ಕಿಂಡಿಗೆ ಕನಕ ಕವಚ ಸಮರ್ಪಿಸುವ ಸಂಕಲ್ಪ ಮಾಡಲಾಗಿದೆ ಎಂದು ಅವರು ನುಡಿದರು. ಕೋಟಿ ಗೀತಾಲೇಖನ ಯಜ್ಞದಲ್ಲಿ ಪಾಲ್ಗೊಳ್ಳಲಿಚ್ಛಿಸುವವರು 8801007700 ಸಂಖ್ಯೆಗೆ ಕರೆ ಮಾಡಬಹುದು. ಆನ್‌ಲೈನ್‌ನಲ್ಲೂ ನೋಂದಣಿಗೆ ಅವಕಾಶವಿದೆ. ಯಾವುದೇ ಸ್ಥಳದವರಾಗಿರಲೀ, ಅವರವರ ಭಾಷೆಯಲ್ಲಿ ಭಗವದ್ಗೀತೆ ಬರೆದು ಕಳುಹಿಸಬಹುದಾಗಿದೆ ಎಂದು ಶ್ರೀಗಳು ಇದೇ ಸಂದರ್ಭ ನುಡಿದರು.

# ನಾಮಫಲಕ, ಸಿಗ್ನಲ್‌ಲೈಟ್ ಅಳವಡಿಕೆ ಕಾಮಗಾರಿಗೆ ಭೂಮಿಪೂಜೆ



ನಂಜನಗೂಡು, ಜು.21– ನಗರದಲ್ಲಿ ಸಂಚಾರ ದಟ್ಟಣೆ ನಿವಾರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ನಗರದ ಹುಲ್ಲಹಳ್ಳಿ ವೃತ್ತದ ಬಳಿ ಸಿಗ್ನಲ್ ಲೈಟ್ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಹುಲ್ಲಹಳ್ಳಿ ವೃತ್ತದ ಬಳಿ 19 ಲಕ್ಷ ವೆಚ್ಚದ ಸಿಗ್ನಲ್‌ಲೈಟ್ ಅಳವಡಿಕೆ ಕಾಮಗಾರಿ ಹಾಗೂ ಆರ್‌ಪಿ ರಸ್ತೆಯ 7ನೇ ತಿರುವಿನ ಬಳಿ 34 ಲಕ್ಷ ರೂ. ವೆಚ್ಚದಲ್ಲಿ ನಗರದ ಎಲ್ಲಾ ವಾರ್ಡ್‌ಗಳಿಗೂ ನಾಮ ಫಲಕ ಅಳವಡಿಸುವ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಗರದ ಹುಲ್ಲಹಳ್ಳಿ ವೃತ್ತದ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾದ ಕಾರಣ ಹೆಚ್ಚು ಅಪಘಾತಗಳು ಸಂಭವಿಸುತ್ತಿದ್ದವು. ಅಪಘಾತ ತಪ್ಪಿಸುವ ಸಲುವಾಗಿ ಸಿಗ್ನಲ್ ಲೈಟ್ ಅಳವಡಿಸುವಂತೆ ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿತ್ತು. 3 ವರ್ಷಗಳ ಹಿಂದೆಯೇ ಸಿಗ್ನಲ್‌ಲೈಟ್ ಅಳವಡಿಕೆಗೆ ತೀರ್ಮಾನಿಸಿ ನಗರಸಭೆಯಲ್ಲಿ ಅನುದಾನ ಮೀಸಲಿಡಲಾಗಿತ್ತು. ಆದರೆ ಕೊರೊನಾ ಕಾರಣದಿಂದಾಗಿ ಕಾಮಗಾರಿ ವಿಳಂಬವಾಯಿತು. ಇದೀಗ ನಗರಸಭೆ ವಿಶೇಷ ಅನುದಾನದಡಿ 19 ಲಕ್ಷ ವೆಚ್ಚದಲ್ಲಿ ಹುಲ್ಲಹಳ್ಳಿ ವೃತ್ತದ ಬಳಿ ಸಿಗ್ನಲ್‌ಲೈಟ್ ಹಾಗೂ ಸಿಸಿ ಕ್ಯಾಮೆರಾ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಈ ಕಾಮಗಾರಿ ಮುಂದಿನ 1 ತಿಂಗಳಲ್ಲಿ ಮುಕ್ತಾಯಗೊಂಡು ನಗರದ ಟ್ರಾಫಿಕ್ ಸಮಸ್ಯೆ ಬಗೆಹರಿಯಲಿದೆ ಎಂದರು.

ನಗರ ವ್ಯಾಪ್ತಿಯಲ್ಲಿ ಪಾರ್ಕಿಂಗ್ ಸಮಸ್ಯೆ ಹೇಗೆ ಪರಿಹರಿಸಬೇಕು ಎಂಬ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ. ಶೀಘ್ರ ಪಾರ್ಕಿಂಗ್ ವ್ಯವಸ್ಥೆ ಜಾರಿಗೊಳಿಸಲಾಗುವುದು. ಅಲ್ಲದೆ ನಗರದಾದ್ಯಂತ ಸಿಸಿ ಕ್ಯಾಮೆರಾ ಅಳವಡಿಸಲಾಗುವುದು ಎಂದರು. ನಗರದ ಪ್ರಮುಖ ವೃತ್ತಗಳಲ್ಲಿ, ತಿರುವುಗಳಲ್ಲಿ ವಾರ್ಡ್‌ನ ಮಾಹಿತಿಯನ್ನು ಒಳಗೊಂಡ ನಾಮಫಲಕ ಅಳವಡಿಕೆ ಕಾಮಗಾರಿಗೆ 34 ಲಕ್ಷ ವೆಚ್ಚದಲ್ಲಿ ಚಾಲನೆ ನೀಡಲಾಗಿದೆ. ಈ ನಾಮಫಲಕದಲ್ಲಿ ಲೋಕಸಭಾ ಸದಸ್ಯರು, ಶಾಸಕರು ಹಾಗೂ ವಾರ್ಡ್‌ನ ಸದಸ್ಯರ ಮಾಹಿತಿಯು ಇರಲಿದೆ ಎಂದರು.

ಈ ವೇಳೆ ಪ್ರಥಮ ದರ್ಜೆ ಗುತ್ತಿಗೆದಾರರಾದ ಯು.ಎನ್.ಪದ್ಮನಾಭರಾವ್, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಸದಸ್ಯರಾದ ಗಾಯತ್ರಿ ಮುರುಗೇಶ್, ಮಹದೇವಮ್ಮ, ವಿಜಯಲಕ್ಷ್ಮಿ, ಮಹದೇವಪ್ರಸಾದ್, ಕಪಿಲೇಶ್, ಮುಖಂಡರಾದ ಹೆಮ್ಮರಗಾಲ ಸೋಮಣ್ಣ, ಮಹೇಶ್ ಅತ್ತಿಖಾನೆ, ತಹಸೀಲ್ದಾರ್ ಎಂ.ಶಿವಮೂರ್ತಿ, ನಗರಸಭಾ ಆಯುಕ್ತ ರಾಜಣ್ಣ, ಎಸ್ಪಿ ಚೇತನ್, ಡಿವೈಎಸ್‌ಪಿ ಗೋವಿಂದರಾಜು, ವೃತ್ತ ನಿರೀಕ್ಷಕ ಲಕ್ಷ್ಮಿಕಾಂತ್ ತಳವಾರ್, ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಲೋಹಿತ್, ಪಟ್ಟಣ ಠಾಣೆ ಎಸ್‌ಐ ವಿಜಯರಾಜ್, ಎಇಇ ಸುರೇಶ್, ಎಇಗಳಾದ ಕುಮಾರ್, ಶರ್ಮಿಳಾ ಇದ್ದರು.

## ಹೊಳೆಸಾಲು ಗ್ರಾಪಂಗೆ ಸುಮಿತ್ರ ಉಪಾಧ್ಯಕ್ಷೆ



ತಿ.ನರಸೀಪುರ ಜು.21– ತಾಲೂಕಿನ ಹೊಳೆಸಾಲು ಗ್ರಾಪಂ ಉಪಾಧ್ಯಕ್ಷೆಯಾಗಿ ಸುಮಿತ್ರ ಸೋಮಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂನಲ್ಲಿ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಸುಮಿತ್ರ ಸೋಮಣ್ಣ ಅವರೊಬ್ಬರೇ ನಾಮಪತ್ರ ಸಲ್ಲಿಸಿದ ಕಾರಣ ಚುನಾವಣಾಧಿಕಾರಿಯೂ ಆದ ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಈ ಹಿಂದಿನ ಅಧ್ಯಕ್ಷೆ ರತ್ನಮ್ಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ಚುನಾವಣೆ ನಡೆಯಿತು. ಈ ವೇಳೆ ಪಿಡಿಓ ಶ್ರೀನಿವಾಸ್, ಗ್ರಾಪಂ ಅಧ್ಯಕ್ಷ ಪರಮೇಶ್, ಮಾಜಿ ಅಧ್ಯಕ್ಷೆ ಮಹದೇವಮ್ಮ, ಹಿಂದುಳಿದ ವರ್ಗಗಳ ಅಧ್ಯಕ್ಷ ಮಹೇಶ್, ಮುಖಂಡರಾದ ಗೋವಿಂದರಾಜು, ರಾಜೇಶ್ ಮೂರ್ತಿ, ಕಾಳಿಹುಂಡಿ ಶಿವಣ್ಣ ಶಾಂತರಾಜು, ಮಡಿವಾಡಿ ಸುಬ್ರಹ್ಮಣ್ಯ ಮತ್ತಿತರಿದ್ದರು.

## ಕಡೆ ಆಷಾಢ ಶುಕ್ರವಾರದ ಪ್ರಯುಕ್ತ ಶ್ರೀಮುತ್ತುಮಾರಮ್ಮಗೆ ವಿಶೇಷ ಪೂಜೆ

ಹುಣಸೂರು, ಜು.21– ಕಡೆ ಆಷಾಢ ಶುಕ್ರವಾರ ಹಿನ್ನೆಲೆಯಲ್ಲಿ ನಗರದ ಮಾರಿಗುಡಿ ಬೀದಿಯಲ್ಲಿರುವ ಶ್ರೀಮುತ್ತುಮಾರಮ್ಮ ದೇವಾಲಯದಲ್ಲಿ ದೇವಿಗೆ ವಿಶೇಷ ಪೂಜೆ ನೆರವೇರಲಿದೆ ಎಂದು ಶ್ರೀಮುತ್ತುಮಾರಮ್ಮ ದೇವಿ ಟ್ರಸ್ಟ್ ಅಧ್ಯಕ್ಷ ಹೆಚ್.ವೈ.ಮಹದೇವ್ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಜಾನೆಯಿಂದಲೇ ದೇವಿಗೆ ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯ ನೆರವೇರಿಸಿ, ಫಲಪುಷ್ಪಗಳಿಂದ ವಿಶೇಷವಾಗಿ ಅಲಂಕಾರ ಮಾಡಲಾಗುವುದು. ಬಳಿಕ ಮಹಾಮಂಗಳಾರತಿ ನೆರವೇರಿಸಿ, ಭಕ್ತರ ದರ್ಶನಕ್ಕೆ ಅವಕಾಶ ವ್ಯವಸ್ಥೆ ಮಾಡಲಾಗುವುದು. ಅಲ್ಲದೇ ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ಅನ್ನಸಂತರ್ಪಣೆ ನಡೆಯಲಿದೆ ಎಂದರು.

ಸಂಜೆ 4 ಗಂಟೆಗೆ ಶ್ರೀಮುತ್ತುಮಾರಮ್ಮ ದೇವಿ ಉತ್ಸವ ನಡೆಯಲಿದ್ದು, ನಡುಬೀದಿ ಶ್ರೀಕೊಲ್ಲಾಪುರದಮ್ಮ ದೇವಸ್ಥಾನದಿಂದ 300ಕ್ಕೂ ಹೆಚ್ಚು ಮಹಿಳೆಯರು ದೀಪ ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇವರೊಂದಿಗೆ ಕೇರಳದ ಪ್ರಖ್ಯಾತ 25 ಜನರ ಚಂಡಿವಾದ್ಯ ಮಹಿಳಾ ತಂಡ ಭಾಗವಹಿಸಲಿದ್ದು, ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿ ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಬೇಕು ಎಂದು ಕೋರಿದರು. ಗೋಷ್ಠಿಯಲ್ಲಿ ಶ್ರೀಮುತ್ತುಮಾರಮ್ಮ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಈಶ್ವರ್, ಜಂಟಿ ಕಾರ್ಯದರ್ಶಿ ಅಶೋಕ್, ಖಜಾಂಚಿ ಗುಂಡುಮಣಿ ಹಾಜರಿದ್ದರು.

## ಹುಣಸೂರು ವಿದ್ಯುತ್ ಸಮಸ್ಯೆ ನಿವಾರಣೆಗೆ ಹೆಚ್ಚುವರಿ 20 ಕೋಟಿ ರೂ. ಅನುದಾನ

### ಚೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ಸಿದ್ದಪ್ಪ



ಹಿರೀಕ್ಯಾತನಹಳ್ಳಿ, ಜು.21– ಹುಣಸೂರು ಉಪವಿಭಾಗದ ವಿದ್ಯುತ್ ಸಮಸ್ಯೆ ಸರಿಪಡಿಸಲು ಬಜೆಟ್‌ನಲ್ಲಿ ಹೆಚ್ಚುವರಿ 20 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಚೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ಸಿದ್ದಪ್ಪ ತಿಳಿಸಿದರು.

ಗಾವಡಗೆರೆ ಹೋಬಳಿ ಚಿಕ್ಕಾಡಗನಹಳ್ಳಿಯಲ್ಲಿ ಆಯೋಜಿಸಿದ್ದ ಗ್ರಾಮೀಣ ವಿದ್ಯುತ್ ಅದಾಲತ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಉಪವಿಭಾಗದ ಸಮಸ್ಯೆ ಬಗೆಹರಿಸಲು ಬಜೆಟ್‌ನಲ್ಲಿ ಬಿಡುಗಡೆಯಾಗಿದ್ದ ಹೆಚ್ಚುವರಿ 20 ಕೋಟಿ ರೂ. ಅನುದಾನದಲ್ಲಿ 5 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಈ ಹಣವನ್ನು 2 ವರ್ಷದವರೆಗೆ ಬಳಸಿಕೊಳ್ಳುವ ಅವಕಾಶವಿದೆ ಆದ್ದರಿಂದ ಗ್ರಾಮೀಣ ರೈತರು ಪಂಪ್ ಸೆಟ್‌ಗಳಿಗೆ ವಿದ್ಯುತ್ ಕೊರತೆ ಉಂಟಾದರೆ ತಕ್ಷಣ ಮಾಹಿತಿ ನೀಡಿ ವಾರದೊಳಗೆ ಹೆಚ್ಚುವರಿ ಟಿಸಿ ಅಳವಡಿಸಲಾಗುವುದು. ಬೆಳಕು ಯೋಜನೆಯಡಿ 500 ಫಲಾನುಭವಿಗಳಿಗೆ ಈಗಾಗಲೇ ವಿದ್ಯುತ್ ಸಂಪರ್ಕ ನೀಡಲಾಗಿದ್ದು, ಉಳಿದ 153 ಫಲಾನುಭವಿಗಳಿಗೆ ವಾರದೊಳಗೆ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗುವುದು ಎಂದರು.

ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ 75 ಯೂನಿಟ್ ವಿದ್ಯುತ್ ಅನ್ನು ಗೃಹ ಬಳಕೆಗೆ ಉಚಿತವಾಗಿ ಮೇ 1ರಿಂದ ನೀಡಲಾಗುತ್ತಿದೆ. ಈ ಹಿಂದೆ ಬಳಸಿದ ವಿದ್ಯುತ್ ಬಿಲ್ಲನ್ನು ಪೂರ್ಣ ಪಾವತಿಸಿ ಇದರ ಉಪಯೋಗ ಪಡೆದುಕೊಳ್ಳಬೇಕು. ಜೊತೆಗೆ ಮೇ ನಂತರ ವಿದ್ಯುತ್ ಬಿಲ್ಲನ್ನು ಕಟ್ಟಿದ್ದರೆ ಅಂತಹ ಗ್ರಾಹಕರ ಬ್ಯಾಂಕ್ ಖಾತೆಗೆ ವಾಪಸ್ ಹಣ ವರ್ಗಾವಣೆ ಮಾಡಲಾಗುವುದು ಎಂದರು.

ಗ್ರಾಹಕರು ಎನ್‌ಆರ್‌ಜಿಎಫ್‌ಸಿ ಹಾಗೂ ಐಎಸ್‌ಐ ಮಾರ್ಕ್‌ನ ವಿದ್ಯುತ್ ಉಪಕರಣಗಳನ್ನು ಬಳಸಿ ವಿದ್ಯುತ್ ಉಳಿಸಲು ಕೈಜೋಡಿಸಬೇಕು. ಜೊತೆಗೆ ಗ್ರಾಹಕರು ವಿದ್ಯುತ್ ಕಂಬಗಳಿಗೆ ದನಕರು ಕಟ್ಟುವುದು, ತೊಳೆದ ಬಟ್ಟೆಗಳನ್ನು ಹಾಕುವುದು ಮುಂತಾದ ಅಪಾಯದ ಸಂಗತಿಗಳಿಂದ ಮುಂಜಾಗ್ರತೆ ವಹಿಸಬೇಕು ಎಂದರು.

## ಕಸುವಿನಹಳ್ಳಿಯಲ್ಲಿ ‘ಎಸ್‌ಬಿಐ ನಡಿಗೆ ರೈತರ ಕಡೆಗೆ’



ಮಲ್ಕುಂಡಿ, ಜು.21– ಪ್ರತಿಯೊಬ್ಬರೂ ಬ್ಯಾಂಕ್‌ನಿಂದ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಭಾರತೀಯ ಸ್ಟೇಟ್ ಬ್ಯಾಂಕ್ ವ್ಯವಸ್ಥಾಪಕ ಅನಿಲ್ ತಿಳಿಸಿದರು.

ನಂಜನಗೂಡು ತಾಲೂಕಿನ ಕಸುವಿನ ಹಳ್ಳಿಯಲ್ಲಿ ಆಯೋಜಿಸಿದ್ದ ‘ಭಾರತೀಯ ಸ್ಟೇಟ್ ಬ್ಯಾಂಕ್ ನಡಿಗೆ ರೈತರ ಕಡೆಗೆ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ರೈತರಿಗಾಗಿ ಹಲವು ವಿಮೆಗಳನ್ನು ಜಾರಿಗೆ ತಂದಿದೆ. ಪ್ರತಿಯೊಬ್ಬರು ವಿಮೆ ಮಾಡಿಸಿದರೆ ನಿಮ್ಮ ಮುಂದಿನ ಜೀವನಕ್ಕೆ ಅನುಕೂಲವಾಗುತ್ತದೆ. ಇದರಿಂದ ನಿಮ್ಮ ಮಕ್ಕಳ ಭವಿಷ್ಯ ರೂಪಿಸಬಹುದು. ಗ್ರಾಹಕರು ಬ್ಯಾಂಕ್ ಸಾಲ ವನ್ನು ಸಕಾಲದಲ್ಲಿ ಸಾಲ ಮರುಪಾವತಿ ಮಾಡಬೇಕು. ಮಹಿಳೆಯರು ಸಂಘಗಳ ಮೂಲಕ ಸಾಲ ಪಡೆದು ಸಕಾಲಕ್ಕೆ ಸಾಲ ಮರುಪಾವತಿ ಮಾಡಿ ಬ್ಯಾಂಕ್ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ನಿಮ್ಮ ಹಣ ಕಾಪಾಡುವುದೇ ಬ್ಯಾಂಕ್ ಗುರಿ ಎಂದರು. ಭಾರತೀಯ ಸ್ಟೇಟ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ವೆಂಕಟಾಚಲ, ಫೀಲ್ಡ್ ಆಫೀಸರ್ ಮನೋಜ್ ಕುಮಾರ್, ಕಸುವಿನಹಳ್ಳಿ ಗ್ರಾಪಂ ಅಧ್ಯಕ್ಷ ಸ್ವಾಮಿ, ಉಪಾಧ್ಯಕ್ಷೆ ವನಜಾಕ್ಷಿ, ಗ್ರಾಪಂ ಸದಸ್ಯ ಕೆ.ಎನ್.ಮಲ್ಲೇಶ್, ಬ್ಯಾಂಕ್ ಸಿಬ್ಬಂದಿ ಸಂತೋಷ್, ಮುಖಂಡರಾದ ಕೆ.ಎನ್.ಶಿವಮೂರ್ತಿ, ಪ್ರಭುಸ್ವಾಮಿ, ಬಳ್ಳೂರುಹುಂಡಿ ಶಿವನಾಗಪ್ಪ ಇತರರಿದ್ದರು.

## ಕೋಟೆಯಲ್ಲಿ 2.3 ಲಕ್ಷ ಮಂದಿಗೆ ಬೂಸ್ಟರ್ ಡೋಸ್ ಗುರಿ

### ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಸೋಮಣ್ಣ



ಹೆಚ್.ಡಿ.ಕೋಟೆ, ಜು.21– ತಾಲೂಕಿನ ಎರಡು ಲಕ್ಷದ ಮೂರು ಸಾವಿರದ ನಾನೂರ ತೊಂಬತ್ತೆರಡು ಮಂದಿಗೆ ಬೂಸ್ಟರ್ ಡೋಸ್ ನೀಡಲು ಆರೋಗ್ಯ ಇಲಾಖೆ ಮುಂದಾಗಿದೆ ಎಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಸೋಮಣ್ಣ ತಿಳಿಸಿದರು.

ಪಟ್ಟಣದ ಪತ್ರಕರ್ತರ ಸಂಘದಲ್ಲಿ ಸಂಘದ ಸದಸ್ಯರಿಗೆ ಮತ್ತು ಕುಟುಂಬ ವರ್ಗದವರಿಗೆ ಬೂಸ್ಟರ್ ಡೋಸ್ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕಿನಲ್ಲಿ ಮೊದಲ ಮತ್ತು ಎರಡನೇ ಕೋವಿಡ್ ಲಸಿಕೆಯನ್ನು 223467 ಮಂದಿಗೆ ನೀಡಬೇಕಾಗಿದ್ದು, ಮೊದಲ ಡೋಸ್ ಅನ್ನು 233007 ಮಂದಿಗೆ, 2ನೇ ಡೋಸ್ ಅನ್ನು 225787 ಮಂದಿಗೆ ನೀಡಲಾಗಿದೆ. ಸರಾಸರಿ ಶೇ.104 ರಷ್ಟು ಆಗಿದೆ ಎಂದರು.

ಸರ್ಕಾರದ ನಿಯಮಾನುಸಾರ ಬೂಸ್ಟರ್ ಡೋಸ್ ಅನ್ನು 203492 ಜನರಿಗೆ ಹಾಕುವ ಗುರಿ ಹೊಂದಿದ್ದು, ಕಳೆದ ಒಂದು ವಾರದಿಂದ ಇಲ್ಲಿಯವರೆಗೂ 9797 ಜನರಿಗೆ ಲಸಿಕೆ ಹಾಕಲಾಗಿದೆ. ಉಳಿದವರಿಗೆ ಆಯಾ ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಉಪಕೇಂದ್ರಗಳಲ್ಲಿ ಬೂಸ್ಟರ್ ಡೋಸ್ ನೀಡುವ ಕಾರ್ಯ ಚಾಲ್ತಿಯಲ್ಲಿರುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದು ಕೋವಿಡ್ ಮಹಾಮಾರಿ ತಡೆಗಟ್ಟಿ ತಮ್ಮ ಕುಟುಂಬದವರ ಆರೋಗ್ಯ ರಕ್ಷಿಸಿಕೊಳ್ಳುವಂತೆ ಕೋರಿದರು.

ಕೋವಿಡ್ ಲಸಿಕೆ ಆರೋಗ್ಯದ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರಲ್ಲ. ಅನೇಕ ಸೋಂಕನ್ನು ತಡೆಗಟ್ಟುವ ಲಸಿಕೆ ಇದಾಗಿದೆ. ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಸರ್ಕಾರದ ಸೌಲಭ್ಯಗಳನ್ನು ಪಡೆಯಬೇಕು. ತಾಲೂಕು ವ್ಯಾಪ್ತಿಯಲ್ಲಿ ಆರೋಗ್ಯ ವಿಷಯವಾಗಿ ತಾಲೂಕು ವೈದ್ಯಾಧಿಕಾರಿ ಟಿ.ರವಿಕುಮಾರ್, ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಉಸ್ತುವಾರಿಯನ್ನು ಸೋಮಣ್ಣ ನಿರ್ವಹಿಸಲಿದ್ದಾರೆ ಎಂದರು. ಶುಶ್ರೂಷಾಧಿಕಾರಿ ಅಂಬಿಕಾ ಮಾತನಾಡಿ, ಪ್ರತಿದಿನ ಸಾರ್ವಜನಿಕರಿಗೆ ಬೂಸ್ಟರ್ ಡೋಸ್ ಕೊಡಲಾಗುವುದು. ಸಾರ್ವಜನಿಕರು ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಲಸಿಕೆ ಪಡೆಯಬಹುದು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಪತ್ರಕರ್ತ ಸಂಘದ ಅಧ್ಯಕ್ಷ ಸತೀಶ್ ಬಿ.ಆರಾಧ್ಯ, ಉಪಾಧ್ಯಕ್ಷ ಮಂಜುಕೋಟೆ, ಸಹ ಕಾರ್ಯದರ್ಶಿ ಬೀಚನಹಳ್ಳಿ ಮಂಜು, ಸದಸ್ಯರಾದ ರವಿಕುಮಾರ್ ಆರಾಧ್ಯ, ಜಿ.ರವಿಕುಮಾರ್, ಚಿಕ್ಕಣ್ಣೇಗೌಡ, ಪ್ರಮೋದ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರವಿರಾಜ್, ಶುಶ್ರೂಷಾಧಿಕಾರಿ ಅಂಬಿಕಾ, ಸಮುದಾಯ ಆರೋಗ್ಯಾಧಿಕಾರಿಗಳಾದ ವಿದ್ಯಾಶ್ರೀ, ದೇವಿಂದ್ರಮ್ಮ, ರೀನಾಲೋಬೋ ಇತರರಿದ್ದರು.

## ಹುಣಸೂರು: ಬ್ಯಾಂಕ್ ಆಫ್ ಬರೋಡಾ ಸಂಸ್ಥಾಪನಾ ದಿನಾಚರಣೆ



ಹುಣಸೂರು, ಜು.21– ನಗರದ ಬ್ಯಾಂಕ್ ಆಫ್ ಬರೋಡಾ ಶಾಖೆಯಲ್ಲಿ 115ನೇ ಸಂಸ್ಥಾಪನಾ ದಿನಾಚರಣೆಯನ್ನು ಬ್ಯಾಂಕ್ ಗ್ರಾಹಕರೊಂದಿಗೆ ಆಚರಿಸಲಾಯಿತು.

ಶಾಖಾ ವ್ಯವಸ್ಥಾಪಕ ಎಸ್.ಸಿ.ವೈಕುಂಠಯ್ಯ ಮಾತನಾಡಿ, ಬ್ಯಾಂಕ್ ಆಫ್ ಬರೋಡಾ ಪ್ರಾರಂಭವಾಗಿ 115 ವರ್ಷಗಳಾಗಿದ್ದು, ಮೊದಲಿನಿಂದಲೂ ಗ್ರಾಹಕರಿಗೆ ಉತ್ತಮ ಹಾಗೂ ಜನಪರ ಯೋಜನೆ ನೀಡುವ ಮೂಲಕ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು. ಪ್ರಸ್ತುತ ಬ್ಯಾಂಕಿನಲ್ಲಿ ಹಲವು ಯೋಜನೆಗಳಿದ್ದು, ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಸಾಲ ನೀಡಲಾಗುತ್ತಿದೆ. ಅಲ್ಲದೆ ವಿಶೇಷವಾಗಿ ರೈತರಿಗೆ, ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಹಾಗೂ ಉದ್ಯಮಿಗಳಿಗೆ, ಸರ್ಕಾರಿ ನೌಕರರಿಗೆ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ ಎಂದರು.

ಈ ವೇಳೆ ಸಹಾಯಕ ವ್ಯವಸ್ಥಾಪಕ ಯತೀಶ್, ಕ್ಷೇತ್ರಾಧಿಕಾರಿ ಪ್ರತಾಪ್, ವಿಶೇಷ ಸಹಾಯಕ ಪನ್ನೀರ್ ಸೆಲ್ವಂ, ಕೃಷ್ಣತೇಜ, ಶಿವಕುಮಾರ್, ತಿರುಮಲ ಶಿವರಾಮ್, ನಾರಾಯಣ್, ಸಿಬ್ಬಂದಿ ಹಾಗೂ ಗ್ರಾಹಕರು ಉಪಸ್ಥಿತರಿದ್ದರು.

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಜು.21– ಸ್ವಾತಂತ್ರ್ಯ ಸೇನಾನಿ ಸಂಗೊಳ್ಳಿ ರಾಯಣ್ಣರ 221ನೇ ಜಯಂತಿ ಮತ್ತು 75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ತಾಲೂಕು ಕುರುಬರ ಸಂಘವು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಿದೆ. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.95ಕ್ಕಿಂತ ಹೆಚ್ಚು ಅಂಕ ಪಡೆದ ಕುರುಬ ಸಮುದಾಯದ ವಿದ್ಯಾರ್ಥಿಗಳು ತಾಲೂಕು ಕುರುಬ ಸಂಘಕ್ಕೆ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಜು.31 ಅರ್ಜಿ ಸಲ್ಲಿಸಲು ಕಡೆ ದಿನ. ಅರ್ಜಿದಾರರು ಅರ್ಜಿ ಜೊತೆ ಅಂಕಪಟ್ಟಿ, ಜಾತಿ ದೃಢೀಕರಣ ಪತ್ರ ಮತ್ತು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಸಲ್ಲಿಸುವಂತೆ ಸಂಘದ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದೆ.

## ಟಿ.ದೊಡ್ಡಪುರ ಗ್ರಾಮ ಪಂಚಾಯಿತಿ ‘ಕೈ’ ಪಾಲು

### ಅಧ್ಯಕ್ಷೆಯಾಗಿ ಚಿಕ್ಕತಾಯಮ್ಮ ಅವಿರೋಧ ಆಯ್ಕೆ



ತಿ.ನರಸೀಪುರ, ಜು.21– ತಾಲೂಕಿನ ಟಿ.ದೊಡ್ಡಪುರ ಗ್ರಾಮಪಂಚಾಯಿತಿ ಅಧ್ಯಕ್ಷ ಸ್ಥಾನ ಕಾಂಗ್ರೆಸ್ ಪಾಲಾಗಿದೆ ಗುರುವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷೆಯಾಗಿ ದೊಡ್ಡನಹುಂಡಿ ಚಿಕ್ಕತಾಯಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಾಮಾನ್ಯ ವರ್ಗ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯೆ ಚಿಕ್ಕತಾಯಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯೂ ಆದ ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಆಂತರಿಕ ಒಪ್ಪಂದದ ಪ್ರಕಾರ ನಿಕಟಪೂರ್ವ ಅಧ್ಯಕ್ಷೆ ಆರ್.ಭಾರತಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗುರುವಾರ ಚುನಾವಣೆ ನಿಗದಿಯಾಗಿತ್ತು. ಚುನಾವಣೆಯಲ್ಲಿ ಗ್ರಾಪಂನ ಒಟ್ಟು 16 ಸದಸ್ಯರ ಪೈಕಿ ನಿಕಟಪೂರ್ವ ಅಧ್ಯಕ್ಷೆ ಆರ್.ಭಾರತಿ, ಉಪಾಧ್ಯಕ್ಷ ಪುಟ್ಟಸ್ವಾಮಿ, ಜಯ ಬಸವಣ್ಣ, ಬಸಮ್ಮಣ್ಣಿ, ನಿಜಗುಣ, ರಾಜಮ್ಮ, ಆರ್.ಮಾದೇಶ್, ಎಂ.ರಾಜೇಶ, ಮಂಜುಳ, ಪ್ರತಾಪ್, ಮಹದೇವಮ್ಮ ಚುನಾವಣೆಯಲ್ಲಿ ಭಾಗವಹಿಸಿ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ಸಲ್ಲಿಸಿದರು. ಸದಸ್ಯರಾದ ಎಸ್.ಗುರುಪ್ರಸಾದ್, ಸುಕನ್ಯಾ, ರಾಜೇಶ ಹಾಗೂ ರೇಖಾ ಚುನಾವಣೆಯಿಂದ ದೂರ ಉಳಿದಿದ್ದರು. ನೂತನ ಅಧ್ಯಕ್ಷೆ ಚಿಕ್ಕತಾಯಮ್ಮ ಮಾತನಾಡಿ, ಸರ್ವ ಸದಸ್ಯರ ಬೆಂಬಲದಿಂದ ಆಯ್ಕೆಯಾಗಿರುವ ನಾನು ಸದಸ್ಯರ ಸಲಹೆ, ಸಹಕಾರ ಪಡೆದು ಪಂಚಾಯಿತಿಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಗಮನಹರಿಸುತ್ತೇನೆ ಎಂದರು.

ಮುಖಂಡ ದೊಡ್ಡನಹುಂಡಿ ನಂಜುಂಡಸ್ವಾಮಿ ಮಾತನಾಡಿ, ಅತ್ಯಂತ ತಳ ಸಮುದಾಯವಾದ ಸವಿತಾ ಸಮಾಜದವರನ್ನು ಗುರುತಿಸಿ ಅಧ್ಯಕ್ಷ ಗಾದಿಗೆ ಆಯ್ಕೆ ಮಾಡಲಾಗಿದೆ. ಸಣ್ಣ ಸಮುದಾಯ ಗುರುತಿಸಿ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ಏಕೈಕ ಪಕ್ಷ ಕಾಂಗ್ರೆಸ್. ಸವಿತಾ ಸಮಾಜ ಜಿಲ್ಲೆಯ ಯಾವುದೇ ತಾಲೂಕಿನಲ್ಲಿ ಅಧಿಕಾರ ಹಿಡಿದ ಉದಾಹರಣೆ ಇಲ್ಲ. ಹಾಗಾಗಿ ಅಧ್ಯಕ್ಷರ ಆಯ್ಕೆಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತು ಯುವ ಮುಖಂಡ ಸುನೀಲ್ ಬೋಸ್ ಪಾತ್ರ ಬಹಳ ದೊಡ್ಡದು. ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಬೆಂಬಲಿಸಲಾಗುವುದು ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಎಸ್ಸಿ, ಎಸ್ಟಿ ಗುತ್ತಿಗೆದಾರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಕೆ.ಮಲ್ಲು, ಗುರು ಸಿದ್ದಪ್ಪ, ಎಂ.ಮಾದೇಗೌಡ, ದೊಡ್ಡಪುರ ಚಂದ್ರು, ಮೂರ್ತಿ, ಕೆಂಪರಾಜು, ನಿವೃತ್ತ ಲೆಕ್ಕಾಧಿಕಾರಿ ಎಂ.ಜೆ.ಶಿವಸ್ವಾಮಿ, ನವೀನ, ಸೋಮಣ್ಣ, ಮೂಗೂರು ಕುಮಾರಸ್ವಾಮಿ, ಗುರುಸಿದ್ದಪ್ಪ ಪುಟ್ಟಬುದ್ಧಿ, ಪಿಡಿಓ ಎಂ.ರಾಜಶೇಖರಮೂರ್ತಿ, ಕಾರ್ಯದರ್ಶಿ ಸಿದ್ದಪ್ಪ, ಬಿಲ್ ಕಲೆಕ್ಟರ್ ಸಂಕೇಶ್, ಕಚೇರಿ ಸಹಾಯಕರಾದ ಆರ್.ಮಹದೇವಯ್ಯ, ಪ್ರಶಾಂತ್, ನಟರಾಜು ಮತ್ತಿತರರಿದ್ದರು.



## ಗೊರಹಳ್ಳಿ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಬೆಟ್ಟದಪುರ, ಜು.21– ಇಲ್ಲಿಗೆ ಸಮೀಪದ ಗೊರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಕುಮಾರಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ಸೋಮಾಚಾರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಭಾಸ್ಕರ್ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಈ ವೇಳೆ ನಿರ್ದೇಶಕರಾದ ಹೇಮಾ, ನಾಗರತ್ನ, ಪದ್ಮಮ್ಮ, ಜಿ.ಆರ್.ವಸಂತ, ಲೀಲಾವತಿ, ಮುಖಂಡರಾದ ಸೋಮೇಗೌಡ, ಹರೀಶ್, ಪುನೀತ್, ಜಿ.ಜಿ.ವಸಂತ್, ರಾಜನಾಯಕ, ಶಿವಕುಮಾರ್, ಉಮೇಶ್, ಯೋಗೇಶ್, ಪ್ರದೀಪ್, ಹರೀಶ್, ಮಂಜು, ನಟರಾಜ್, ಕುಮಾರ್, ಗೋವಿಂದ ಶೆಟ್ಟರ್, ಭೈರಶೆಟ್ಟಿ, ಪ್ರದೀಪ್, ಕಾರ್ಯದರ್ಶಿ ಗಣೇಶ್ ಸಿಬ್ಬಂದಿ ಪ್ರಸನ್ನ, ಮಹೇಶ್ ಸೇರಿದಂತೆ ಗ್ರಾಮಸ್ಥರಿದ್ದರು.

## ನೀಲಯ್ಯ ನಿಧನ



ಹುಣಸೂರು, ಜು.21– ನಗರದ ವಕೀಲ ಪುಟ್ಟರಾಜು ಅವರ ತಂದೆ ಲೋಕೋಪಯೋಗಿ ಇಲಾಖೆ ನಿವೃತ್ತ ನೌಕರ ನೀಲಯ್ಯ (68)ಗುರುವಾರ ಮಧ್ಯಾಹ್ನ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಜು.22 ರಂದು ನಗರದ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ನಡೆಯಲಿದೆ.

## ಸಾರ್ವಜನಿಕ ಪ್ರಕಟಣೆ

ಈ ಕೆಳಗೆ ಅನುಸೂಚಿಯಲ್ಲಿ ವರ್ಣಿಸಿರುವ ಮೈಸೂರು ತಾಲ್ಲೂಕು ಹಾಗೂ ಜಿಲ್ಲೆ, ಕಸಬಾ ಹೋಬಳಿ, ಕಾಮನಕೆರೆಹುಂಡಿ ಗ್ರಾಮದ ಸರ್ವೆ ಸಂ.120 ರ 1 ಎಕರೆ 09 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮೈಸೂರಿನ 11ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಿವಂಗತ ಚನ್ನಪ್ಪನವರ ಮಗ ನನ್ನ ಕಕ್ಷಿದಾರರಾದ ಶ್ರೀ ಕೆ.ಸಿ.ಹೇಮೇಶ್, ಕಾಮನಕೆರೆಹುಂಡಿ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು ಹಾಗೂ ಜಿಲ್ಲೆ, ಇವರು ಅಸಲು ದಾವಾ ಸಂ. 219/2019 ಎಂಬ ದಾವೆಯನ್ನು ಹೂಡಿದ್ದು, ಸದರಿ ದಾವೆಯ ವಿಚಾರಣೆ ಚಾಲ್ತಿಯಲ್ಲಿರುತ್ತದೆ. ದಾವಾ ವಿಚಾರಣೆ ಚಾಲ್ತಿಯಲ್ಲಿ ಇರುವಾಗ ಯಾವುದೇ ವ್ಯಕ್ತಿಯು ಅನುಸೂಚಿ ಸ್ವತ್ತಿನ ವಿಚಾರದಲ್ಲಿ ಯಾವುದೇ ರೀತಿಯ ವ್ಯವಹಾರ ಮಾಡಿದಲ್ಲಿ ಅದರಿಂದ ಆಗುವ ಎಲ್ಲಾ ಆಗು ಹೋಗುಗಳಿಗೆ ಅವರೇ ಜವಾಬ್ದಾರರಾಗಿರುತ್ತಾರೆ. ಹಾಗೂ ಅಂತಹ ವ್ಯವಹಾರಗಳಿಂದ ನನ್ನ ಕಕ್ಷಿದಾರರ ಹಕ್ಕುಗಳಿಗೆ ಯಾವುದೇ ಚ್ಯುತಿ ಬರುವುದಿಲ್ಲ ಮತ್ತು ಅವರು ಅದಕ್ಕೆ ಹೊಣೆಗಾರರಾಗುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ಎಚ್ಚರಿಸುತ್ತಾರೆ.

**ಅನುಸೂಚಿ**

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ನಂಬರ್ 120 ರ 1 ಎಕರೆ 09 ಗುಂಟೆ ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಬಸವಲಿಂಗಪ್ಪ ಮತ್ತು ಹೇಮೇಶ್‌ರವರ ಜಮೀನು, ಪಶ್ಚಿಮಕ್ಕೆ: ವಿಜಯೇಂದ್ರ ರವರ ಜಮೀನು, ಉತ್ತರಕ್ಕೆ: ಗೋಸಪ್ಪನವರ ಜಮೀನು, ದಕ್ಷಿಣಕ್ಕೆ: ರಘು ರವರ ಜಮೀನು.

Sd/- Rohit Subbayya,
BAL., LL.B., Advocate
No.1230/A, CH 36/A, 2nd Cross, (Behind Ramamandira)
Krishnamurthypuram, Chamaraja Mohalla, Mysore. 570004

## ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಹುಣಸೂರು ತಾಲ್ಲೂಕು, ಹುಣಸೂರು.

ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಆವರಣ, ಶಿಕ್ಷಕರ ಭವನ ಹಿಂಭಾಗ ಹುಣಸೂರು, ಮೈಸೂರು ಜಿಲ್ಲೆ.
ದೂರವಾಣಿ ಸಂಖ್ಯೆ: 08222-253719 E-mail: tswohunbn123@gmail.com

ಸಂ.:ಸನಿ/ಸಕಇ/ಸಿಬ್ಬಂದಿ/ಹು/ಸಿಆರ್/1/2022-23 ದಿನಾಂಕ: 18.07.2022

### ಅಲ್ಪಾವಧಿ ಟೆಂಡರ್ ಪ್ರಕಟಣೆ

Swift Dzire Tours (Yellow Board, AC Vehicle ರಹದಾರಿ ಪಡೆದಿರುವ) ವಾಹನ ಮಾಲೀಕರು / ಸಂಸ್ಥೆಯಿಂದ ದಿನಾಂಕ 01/08/2022 ರಿಂದ 31/03/2023 ರವರೆಗೆ 08 ತಿಂಗಳು ಅವಧಿಗೆ ಮಾಹೆಯಾನ ವಾಹನವನ್ನು ಬಾಡಿಗೆ ಆಧಾರದ ಮೇಲೆ ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ವಾಹನ ಮಾಲೀಕರು / ಸಂಸ್ಥೆಯವರು ಅಲ್ಪಾವಧಿ ಟೆಂಡರ್‌ನಲ್ಲಿ ಭಾಗವಹಿಸಬಹುದು. ವಾಹನ ಮಾಲೀಕರು / ಸಂಸ್ಥೆಯವರು ದಿ. 18/07/2022 ರಿಂದ ದಿ. 28/07/2022 ರವರೆಗೆ ಈ ಕಛೇರಿಯಿಂದ ಅರ್ಜಿಗಳನ್ನು ಪಡೆದು ದಾಖಲಾತಿಗಳೊಂದಿಗೆ ದಿನಾಂಕ: 29/07/2022 ರಂದು ಸಂಜೆ 4.00 ಗಂಟೆಯೊಳಗೆ ಸಲ್ಲಿಸಬಹುದಾಗಿದೆ.

| | | |
|---|---|---|
| 01 | ಇಲಾಖೆ ನಿಗದಿಪಡಿಸಿದ ಕನಿಷ್ಠ ಟೆಂಡರ್ ಮೊತ್ತ ರೂ. | 3,20,000/- (ಮೂರು ಲಕ್ಷದ ಇಪ್ಪತ್ತು ಸಾವಿರ ರೂ.ಗಳು ಮಾತ್ರ) 08 ತಿಂಗಳ ಅವಧಿಯವರೆಗೆ. |
| 02 | ಇ.ಎಂ.ಡಿ ಮೊತ್ತ ರೂ. | ರೂ. 8000/- (ಎಂಟು ಸಾವಿರ ರೂ.ಗಳನ್ನು) ಸಹಾಯಕ ನಿರ್ದೇಶಕರು ಗ್ರೇಡ್-2, ಸಮಾಜ ಕಲ್ಯಾಣ ಇಲಾಖೆ ಹುಣಸೂರು ರವರ ಹೆಸರಿಗೆ ಡಿ.ಡಿ. ತರುವುದು. |
| 03 | ಟೆಂಡರ್ ತೆರೆಯುವ ದಿನಾಂಕ ಹಾಗೂ ಸಮಯ | ದಿನಾಂಕ: 30/07/2021 ರಂದು ಬೆಳಗ್ಗೆ 11.00 ಗಂಟೆ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ಹುಣಸೂರಿನಲ್ಲಿ ಟೆಂಡರ್ ಲಕೋಟೆಯನ್ನು ತೆರೆಯಲಾಗುವುದು. |

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ :- 08222-253719 ಅಥವಾ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
ಸಹಿ/-ಸಹಾಯಕ ನಿರ್ದೇಶಕರು ಗ್ರೇಡ್-2
ಸಮಾಜ ಕಲ್ಯಾಣ ಇಲಾಖೆ, ಹುಣಸೂರು.



॥ ಬುದ್ಧಂ ಶರಣಂ ಗಚ್ಛಾಮಿ ॥

## ಪುಣ್ಯಾನುಮೋದನೆ ಕಾರ್ಯಕ್ರಮ

108 ವರುಷ ಬದುಕಿ ಬಾಳಿದ
ಸರ್ವಜನಾಂಗದ ಶಾಂತಿಯ ತೋಟವಾಗಿದ್ದ
**ದೊಡ್ಡವ್ವ ಕಾಳಮ್ಮ**
ಬಾಳೆ ಎಲೆ ಮಾದಯ್ಯ ನವರ ಕುಟುಂಬ
ಬೆಂಡರವಾಡಿ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು



ಡಾ॥ ಜಿ. ಪರಮೇಶ್ವರ
ಮಾಜಿ ಉಪಮುಖ್ಯಮಂತ್ರಿಗಳು
ಅವರ ಸಾಂತ್ವಾನದೊಂದಿಗೆ

ನಮ್ಮೊಡನೆ
ಇವರಿಂದ ಚಾಲನೆ
ಡಾ॥ ಬಿ.ಎಸ್. ಮಂಜುನಾಥಸ್ವಾಮಿ ಕೆ.ಎ.ಎಸ್.
ಅಪರ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ
ಡಾ॥ ಮಳವಳ್ಳಿ ಮಹದೇವಸ್ವಾಮಿ
ಇವರಿಂದ ಮಲೆ ಮಹದೇಶ್ವರ ಕಥಾಸಾರ
ಡಾ॥ ಸುಭಾಷ್‌ಭರಣಿ ಐ.ಪಿ.ಎಸ್.(ನಿ.)
ಬೌದ್ಧ ಬಿಕ್ಕು ಮನೋರಕ್ಖಿತ ಭಂತೇಜಿ ಜೇತವನ
ಪ್ರೊ॥ ಪಿ.ವಿ ನಂಜರಾಜ ಅರಸು ಇತಿಹಾಸ ತಜ್ಞರು
ಡಾ॥ ಲಕ್ಷಣ್ ದಾಸ್ ರಾಷ್ಟ್ರಪ್ರಶಸ್ತಿ ಪುರಸ್ಕೃತರು
ಹೆಚ್. ಜನಾರ್ಧನ್ ಜನ್ನಿ ರಂಗಕರ್ಮಿಗಳು
ಪಿಚ್ಚಳ್ಳಿ ಶ್ರೀನಿವಾಸ್ ಜಾನಪದ ಗಾಯಕರು
ಕೆ.ಆರ್. ಗೋಪಾಲಕೃಷ್ಣ ನೆಲೆ ಹಿನ್ನೆಲೆ
ಹರಿಹರ ಆನಂದಸ್ವಾಮಿ ದ.ಸಂ.ಸ ಚಳುವಳಿಗಾರರು
ಡಾ. ಲಕ್ಷ್ಮಮ್ಮ ಖನಿಜ ಮತ್ತು ಭೂ ವಿಜ್ಞಾನ ಅಧಿಕಾರಿಗಳು

ದೊಡ್ಡವ್ವ ಕಾಳಮ್ಮ ರವರು 12-07-2022 ರಂದು ಇಹಲೋಕ ತ್ಯಜಿಸಿದರು ಶ್ರೀಯುತರು ಸಾಮಾಜಿಕ ಬಾಂದವ್ಯದ ಅಧ್ವರ್ಯರು. 23.07.2022 ಶನಿವಾರ ಸಂಜೆ 6.00ಕ್ಕೆ ಬೆಂಡರವಾಡಿ ಗ್ರಾಮದಲ್ಲಿ ಪರಿನಿರ್ವಾಣದ ಕಾರ್ಯಕ್ಕೆ ಆಗಮಿಸಬೇಕಾಗಿ ವಿನಂತಿ.

ಆಗಮನ ನಿರೀಕ್ಷೆಯಲ್ಲಿ
ಪ್ರೊ. ಮಾದೇವ್ ಭರಣಿ
ಬೆಂಡರವಾಡಿ